ಅನುಭವಿ ಹೋಟೆಲ್ ಮ್ಯಾನೇಜ್‌ಮೆಂಟ್/ಹಾಸ್ಪಿಟಾಲಿಟಿ/ ಪ್ರವಾಸೋದ್ಯಮ ವೃತ್ತಿಪರ ಪದವೀಧರರಿಗೆ ನೇರ ಸಂದರ್ಶನ
ಭಾರತೀಯ ರೈಲ್ವೆ ಕ್ಯಾಟರಿಂಗ್ ಮತ್ತು ಟೂರಿಸಂ ಕಾರ್ಪೊರೇಷನ್ ಲಿಮಿಟೆಡ್ (IRCTC Ltd), ದಕ್ಷಿಣ ವಲಯದ ಅಡಿಯಲ್ಲಿ "ಹಾಸ್ಪಿಟಾಲಿಟಿ ಮಾನಿಟರ್" ಮತ್ತು "ಟೂರಿಸಂ ಮಾನಿಟರ್" ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಲು ಅನುಭವಿ ಹೋಟೆಲ್ ನಿರ್ವಹಣೆ/ಆತಿಥ್ಯ/ಪ್ರವಾಸೋದ್ಯಮ ವೃತ್ತಿಪರ ಪದವೀಧರರು ಬೇಕಾಗಿದ್ದಾರೆ. ವಿದ್ಯಾರ್ಹತೆಯ ವಿವರಗಳು/ಅನುಭವ/ಇತರೆ ನಿಯಮಗಳು ಮತ್ತು ಷರತ್ತುಗಳು/ ಸಂದರ್ಶನದ ದಿನಾಂಕ ಮತ್ತು ಸ್ಥಳಕ್ಕಾಗಿ ಕಂಪನಿ ವೆಬ್‌ಸೈಟ್‌ಗೆ ಭೇಟಿ ನೀಡಿ: https://www.irctc.com

‘ಮುಂಬೈ, ಹೈದರಾಬಾದ್‌ಗೂ ವಂದೇ ಭಾರತ್ ರೈಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಮುಂಬೈ, ಬೆಂಗಳೂರು- ಹೈದರಾಬಾದ್ ಮಧ್ಯೆ ವಂದೇ ಭಾರತ್ ರೈಲು ಸಂಚಾರ ಶೀಘ್ರ ಆರಂಭವಾಗಲಿದೆ ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ‘ಕಾಯಕ ಯೋಗಿ’ ಮತ್ತು ‘ನೆಮ್ಮದಿಯ ನೆಲೆ, ಅಭಿವೃದ್ಧಿಯ ಬಲೆ’ ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಈಗಾಗಲೇ ರೈಲ್ವೆ ಸಚಿವರು ಮತ್ತು ಕಾರ್ಯದರ್ಶಿಗೆ ರಾಜ್ಯ ಸರ್ಕಾರ ಪತ್ರ ಬರೆದಿದೆ. ರೈಲು ಸಂಚಾರ ಆರಂಭವಾದರೆ ರಾಜ್ಯದ ಜನರಿಗೆ ಅನುಕೂಲವಾಗಲಿದೆ ಎಂದರು.

ವಿಜಯಪುರ ಮತ್ತು ಹಾಸನ ವಿಮಾನ ನಿಲ್ದಾಣಗಳು ಶೀಘ್ರ ಕಾರ್ಯಾರಂಭ ಮಾಡಲಿವೆ. ಇಂಡಿಗೋ ವಿಮಾನ ಸಂಸ್ಥೆ ಜತೆ ಒಪ್ಪಂದ ಮಾಡಿಕೊಂಡಿದ್ದು, ಶಿವಮೊಗ್ಗ–ಬೆಂಗಳೂರು ಮಧ್ಯೆ ಹಾರಾಟ ಆರಂಭವಾಗಲಿದೆ. ಮೈಸೂರು ವಿಮಾನ ನಿಲ್ದಾಣದಿಂದ ಬೋಯಿಂಗ್ ವಿಮಾನ ಕಾರ್ಯಾರಂಭ ಮಾಡಲಿದೆ. ಧರ್ಮಸ್ಥಳದಲ್ಲಿ ಕಿರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ ಎಂದು ವಿವರ ನೀಡಿದರು.

ಮುಂದಿನ ಎರಡು ತಿಂಗಳಲ್ಲಿ ಒಂದು ಲಕ್ಷ ಮನೆಗಳನ್ನು ಜನರಿಗೆ ಒದಗಿಸಲಾಗುವುದು. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ರಾಜೀವ್ ಗಾಂಧಿ ವಸತಿ ನಿಗಮದಡಿ ಐದು ಲಕ್ಷಕ್ಕೂ ಹೆಚ್ಚು ಮನೆಗಳನ್ನು ಜನರಿಗೆ ಮಂಜೂರು ಮಾಡಿದೆ. ಮೂರೂವರೆ ಲಕ್ಷ ಮನೆಗಳನ್ನು ವಿತರಿಸಲಾಗಿದೆ. ಒಂದು ಲಕ್ಷ ಮನೆಗಳ ನಿರ್ಮಾಣ ಕಾರ್ಯ ವಿವಿಧ ಹಂತದಲ್ಲಿವೆ. ಎರಡು ಲಕ್ಷಕ್ಕೂ ಹೆಚ್ಚು ಮನೆಗಳ ನಿರ್ಮಾಣ ಕಾರ್ಯಕ್ಕೆ ಒಪ್ಪಿಗೆ ನೀಡಲಾಗಿದೆ. ಗ್ರಾಮೀಣ ಭಾಗಗಳಲ್ಲಿ ಆರು ಸಾವಿರ ಎಕರೆಯಲ್ಲಿ ನಿವೇಶನಗಳನ್ನು ನಿರ್ಮಿಸಿ ವಿತರಿಸಲಾಗಿದೆ. ಮೂರು ಲಕ್ಷಕ್ಕೂ ಹೆಚ್ಚು ಜನರಿಗೆ ಆಸ್ತಿ ಹಂಚಿಕೆ ಪತ್ರ ನೀಡಲಾಗಿದೆ. ಬೆಂಗಳೂರು ನಗರದಲ್ಲಿ 100ಕ್ಕೂ ಹೆಚ್ಚು ಉದ್ಯಾನ ಅಭಿವೃದ್ಧಿ ಪಡಿಸಲಾಗಿದೆ ಎಂದರು.

ವಿಧಾನಸೌಧದಲ್ಲಿ ಬುಧವಾರ ‘ಕಾಯಕ ಯೋಗಿ’ ಮತ್ತು ‘ನೆಮ್ಮದಿಯ ನೆಲೆ, ಅಭಿವೃದ್ಧಿಯ ಬಲೆ’ ಪುಸ್ತಕಗಳನ್ನು ವಸತಿ ಸಚಿವ ವಿ.ಸೋಮಣ್ಣ ಬಿಡುಗಡೆ ಮಾಡಿದರು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಎಚ್‌ಬಿ ಆಯುಕ್ತೆ ಕವಿತಾ ಮಣ್ಣಿಕೇರಿ, ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್ ಇದ್ದಾರೆ.

ಇದ್ದುಪಡಿ

ದಿನಾಂಕ: 25–03–2023 ರ ಪ್ರಜಾವಾಣಿ ದಿನಪತ್ರಿಕೆಯ ಪುಟ ಸಂಖ್ಯೆ 9 ರಲ್ಲಿ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಬೀದರಿನ ಅನುದಾನಿತ ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿಗಾಗಿ ಪ್ರಕಟಿಸಿದ ಜಾಹಿರಾತು “ಕಲ್ಯಾಣ ಕರ್ನಾಟಕ ಪ್ರಾಂತ್ಯದ ಅಭ್ಯರ್ಥಿಗಳಿಂದ ಮಾತ್ರ ಅರ್ಜಿ ಆಹ್ವಾನ ಮಾಡಲಾಗಿದೆ” ಎಂದು ಓದಿಕೊಳ್ಳತಕ್ಕದ್ದು.

ಸಹಿ/–
ಕಾರ್ಯದರ್ಶಿ
ಕ.ರಾ.ಶಿ. ಸಂಸ್ಥೆ, ಬೀದರ್

ಅಪಘಾತ: ಯುವತಿ ಸಾವು

ದಾಬಸ್‌ಪೇಟೆ: ರಾಜ್ಯ ಹೆದ್ದಾರಿ–3ರ ಮಧುಗಿರಿ ಮುಖ್ಯರಸ್ತೆಯ ಲಕ್ಕೂರು ಗ್ರಾಮದ ಬಳಿ ಕ್ರಷರ್ ಲಾರಿ ಡಿಕ್ಕಿ ಹೊಡೆದು ನರಸೀಪುರದ ಎನ್.ಆರ್. ಹೇಮಾವತಿ ಎಂಬುವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ದಾಬಸ್‌ಪೇಟೆಗೆ ಹೋಗಿ ಸಂತೆಯಲ್ಲಿ ತರಕಾರಿ ತೆಗೆದುಕೊಂಡು ನರಸೀಪುರದ ಕಡೆ ದ್ವಿಚಕ್ರ ವಾಹನದಲ್ಲಿ ಬರುವಾಗ ಹಿಂದಿನಿಂದ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದಿದೆ. ಈ ಲಾರಿಯು ಮಾಕೇನಹಳ್ಳಿ ಹತ್ತಿರದ ಸಿಎನ್‌ಸಿ ಕ್ರಷರ್ ಕಂಪನಿಗೆ ಸೇರಿದೆ. ಲಾರಿಯು ಗುದ್ದಿದ ರಭಸಕ್ಕೆ ಸ್ಕೂಟರ್ ಸಮೇತ ಡಾಂಬರ್ ರಸ್ತೆಯ ಮೇಲೆ ಬಿದ್ದ ಪರಿಣಾಮ ತಲೆಗೆ ಪೆಟ್ಟಾಗಿ, ಯುವತಿ ಸ್ಥಳದಲ್ಲಿಯೇ ಮೃತಪಟ್ಟರು ಎಂದು ಸ್ಥಳೀಯರು ಹೇಳಿದರು.

ಹೇಮಾವತಿ

ಅಪಘಾತದ ನಂತರ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಲಾರಿ ಚಾಲಕನನ್ನು ದಾಬಸ್‌ಪೇಟೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

*Finance Scheme offers are available through select preferred finance partners on select models for select profiles of customers at their sole discretion and are subject to Finance Company Policy. Finance Schemes available at select Dealerships till 31st March'23 only & can be withdrawn at any time without prior notice. No two offers can be clubbed together. All features may not be part of all variants. Product shown in the picture may vary from the actual product available in the market. Accessories shown in the product are not part of the standard equipment.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397; Haiku Honda - **DOMLUR:** 49656565, 9342432156; **INDIRANAGAR:** 9343796289, 080 - 41133737; Dhruvdesh Honda - **MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 49499299, 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 8105597877, 9686573013; **GUNJUR:** 9606450642, 9606450641; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; Namma Honda - **CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; SLN Honda - **SHIDLAGATTA:** 9986160961; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030; **KANAKAPURA:** 9606036053; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 9731414444.

For Bulk/Institutional enquiries, please write us at: institutionalsales@honda2wheelersindia.com

35.40 ಕಿಲೋ ಮೀಟರ್ ಉದ್ದದ ಮಾರ್ಗ: ₹15 ಸಾವಿರ ಕೋಟಿ ಮೊತ್ತದ ಯೋಜನೆ

ಸರ್ಜಾಪುರ ಮೆಟ್ರೊ: ಮಣ್ಣು ಪರೀಕ್ಷೆ ಯಶಸ್ವಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬಹುದಿನಗಳ ಕನಸಾಗಿದ್ದ ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗ ಕಾರ್ಯರಂಭವಾದ ಬೆನ್ನಲ್ಲೆ, ಇನ್ನುಳಿದ ಐಟಿ ಕಾರಿಡಾರ್‌ಗಳಿಗೆ ಮೆಟ್ರೊ ಸಂಪರ್ಕ ಕಲ್ಪಿಸಲು ಬಿಎಂಆರ್‌ಸಿಎಲ್ ತಯಾರಿ ನಡೆಸುತ್ತಿದೆ. ಐ.ಟಿ ಕಾರಿಡಾರ್‌ಗಳಲ್ಲಿ ಒಂದಾದ ಸರ್ಜಾಪುರ-ಹೆಬ್ಬಾಳ ಮಾರ್ಗದ ಮಣ್ಣು ಪರೀಕ್ಷೆ ಪೂರ್ಣಗೊಂಡಿದೆ.

ಸರ್ಜಾಪುರ-ಹೆಬ್ಬಾಳ (3ಎ) ನಡುವಿನ 35.40 ಕಿಲೋ ಮೀಟರ್ ಉದ್ದದ ಮಾರ್ಗಕ್ಕೆ ಡಿಪಿಆರ್ (ಸಮಗ್ರ ಯೋಜನಾ ವರದಿ) ಸಿದ್ಧವಾಗುತ್ತಿದೆ. ಅಂದಾಜು ₹15 ಸಾವಿರ ಕೋಟಿ ಮೊತ್ತದ ಈ ಯೋಜನೆಯನ್ನು 2022-23ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದ್ದರು.

ಸರ್ಜಾಪುರ ರಸ್ತೆ ಎಂದ ಕೂಡಲೇ ಅಲ್ಲಿನ ರಸ್ತೆಗಳಲ್ಲಿನ ವಾಹನ ದಟ್ಟಣೆಯೇ ಕಣ್ಣೆದುರಿಗೆ ಬರುತ್ತದೆ. ಬೆಳ್ಳಂದೂರು, ಸರ್ಜಾಪುರ ಸುತ್ತಮುತ್ತ ಐ.ಟಿ ಕಂಪನಿಗಳ ಕಟ್ಟಡಗಳು ತಲೆ ಎತ್ತಿದ ಬಳಿಕ ದಟ್ಟಣೆ ಹೆಚ್ಚಾಗಿದೆ. ಐ.ಟಿ ಕಾರಿಡಾರ್‌ನ ಸಂಚಾರ ದಟ್ಟಣೆಯನ್ನು ಈ ಮೆಟ್ರೊ ರೈಲು ಮಾರ್ಗ ಕಡಿಮೆ ಮಾಡಲಿದೆ ಎಂಬುದು ಬಿಎಂಆರ್‌ಸಿಎಲ್ ಅಧಿಕಾರಿಗಳ ಅಂದಾಜು.

ಸರ್ಜಾಪುರ- ಹೆಬ್ಬಾಳ ಮೆಟ್ರೊ ಮಾರ್ಗವು ಅಗರ, ಕೋರಮಂಗಲ, ಡೇರಿ ವೃತ್ತದ ಮೂಲಕ ಹಾದುಹೋಗಲಿದೆ. ಮೆಟ್ರೊ ಜಾಲಕ್ಕೆ ಮಾಸ್ಟರ್ ಪ್ಲ್ಯಾನ್ ರೂಪಿಸುವಾಗಲೇ ಈ ಮಾರ್ಗದ ಪ್ರಸ್ತಾವ ಇತ್ತು. ಕಾರಣಾಂತರಗಳಿಂದ ಅದರ ಅನುಷ್ಠಾನ ಸಾಧ್ಯವಾಗಿರಲಿಲ್ಲ. ನಗರದ ಕೇಂದ್ರ ವಾಣಿಜ್ಯ ಪ್ರದೇಶಗಳಲ್ಲಿನ ಮೆಟ್ರೊ ಜಾಲವನ್ನು ಈ ಮಾರ್ಗ ಮತ್ತಷ್ಟು ಬಲಪಡಿಸಲಿದೆ.

ಡಿಪಿಆರ್ ಸಿದ್ಧಪಡಿಸುವ ಕೆಲಸವನ್ನು ಮುಂಬೈ ಮೂಲದ ಕಂಪನಿಗೆ ವಹಿಸಲಾಗಿದ್ದು, ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಡಿಪಿಆರ್ ಸಿದ್ಧವಾಗಲು ಇನ್ನು ಎರಡು ತಿಂಗಳು ಬೇಕಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಇದರ ನಡುವೆ ಮಣ್ಣು ಪರೀಕ್ಷೆ ಕಾರ್ಯವನ್ನು ಬಿಎಂಆರ್‌ಸಿಎಲ್ ಪೂರ್ಣಗೊಳಿಸಿದೆ. ಹೆಬ್ಬಾಳದಿಂದ ಕೋರಮಂಗಲ ತನಕ ಸುರಂಗ ಮಾರ್ಗ ಹಾಗೂ ಅಲ್ಲಿಂದ ಸರ್ಜಾಪುರದವರೆಗೆ ಎತ್ತರಿಸಿದ ಮಾರ್ಗ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.

ಸರ್ಜಾಪುರದಿಂದ ಹೆಬ್ಬಾಳ ತನಕ 70 ಕಡೆ ಮಣ್ಣು ಪರೀಕ್ಷೆ ನಡೆಸಲಾಗಿದ್ದು, ಮೆಟ್ರೊ ರೈಲು ಕಾಮಗಾರಿ ಆರಂಭಿಸಲು ಎಲ್ಲಿಯೂ ತೊಡಕು ಕಾಣಿಸಿಲ್ಲ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಎರಡು ತಿಂಗಳಲ್ಲಿ ಡಿಪಿಆರ್ ಸಿದ್ಧವಾದರೆ ಅದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಒಪ್ಪಿಗೆಗೆ ಕಳುಹಿಸಲಾಗುತ್ತದೆ. ಒಪ್ಪಿಗೆ ದೊರೆತ ನಂತರ ಕಾಮಗಾರಿ ಆರಂಭವಾಗಲಿದೆ ಎಂದು ಅವರು ಹೇಳಿದರು.

ಮುಂದಿನ ಹೊಸ ಮಾರ್ಗ ಎಲೆಕ್ಟ್ರಾನಿಕ್ ಸಿಟಿ

ವೈಟ್‌ಫೀಲ್ಡ್ ಮೆಟ್ರೊ ಮಾರ್ಗ ಉದ್ಘಾಟನೆಯಾದ ನಂತರ ಬಿಎಂಆರ್‌ಸಿಎಲ್ ಅಧಿಕಾರಿಗಳ ಗಮನವೀಗ ಮತ್ತೊಂದು ಐ.ಟಿ ಕಾರಿಡಾರ್ ಎಲೆಕ್ಟ್ರಾನಿಕ್ ಸಿಟಿ ಮಾರ್ಗದ ಕಡೆಗೆ ತಿರುಗಿದೆ.

'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಆರ್.ವಿ.ರಸ್ತೆ-ಬೊಮ್ಮಸಂದ್ರ ಮಾರ್ಗದ (ರೀಚ್-5) ಸಿವಿಲ್ ಕಾಮಗಾರಿ ಮೂರು ಪ್ಯಾಕೇಜ್‌ಗಳಲ್ಲಿ ನಡೆಯುತ್ತಿದ್ದು, ಎಲ್ಲಾ ಪ್ಯಾಕೇಜ್ ಕಾಮಗಾರಿಗಳೂ ಅಂತಿಮ ಹಂತಕ್ಕೆ ತಲುಪಿವೆ. ಜುಲೈ ಅಥವಾ ಆಗಸ್ಟ್‌ನಲ್ಲಿ ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.

ಮೊದಲ ಎರಡು ಪ್ಯಾಕೇಜ್‌ಗಳಲ್ಲಿ ಪಿಲ್ಲರ್ ಮತ್ತು ವಯಡಕ್ಟ್ ಅಳವಡಿಕೆ ಕಾಮಗಾರಿಯಾದರೆ, ಮೂರನೇ ಪ್ಯಾಕೇಜ್‌ನಲ್ಲಿ ಅವುಗಳ ಜತೆಗೆ ಮೆಟ್ರೊ ರೈಲು ಮಾರ್ಗದ ಕೆಳಗೆ ಕಾರು ಮತ್ತು ಬಸ್‌ಗಳ ಸಂಚಾರಕ್ಕೂ ಮಾರ್ಗಗಳನ್ನು(ಡಬಲ್ ಡೆಕ್ಕರ್) ನಿರ್ಮಿಸಲಾಗುತ್ತಿದೆ. ಈ ಕಾಮಗಾರಿಯೂ ಅಂತಿಮಗೊಂಡಿದೆ.

'ವೈಟ್‌ಫೀಲ್ಡ್ ಮಾರ್ಗದಲ್ಲಿ ರೈಲು ಸಂಚಾರ ಆರಂಭ ಆಗಿರುವುದರಿಂದ ಈಗ ಎಲೆಕ್ಟ್ರಾನಿಕ್ ಸಿಟಿ ಮಾರ್ಗದ ಕಡೆಗೆ ಗಮನ ಹರಿಸಿದ್ದೇವೆ, ನಿಗದಿತ ಅವಧಿಯಲ್ಲೇ ರೈಲುಗಳ ಸಂಚಾರ ಆರಂಭವಾಗಲಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಪ್ರಜಾವಾಣಿ ವಿಶೇಷ

ಬಳ್ಳಾರಿ ರಸ್ತೆಯ ಅರಮನೆ ಮೈದಾನದ ಬಳಿ ಮಣ್ಣು ಪರೀಕ್ಷೆ ನಡೆಸುತ್ತಿರುವುದು



ಸುದ್ದಿ 2 ನಿಮಿಷ

ಜಾತ್ರೆ: ಸಂಚಾರ ಮಾರ್ಗ ಬದಲಾವಣೆ

ಬೆಂಗಳೂರು: ಬ್ಯಾಟರಾಯನಪುರ ಪೊಲೀಸ್ ಠಾಣೆ ವ್ಯಾಪ್ತಿಯ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಮಾರ್ಚ್ 30ರಿಂದ ಏಪ್ರಿಲ್ 1ರ ತನಕ ರಾಮವೇಣುಗೋಪಾಲಸ್ವಾಮಿಯ ಜಾತ್ರೆ ಹಾಗೂ ರಥೋತ್ಸವ ನಡೆಯಲಿದ್ದು, ಮೈಸೂರು ರಸ್ತೆಯಲ್ಲಿ ವಾಹನ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ.

ಈ ಮಾರ್ಗದಲ್ಲಿ ನಗರದಿಂದ ಹೊರಹೋಗುವ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳೂ ಸೇರಿದಂತೆ ವಾಹನ ಸಂಚಾರವನ್ನು ನಿರ್ಬಂಧಿಸಿ, ಪರ್ಯಾಯ ಮಾರ್ಗದಲ್ಲಿ ತೆರಳಲು ಪೊಲೀಸರು ಸೂಚಿಸಿದ್ದಾರೆ. ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ಸುಗಳೂ ಸೇರಿದಂತೆ ಎಲ್ಲ ತರಹದ ವಾಹನಗಳ ಸಂಚಾರವನ್ನು ಮೈಸೂರು ರಸ್ತೆಯ ಕಿಂಕೋ ಜಂಕ್ಷನ್‌ನಿಂದ ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.

ಮಾರ್ಚ್ 30ರಂದು ಮಧ್ಯಾಹ್ನ 1.25ರಿಂದ ರಾತ್ರಿ 9ರ ತನಕ, ಮಾರ್ಚ್ 31ರಂದು ಬೆಳಿಗ್ಗೆ 8ರಿಂದ ಏಪ್ರಿಲ್ 1ರ ಬೆಳಿಗ್ಗೆ 10ರ ತನಕ ಮೈಸೂರು ರಸ್ತೆಯ ಮಾರ್ಗದ ಮೂಲಕ ಒಳ ಬರುವ ಹಾಗೂ ಹೊರ ಹೋಗುವ ವಾಹನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಅಂತರರಾಜ್ಯ ಕಳ್ಳರ ಬಂಧನ: 60 ಲಕ್ಷ ಮೌಲ್ಯದ ಆಭರಣ ವಶ

ಆನೇಕಲ್ (ಬೆಂಗಳೂರು ಗ್ರಾಮಾಂತರ): ಕಳೆದ ತಿಂಗಳು ದೊಮ್ಮಸಂದ್ರದಲ್ಲಿ ಕಾರಿನ ಗಾಜು ಒಡೆದು ಸುಮಾರು ₹60 ಲಕ್ಷ ಮೌಲ್ಯದ ಚಿನ್ನ ಮತ್ತು ವಜ್ರದ ಒಡವೆ ದೋಚಿ ಪರಾರಿಯಾಗಿದ್ದ ಇಬ್ಬರು ಅಂತರರಾಜ್ಯ ಕಳ್ಳರನ್ನು ಸರ್ಜಾಪುರ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕಾವೇಟಿ ಪುರಂನ ಪಾಂಡುರಂಗ(44) ಮತ್ತು ಅಂಕಯ್ಯ(20) ಬಂಧಿತರು. ಬಂಧಿತರಿಂದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

ಫೆ.23ರಂದು ಲಕ್ಷ್ಮೀನಾರಾಯಣ ಎಂಬುವವರು ತಮ್ಮ ಪತ್ನಿಯೊಂದಿಗೆ ಅತ್ತಿಬೆಲೆಯ ಯೂನಿಯನ್ ಬ್ಯಾಂಕ್‌ಗೆ ತೆರಳಿ ತಮ್ಮ ಲಾಕರ್‌ನಲ್ಲಿದ್ದ ಒಡವೆ ತೆಗೆದುಕೊಂಡು ಕಾರಿನಲ್ಲಿ ಇರಿಸಿದ್ದರು. ದೊಮ್ಮಸಂದ್ರ ರಸ್ತೆಯ ಮುತ್ತಾನಲ್ಲೂರು ಕ್ರಾಸ್ ಬಳಿ ಕಾರು ನಿಲ್ಲಿಸಿ ಸಾಮಗ್ರಿ ಖರೀದಿಸಲು ಅಂಗಡಿಗೆ ಹೋದಾಗ ಆರೋಪಿಗಳು ಕಾರಿನ ಗ್ಲಾಸ್ ಒಡೆದು ಆಭರಣ ಕಳವು ಮಾಡಿದ್ದರು. ಈ ಹಿಂದೆ ಆರೋಪಿಗಳು ಹೊಸಕೋಟೆ ಪೊಲೀಸ್ ಠಾಣೆ, ಸವದತ್ತಿ ಪೊಲೀಸ್ ಠಾಣೆ, ಬೆಂಗಳೂರು ಅಶೋಕನಗರ ಪೊಲೀಸ್ ಠಾಣೆ, ಯಲಹಂಕ, ಚಂದ್ರಾಲೇಔಟ್ ಸೇರಿದಂತೆ ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದರು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೆಚ್ಚುವರಿ ಎಸ್.ಪಿ ಎಂ.ಎಲ್. ಪುರುಷೋತ್ತಮ್ ತಿಳಿಸಿದ್ದಾರೆ.

'ಕಾಯ್ದೆ ತಿದ್ದುಪಡಿ ಮಾಡಿ ಕೋರ್ಟ್ ಮುಂದೆ ನಿಲ್ಲಬೇಕಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಗೆ(ಪಿಟಿಸಿಎಲ್) ತಿದ್ದುಪಡಿ ತಂದು ನಾನು ಸುಪ್ರೀಂ ಕೋರ್ಟ್ ಮುಂದೆ ನಿಲ್ಲಬೇಕಾ' ಎಂದು ಕಂದಾಯ ಸಚಿವ ಆರ್.ಅಶೋಕ ಹೋರಾಟಗಾರರನ್ನು ಪ್ರಶ್ನಿಸಿದರು.

ಕಾಯ್ದೆಯ ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರು, ಬುಧವಾರ ಆರ್.ಅಶೋಕ ನಿವಾಸದ ಎದುರು ಧರಣಿ ನಡೆಸಿದರು.

ಮನವಿ ಆಲಿಸಿದ ಬಳಿಕ ಮಾತನಾಡಿದ ಅವರು, 'ಈ ಕಾಯ್ದೆಯಡಿ ಅರ್ಜಿ ಸಲ್ಲಿಸಲು ಸರ್ಕಾರ ಕಾಲಮಿತಿ ನಿಗದಿ ಮಾಡಿಲ್ಲ. ನಿಗದಿ ಮಾಡಲು ಸುಪ್ರೀಂ ಕೋರ್ಟ್ ತಿಳಿಸಿದ್ದು, ನ್ಯಾಯಾಲಯದಲ್ಲಿ ಹೋರಾಟ ಮಾಡಬೇಕು. ನಮ್ಮ ಮನೆ ಮುಂದೆ ಪ್ರತಿಭಟನೆ ನಡೆಸಿದರೆ ಏನು ಪ್ರಯೋಜನ' ಎಂದರು.

'ಕಾಯ್ದೆಯಲ್ಲಿ ಕಾಲಮಿತಿ ಇಲ್ಲದಿರುವ ಬಗ್ಗೆ ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ. ಆದರೂ ನಾವು ಕಾಲಮಿತಿ ನಿಗದಿ ಮಾಡಿಲ್ಲ. ರಾಜ್ಯದ ಅಡ್ವೊಕೇಟ್ ಜನರಲ್ ಮತ್ತು ಸುಪ್ರೀಂ ಕೋರ್ಟ್ ವಕೀಲರನ್ನು ಕೇಳಿದ್ದೇನೆ. ಸುಪ್ರೀಂ ಕೋರ್ಟ್ ಆದೇಶಕ್ಕೆ ವಿರುದ್ಧವಾಗಿ ಕಾಯ್ದೆಗೆ ತಿದ್ದಪಡಿ ತರಲು ಆಗುವುದಿಲ್ಲ ಎಂಬ ಅಭಿಪ್ರಾಯ ಬಂದಿದೆ' ಎಂದು ಅವರು ತಿಳಿಸಿದರು.

'ತಿದ್ದುಪಡಿಗೆ ಅವಕಾಶ ಇದೆ ಎಂಬುದನ್ನು ಕಾನೂನು ಇಲಾಖೆಯೇ ತಿಳಿಸಿದೆ. ಒಂದೂವರೆ ತಿಂಗಳಿಂದ ನಿಮ್ಮ ಕಚೇರಿಯಲ್ಲೇ ಕಡತ ಉಳಿದಿದೆ' ಎಂದು ಪಿಟಿಸಿಎಲ್ ಹೋರಾಟಗಾರ ಮಂಜುನಾಥ್ ಮನವರಿಕೆ ಮಾಡಿಸಲು ಪ್ರಯತ್ನಿಸಿದರು.

'ಚುನಾವಣೆ ಪ್ರಕಟವಾಗಿರುವುದರಿಂದ ಸದ್ಯಕ್ಕೆ ಏನೂ ಮಾಡಲು ಆಗುವುದಿಲ್ಲ' ಎಂದು ಪ್ರತಿಕ್ರಿಯಿಸಿ ಸಚಿವರು ತೆರಳಿದರು.

'ಸ್ವಾತಂತ್ರ್ಯ ಉದ್ಯಾನದಲ್ಲಿ 87 ದಿನಗಳಿಂದ ಧರಣಿ ನಡೆಸುತ್ತಿದ್ದರೂ ಯಾರೊಬ್ಬರೂ ತಿರುಗಿ ನೋಡಿಲ್ಲ. ಆದ್ದರಿಂದ ಕಂದಾಯ ಸಚಿವರ ಮನೆ ಮುಂದೆ ಬಂದಿದ್ದೇವೆ. ಸಚಿವರು ಉಡಾಫೆಯಿಂದ ಉತ್ತರ ನೀಡಿದ್ದಾರೆ. ಸರ್ಕಾರ ಕಣ್ಣೊರೆಸುವ ತಂತ್ರವನ್ನೇ ಮಾಡಿಕೊಂಡು ಕಾಲ ತಳ್ಳಿದೆ. ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಾಗುವುದು' ಎಂದು ಮಂಜುನಾಥ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೆ ಆಗ್ರಹಿಸಿ ಕಂದಾಯ ಸಚಿವ ಆರ್.ಅಶೋಕ ನಿವಾಸದ ಎದುರು ಸಂತ್ರಸ್ತರು ಬುಧವಾರ ಪ್ರತಿಭಟನೆ ನಡೆಸಿದರು

ಮುರುಘಾ ಮಠಕ್ಕೆ ಸಿಐಡಿ ತಂಡ

ಚಿತ್ರದುರ್ಗ: ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಹಾಗೂ ಪರಿಶಿಷ್ಟ ಜಾತಿ, ಪಂಗಡದ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಶಿವಮೂರ್ತಿ ಶರಣರ ವಿರುದ್ಧ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳ ತಂಡ ಬುಧವಾರ ಮುರುಘಾ ಮಠಕ್ಕೆ ಭೇಟಿ ನೀಡಿ ಪರಿಶೀಲಿಸಿತು.

ಬೆಂಗಳೂರಿನ ಸಿಐಡಿ ಡಿವೈಎಸ್‌ಪಿ ನಂದಕುಮಾರ್ ನೇತೃತ್ವದ ತಂಡ ಮಧ್ಯಾಹ್ನ ಮಠಕ್ಕೆ ಭೇಟಿ ನೀಡಿತ್ತು. ಮಠದ ಸಿಬ್ಬಂದಿಯಿಂದ ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ತನಿಖೆ ನಡೆಸಿರುವ ಪೊಲೀಸರ ಬಳಿ ಮಾಹಿತಿ ಪಡೆಯಿತು ಎಂದು ಮೂಲಗಳು ತಿಳಿಸಿವೆ.

ಮುರುಘಾ ಮಠದಲ್ಲಿ ನಡೆದಿದೆ ಎನ್ನಲಾದ ಲೈಂಗಿಕ ಕಿರುಕುಳ ಪ್ರಕರಣದ ತನಿಖೆ ನಿಷ್ಪಕ್ಷಪಾತವಾಗಿ ನಡೆಯಬೇಕು ಎಂದು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ)ದ ಮುಖಂಡ ಮಾರಸಂದ್ರ ಮುನಿಯಪ್ಪ ದೂರು ಸಲ್ಲಿಸಿದ್ದರು. ಸರ್ಕಾರದ ಸೂಚನೆಯ ಹಿನ್ನೆಲೆಯಲ್ಲಿ ಸಿಐಡಿ ತಂಡ ಮಠಕ್ಕೆ ಭೇಟಿ ನೀಡಿತ್ತು.

ಶಿವಮೂರ್ತಿ ಶರಣರ ವಿರುದ್ಧ ಎರಡು ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ತನಿಖೆ ಪೂರ್ಣಗೊಳಿಸಿದ್ದಾರೆ. ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಕೆ ಮಾಡಲಾಗಿದ್ದು, ವಿಚಾರಣೆಯ ಹಂತದಲ್ಲಿವೆ.

ಕೋಲ್ಕತ್ತ ರೇಸ್

ಹಿಡನ್ ಗೋಲ್ಡ್ ಗೆಲ್ಲುವ ನಿರೀಕ್ಷೆ

ಮಲ್ಟಿಟ್ಯೂಡ್ ಕಪ್ ಗುರುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಹಿಡನ್ ಗೋಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಶೀರ್ ಫೋರ್ಸ್ 1, ಥಾರ್ 2, ದಿ ಮೆಂಟಲಿಸ್ಟ್ 3
2ನೇ ರೇಸ್: ಬಂಡಲ್ ಆಫ್ ಚಾರ್ಮ್ 2, ದೆವ್ರೂಸ್ಟ 3, ಇಂಡಿಯನ್ ಟೈಗರ್ 6
3ನೇ ರೇಸ್: ಡ್ರೀಮ್ ಸ್ಟೇಶನ್ 4, ಮಂಡೇಲಾ 5, ಈಸ್ಟ್‌ಸೈಡ್ 3
4ನೇ ರೇಸ್: ಜವಾಯ್ 8, ಓನ್ಲಿ ಯೂ 2, ದುಬೈ ಸ್ಟಾರ್ 6
5ನೇ ರೇಸ್: ಹಿಡನ್ ಗೋಲ್ಡ್ 6, ಮಾನ್‌ಫಾರ್ಟನೊ 4, ಟಗ್ರಿಯೊ 3
6ನೇ ರೇಸ್: ರೋಕ 1, ಅಟ್ಲಾಂಟಿಕ 3, ಬ್ಯಾಂಕ್ಸಿ 3
7ನೇ ರೇಸ್: ಮಲ್ಟಿಸ್ಟಾರರ್ 1, ಕೋಲ್ಡ್ ಪರ್ಸ್ಯೂಟ್ 2

ಉತ್ತಮ ಬೆಟ್: ಶೀರ್ ಫೋರ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸೇಫ್ ಸಿಟಿ: 2ನೇ ಹಂತದ ಯೋಜನೆ ಚುರುಕು

ಬೆಂಗಳೂರು: ಮಹಿಳೆ ಮತ್ತು ಮಕ್ಕಳ ಸುರಕ್ಷತೆ ಕಾಪಾಡಲು ನಿರ್ಭಯಾ ನಿಧಿಯ ಅಡಿ ಎರಡನೇ ಹಂತದಲ್ಲಿ ಕೈಗೆತ್ತಿಕೊಂಡಿರುವ ಅತ್ಯಾಧುನಿಕ ಪರಿಕರ ಅಳವಡಿಕೆ ಕಾರ್ಯವನ್ನು ಚುರುಕುಗೊಳಿಸಲಾಗಿದೆ ಎಂದು ಸೇಫ್ ಸಿಟಿ ಯೋಜನೆ ಗುತ್ತಿಗೆ ಪಡೆದಿರುವ ಹನಿವೆಲ್ ಕಂಪನಿ ಅಧ್ಯಕ್ಷ ಆಶೀಶ್ ಮೋದಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲ ಹಂತದಲ್ಲಿ ಅತ್ಯಾಧುನಿಕ ಸೌಲಭ್ಯಗಳು ಪೊಲೀಸ್ ಇಲಾಖೆಗೆ ಸೇರಿವೆ. 2ನೇ ಹಂತದ ಅನುಷ್ಠಾನ ಕಾರ್ಯ ಪ್ರಗತಿಯಲ್ಲಿದೆ ಎಂದು ಹೇಳಿದರು.

ನಗರದ ವಿವಿಧೆಡೆ 2,800 ಸಿ.ಸಿ.ಟಿ.ವಿ ಕ್ಯಾಮೆರಾ, 400 ಪ್ಯಾನ್, ಟಿಲ್ಟ್ ಹಾಗೂ ಜೂಮ್ ಕ್ಯಾಮೆರಾ ಅಳವಡಿಸಲಾಗಿದೆ. ಅದರಲ್ಲಿ 200 ಹೈ ರೆಸಲ್ಯೂಷನ್ ಕ್ಯಾಮೆರಾಗಳು ಇವೆ. 20 ಮಹಿಳಾ ಸುರಕ್ಷತಾ ತಾಣಗಳಿವೆ. ಈ ಅನುದಾನದ ಅಡಿ ಶಾಶ್ವತ ಕಮಾಂಡ್ ಮತ್ತು ನಿಯಂತ್ರಣ ಕೇಂದ್ರ, ಡೇಟಾ ಸೆಂಟರ್ ಮತ್ತು ಡಿ.ಆರ್ ಸೆಂಟರ್ ಅಧುನೀಕರಣಗೊಳಿಸಲಾಗುತ್ತಿದೆ ಎಂದು ಹೇಳಿದರು.

ಕಮಾಂಡ್ ಸೆಂಟರ್ ಡಿಸಿಪಿ ಬದ್ರಿನಾಥ್ ಮಾತನಾಡಿದರು.

ನಗರದ ಹಲವೆಡೆ ಜೋರು ಮಳೆ

ಬೆಂಗಳೂರು: ನಗರದ ಹಲವೆಡೆ ಬುಧವಾರ ರಾತ್ರಿ ಜೋರು ಮಳೆಯಾಗಿದ್ದು ಬಿಸಿಲ ಧಗೆಯಿಂದ ಬಸವಳಿದಿದ್ದ ಜನರಿಗೆ ತಂಪೆರೆಯಿತು.

ಪೀಣ್ಯ, ಯಶವಂತಪುರ, ಹೆಸರಘಟ್ಟ, ಸುಂಕದಕಟ್ಟೆ, ಟಿ. ದಾಸರಹಳ್ಳಿ, ನೆಲಮಂಗಲ ಭಾಗದಲ್ಲಿ ಮಳೆಯಾಗಿದೆ. ಆರ್.ಟಿ.ನಗರ, ಶೇಷಾದ್ರಿಪುರಂ, ಮಲ್ಲೇಶ್ವರ, ಮೆಜೆಸ್ಟಿಕ್, ಹೆಬ್ಬಾಳ, ಯಲಹಂಕ ಭಾಗದಲ್ಲಿ ಕೆಲವು ನಿಮಿಷಗಳ ಕಾಲ ಸಾಧಾರಣ ಮಳೆಯಾಗಿದೆ. ಬುಧವಾರ ಮಧ್ಯಾಹ್ನದ ಬಳಿಕ ಮೋಡ ಕವಿದ ವಾತಾವರಣ ಇತ್ತು. ಸಂಜೆ ತನಕವೂ ಮಳೆಯಾಗಲಿಲ್ಲ. ರಾತ್ರಿ ಅಲ್ಲಲ್ಲಿ ಮಳೆಯಾಗಿದೆ.

'ಗಾಳಿಯ ದಿಕ್ಕಿನಲ್ಲಿ ಬದಲಾವಣೆಯಾಗಿದ್ದು, ಜೋರು ಗಾಳಿ ಬೀಸುತ್ತಿದೆ. ಇದರಿಂದ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮುಂದಿನ ಐದು ದಿನಗಳ ಕಾಲ ಮಳೆಯಾಗುವ ಸಾಧ್ಯತೆಯಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಿದುಳಿನ ಕ್ಯಾನ್ಸರ್ ಜಯಿಸಿದ ಬಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿದುಳಿನ ಕ್ಯಾನ್ಸರ್‌ಗೆ (ಪೈನಾಲೊಬ್ಲಾಸ್ಟೊಮಾ) ಒಳಗಾಗಿದ್ದ 12 ವರ್ಷದ ಬಾಲಕನಿಗೆ ಪ್ರೋಟಾನ್ ಬೀಮ್ ಥೆರಪಿ ಚಿಕಿತ್ಸೆ ನೀಡಿ ಚೆನ್ನೈನ ಅಪೊಲೊ ಪ್ರೋಟಾನ್ ಕ್ಯಾನ್ಸರ್ ಸೆಂಟರ್‌ನ (ಎಪಿಸಿಸಿ) ವೈದ್ಯರು ಗುಣಪಡಿಸಿದ್ದಾರೆ.

ಮಿದುಳಿನ ಮಧ್ಯ ಭಾಗದಲ್ಲಿರುವ ಪೀನಲ್ ಗ್ರಂಥಿಯಲ್ಲಿ ಕಾಣಿಸಿಕೊಳ್ಳುವ ಗೆಡ್ಡೆ (ಬ್ರೈನ್ ಟ್ಯೂಮರ್)ಯ ಒಂದು ಪ್ರಕಾರ ಪೈನಾಲೊಬ್ಲಾಸ್ಟೊಮಾ. ಪೀನಲ್ ಗ್ರಂಥಿಯು ಮೆಲಟೋನಿನ್ ಎಂಬ ಹಾರ್ಮೋನ್ ಉತ್ಪಾದಿಸುತ್ತದೆ. ಈ ಹಾರ್ಮೋನ್ ಮಾನವ ದೇಹದ ನೈಸರ್ಗಿಕವಾಗಿ ನಿದ್ರೆ ಮತ್ತು ಎಚ್ಚರದ ಅವಸ್ಥೆಯ ಚಕ್ರದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

2018 ರಲ್ಲಿ ಬಾಲಕನಿಗೆ ಪೈನಾಲೊಬ್ಲಾಸ್ಟೊಮಾ ಇರುವುದು ದೃಢಪಟ್ಟಿತ್ತು. ಎಂಡೋಸ್ಕೋಪಿಕ್, ಮೂರನೇ ವೆಂಟ್ರಿಕ್ಯುಲೋಸ್ಟೊಮಿ ಮತ್ತು ಬಯಾಪ್ಸಿ ಪರೀಕ್ಷೆಗಳ ನಂತರ ಐದು ಸುತ್ತುಗಳ ಕಿಮೊಥೆರಪಿ ನೀಡಿ, ಪ್ರೋಟಾನ್ ಬೀಮ್ ಥೆರಪಿ ಚಿಕಿತ್ಸೆಗಾಗಿ ಚೆನ್ನೈನ ಎಪಿಎಸಿಸಿಗೆ ಕಳುಹಿಸಲಾಗಿತ್ತು ಎಂದು ಅಪೊಲೊ ಆಸ್ಪತ್ರೆ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಗ್ರೂಪ್ ಆಂಕಾಲಜಿ ಮತ್ತು ಇಂಟರ್‌ನ್ಯಾಷನಲ್ ಅಧ್ಯಕ್ಷ ದಿನೇಶ್ ಮಾಧವನ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಆಸ್ಪತ್ರೆಯ ಕ್ಯಾನ್ಸರ್ ವಿಭಾಗದ ತಜ್ಞರು ಪ್ರೋಟಾನ್ ಬೀಮ್ ಥೆರಪಿ ಬಳಸಿಕೊಂಡು ಗೆಡ್ಡೆಯ ಗಾತ್ರವನ್ನು ಗಣನೀಯವಾಗಿ ಕಡಿಮೆ ಮಾಡಿದರು ಎಂದರು.

ಹಿರಿಯ ಸಲಹೆಗಾರ ಡಾ.ಶ್ರೀನಿವಾಸ್ ಚಿಲುಕುರಿ, ವಿಶ್ವದಲ್ಲಿ ಪ್ರತಿ ವರ್ಷ 3.30 ಲಕ್ಷ ಮಕ್ಕಳು ಮಿದುಳಿನ ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ಭಾರತದಲ್ಲಿ 28 ಸಾವಿರ ಪ್ರಕರಣಗಳು ವರದಿಯಾಗುತ್ತಿವೆ. 24 ಸಾವಿರ ಜನರು ಮೃತರಾಗುತ್ತಿದ್ದಾರೆ. ಎಪಿಸಿಸಿ 300 ಕ್ಕೂ ಹೆಚ್ಚು ಜನರನ್ನು ಗುಣಪಡಿಸಿದೆ. ಅವರಲ್ಲಿ 22 ಮಂದಿ ಬೆಂಗಳೂರಿನವರು ಎಂದರು.

ಪೀನಲ್ ಗ್ರಂಥಿ ಮೆದುಳಿನ ಮಧ್ಯಭಾಗದ ಸ್ಥಳ. ಪ್ರೋಟಾನ್ ಚಿಕಿತ್ಸೆಯು ಕ್ಯಾನ್ಸರ್ ಗೆಡ್ಡೆಯನ್ನು ನಾಶಪಡಿಸಲು ಮತ್ತು ಸುತ್ತಮುತ್ತಲಿನ ಆರೋಗ್ಯಕರ ಅಂಗಾಂಶಗಳಿಗೆ ಹಾನಿಯಾಗದಂತೆ ವಿಕಿರಣವನ್ನು ಹಾಯಿಸಲು ಪ್ರೋಟಾನ್ ಥೆರಪಿ ಸಹಾಯ ಮಾಡುತ್ತದೆ. ಅಡ್ಡಪರಿಣಾಮಗಳನ್ನೂ ಕಡಿಮೆ ಮಾಡುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಾಲಕನ ತಂದೆ ಸತೀಶ್ ಕುಮಾರ್ ವೇಮುಲ, ಎಪಿಸಿಸಿಯಲ್ಲಿ ಚಿಕಿತ್ಸೆ ಪಡೆದ ನವದಿಯಾ ಜೆಮಿನ್ ಮನ್ಸುಖ್‌ಭಾಯ್ ಇದ್ದರು.

ಮಿದುಳಿನ ಕ್ಯಾನ್ಸರ್‌ನಿಂದ ಗುಣಮುಖನಾದ ಬಾಲಕ ವೆಂಕಟ ಸರವಣನೊಂದಿಗೆ ದಿನೇಶ್ ಮಾಧವನ್, ಸತೀಶ್ ಕುಮಾರ್ ವೇಮುಲ, ಡಾ.ಶ್ರೀನಿವಾಸ್ ಚಿಲುಕುರಿ, ನವದಿಯಾ ಜೆಮಿನ್ ಮನ್ಸುಖಭಾಯ್ ಇದ್ದಾರೆ.

ಕೋಲಾರ ಎಪಿಎಂಸಿಯಲ್ಲಿ 15 ಕೆ.ಜಿ ಬಾಕ್ಸ್ ಟೊಮೆಟೊ ದರ ₹ 50ರಿಂದ 120

ಹೊರರಾಜ್ಯದಿಂದ ತಗ್ಗಿದ ಬೇಡಿಕೆ; ಬೆಲೆ ಕುಸಿತ

• ಕೆ.ಓಂಕಾರ ಮೂರ್ತಿ

ಕೋಲಾರ: ಕಡಿಮೆ ಉತ್ಪಾದನೆ ಜೊತೆಗೆ ಹೊರರಾಜ್ಯಗಳಿಂದ ಬೇಡಿಕೆ ಕಡಿಮೆಯಾಗಿರುವ ಕಾರಣ ಜಿಲ್ಲೆಯಲ್ಲಿ ಟೊಮೆಟೊ ಧಾರಣೆ ಕುಸಿದಿದೆ. ಹೀಗಾಗಿ, ಟೊಮೆಟೊ ಬೆಳೆದ ರೈತರು ತೊಂದರೆಗೆ ಸಿಲುಕಿದ್ದಾರೆ.

ಉತ್ತಮ ಗುಣಮಟ್ಟದಿಂದ ಕೂಡಿದ 15 ಕೆ.ಜಿ. ತೂಕದ ಬಾಕ್ಸ್ ಟೊಮೆಟೊಗೆ ನಗರದ ಎಪಿಎಂಸಿ ಮಾರುಕಟ್ಟೆಯ ಹರಾಜಿನಲ್ಲಿ ಗರಿಷ್ಠ ₹ 120 ಸಿಗುತ್ತಿದೆ. ಗುಣಮಟ್ಟವಿಲ್ಲದ ಬಾಕ್ಸ್ ಟೊಮೆಟೊ ₹50ಕ್ಕೆ ಬಿಕರಿಯಾಗುತ್ತಿದೆ. ಹೂಡಿದ ಬಂಡವಾಳವೂ ಸಿಗದೆ ಬೆಳೆಗಾರರು ಕಂಗಾಲಾಗಿದ್ದಾರೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹10 ಕ್ಕೆ ಮಾರಾಟವಾಗುತ್ತಿದ್ದು, ಗ್ರಾಹಕರು ಖುಷಿಯಲ್ಲಿದ್ದಾರೆ.

ಟೊಮೆಟೊ ಮಾರಾಟದಲ್ಲಿ ಏಷ್ಯಾದಲ್ಲೇ ಎರಡನೇ ಅತಿ ದೊಡ್ಡ ಮಾರುಕಟ್ಟೆ ಎನಿಸಿರುವ ನಗರದ ಎಪಿಎಂಸಿಯಲ್ಲಿ ಬುಧವಾರ ಆವಕ ಪ್ರಮಾಣ 4,518 ಕ್ವಿಂಟಲ್ ಟೊಮೆಟೊ ಇತ್ತು.

ಆಂಧ್ರಪ್ರದೇಶ, ತಮಿಳುನಾಡಿನ ರೈತರು ಹೆಚ್ಚು ಟೊಮೆಟೊ ಬೆಳೆದಿರುವುದರಿಂದ ಅಲ್ಲಿನ ವರ್ತಕರು ಇತ್ತ ಸುಳಿಯುತ್ತಿಲ್ಲ. ಅಲ್ಲಿನ ಮಾರುಕಟ್ಟೆಗಳಲ್ಲೇ ಟೊಮೆಟೊ ಸಂಗ್ರಹವಿದೆ.

'ಜಿಲ್ಲೆಯಲ್ಲಿ ಸದ್ಯ ಟೊಮೆಟೊ ಬೆಳೆ ಕಡಿಮೆಯಾಗಿದ್ದು, ಮಾರುಕಟ್ಟೆಗೆ ಪೂರೈಕೆಯೂ ತಗ್ಗಿದೆ. ಹೊರ ರಾಜ್ಯಗಳಿಂದ ಬೇಡಿಕೆಯೂ ಬರುತ್ತಿಲ್ಲ. ಅಂತರರಾಜ್ಯ ವಹಿವಾಟು ನಡೆಯುತ್ತಿಲ್ಲ. ಹೀಗಾಗಿ, ಬೆಲೆ ತಗ್ಗಿದೆ' ಎಂದು ಕೋಲಾರ ಎಪಿಎಂಸಿ ಕಾರ್ಯದರ್ಶಿ ವಿಜಯಲಕ್ಷ್ಮಿ 'ಪ್ರಜಾವಾಣಿ'ಗೆ ತಿಳಿಸಿದರು.

ವಾರದ ಹಿಂದೆ ಅಕಾಲಿಕ ಮಳೆ, ಬಿರುಗಾಳಿ, ಆಲಿಕಲ್ಲು ಕಾರಣ ಜಿಲ್ಲೆಯಲ್ಲಿ 200 ಹೆಕ್ಟೇರ್‌ಗೂ ಅಧಿಕ ಟೊಮೆಟೊ ಬೆಳೆ ನಾಶವಾಗಿದೆ. ಜೊತೆಗೆ ಗುಣಮಟ್ಟವೂ ತಗ್ಗಿದೆ. ಕೆಲವರು ಟೊಮೆಟೊ ಬದಲು ಆಲೂಗಡ್ಡೆ ಬೆಳೆದಿದ್ದಾರೆ.

'ಇದು ಟೊಮೆಟೊ ಋತು ಅಲ್ಲ. ಏಪ್ರಿಲ್‌ನಲ್ಲೂ ಇದೇ ಪರಿಸ್ಥಿತಿ ಮುಂದುವರಿಯಲಿದೆ. ಮೇ, ಜೂನ್ ಬಳಿಕವಷ್ಟೇ ಟೊಮೆಟೊಗೆ ಮಾರುಕಟ್ಟೆ ಕುದುರಲಿದೆ' ಎಂದರು.

ಹೈನುಗಾರಿಕೆಗೆ ಮೊರೆ: 'ಎರಡು ಎಕರೆಯಲ್ಲಿ ಟೊಮೆಟೊ ಬೆಳೆದು ಎರಡು ವರ್ಷಗಳಲ್ಲಿ ₹ 10 ಲಕ್ಷ ನಷ್ಟವಾಯಿತು. ಹೀಗಾಗಿ, ಟೊಮೆಟೊ ಬಿಟ್ಟು ಹೈನುಗಾರಿಕೆಯಲ್ಲಿ ತೊಡಗಿದ್ದೇನೆ. ಜಿಲ್ಲೆಯಲ್ಲಿ ಟೊಮೆಟೊಗೆ ರೋಗ ಹೆಚ್ಚುತ್ತಿದೆ, ಅಕಾಲಿಕ ಮಳೆ, ಬಿಸಿಲು ಹೆಚ್ಚಿದ್ದು, ಸರಿಯಾಗಿ ಬೆಲೆ ಸಿಗುತ್ತಿಲ್ಲ' ಎಂದು ತಾಲ್ಲೂಕಿನ ತೊಟ್ಲಿ ಗ್ರಾಮದ ರೈತ ಮುರಳಿ ತಿಳಿಸಿದರು.

ಮುಖ್ಯಾಂಶಗಳು

- ಕೋಲಾರಕ್ಕೆ ತಲೆಹಾಕದ ಹೊರರಾಜ್ಯದ ವರ್ತಕರು
- ಆಂಧ್ರ, ತಮಿಳುನಾಡಿನಲ್ಲಿ ಹೆಚ್ಚಿದ ಟೊಮೆಟೊ ಆವಕ
- ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹ 10

ಹೊರ ರಾಜ್ಯಗಳಿಂದ ಬೇಡಿಕೆ ಇಲ್ಲವಾಗಿದೆ. ಅಕಾಲಿಕ ಮಳೆಯಿಂದಾಗಿ ಗುಣಮಟ್ಟದ ಟೊಮೆಟೊ ಸಿಗುತ್ತಿಲ್ಲ. ಹರಾಜಿನಲ್ಲಿ ಟೊಮೆಟೊ ಖರೀದಿಸುವ ವರ್ತಕರ ಸಂಖ್ಯೆ ಕಡಿಮೆಯಾಗಿದೆ.

ವಿಜಯಲಕ್ಷ್ಮಿ, ಕಾರ್ಯದರ್ಶಿ, ಎಪಿಎಂಸಿ, ಕೋಲಾರ

ಕೋಲಾರ ಎಪಿಎಂಸಿ ಮಾರುಕಟ್ಟೆಯಲ್ಲಿ ಟೊಮೆಟೊ ಆವಕ

ನಗರದಲ್ಲಿ ಇಂದು

ಶ್ರೀರಾಮೋತ್ಸವ: ರಾಮದೇವರಿಗೆ ವಿಶೇಷ ಪಂಚಾಮೃತ ಅಭಿಷೇಕ, ಪಂಚಗವ್ಯಪೂಜೆ, ಶ್ರೀರಾಮದೇವರ ಬ್ರಹ್ಮರಥೋತ್ಸವ, ದೇವರನಾಮ: ಜಗದೀಶ್ವರಿ ಮಹಿಳಾ ಮಂಡಳಿ, ಸಂಗೀತ ಕಾರ್ಯಕ್ರಮ: ಗಾಯನ: ಗೌರಿ ಕುಲಕರ್ಣಿ, ತಬಲ: ದೊಡ್ಡಪ್ಪ ಹೂಗಾರ, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ಆಯೋಜನೆ: ಶ್ರೀರಾಮ ಸೇವಾ ಮಂಡಳಿ, ಸ್ಥಳ: ರಾಜಾಜಿನಗರ, ಬೆಳಿಗ್ಗೆ 5.30ರಿಂದ ರಾತ್ರಿ 8.30ರವರೆಗೂ

ಶ್ರೀರಾಮೋತ್ಸವ ಕಾರ್ಯಕ್ರಮ: ಬೆಳಿಗ್ಗೆ 7ಕ್ಕೆ ಕಲಶ ಸ್ಥಾಪನೆ, ಶ್ರೀರಾಮದೇವರಿಗೆ ಅಭಿಷೇಕ, ಸಂಜೆ: ದೇವರ ದರ್ಶನ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡರಾಮ ದೇವಸ್ಥಾನದ ರಸ್ತೆ, ವಿಜಯನಗರ

ಬ್ರಹ್ಮರಥೋತ್ಸವ: ಬೆಳಿಗ್ಗೆ 10ಕ್ಕೆ ಶ್ರೀರಾಮ ನವಮಿ ಪ್ರಯುಕ್ತ ಹನುಮಂತೋತ್ಸವ, ಸಂಜೆ 6ಕ್ಕೆ ಸರ್ವ ಸಮರ್ಪಣೋತ್ಸವ, ಆಯೋಜನೆ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಸ್ಥಳ: ರಾಜಾನುಕುಂಟೆ ಸಮೀಪದ ಕಾಕೋಳು, ಯಲಹಂಕ

ಶ್ರೀರಾಮೋತ್ಸವದ ಉದ್ಘಾಟನಾ ಸಮಾರಂಭ: ಪ್ರವಚನ: ವೀರೇಶಾನಂದ ಸರಸ್ವತಿ ಸ್ವಾಮೀಜಿ, 'ಸುಂದರಕಾಂಡ' ನೃತ್ಯರೂಪಕ: ನಿರ್ದೇಶನ: ರಘುನಂದನ್ ಎಸ್., ಸಾಹಿತ್ಯ: ಎನ್.ಎಸ್.ವಿ. ಪ್ರಸಾದ್, ನಾದಸ್ವರ: ಮೈಸೂರು ವಿಜಯ್ ಸೂರ್ಯ, ಪಿಟೀಲು: ಕೃತಿಕ್ ಕೌಶಿಕ್, ಮೃದಂಗ: ವೈ.ಪಿ. ವಿಕ್ರಂ ಭಾರದ್ವಾಜ್, ಆಯೋಜನೆ ಮತ್ತು ಸ್ಥಳ: ಶ್ರೀರಾಮಮಂದಿರಂ ಟ್ರಸ್ಟ್, ನರಸಿಂಹರಾಜ ಕಾಲೊನಿ, ಸಂಜೆ 4.30ರಿಂದ

ಶ್ರೀರಾಮನವಮಿ ಉತ್ಸವ: ಭಕ್ತಿ ಗೀತೆಗಳು: ಗುರುರಾಜ ಭಜನಾ ಮಂಡಳಿ, ದಾಸರ ಪದಗಳು: ವರಪ್ರದ, ಶಾಸ್ತ್ರೀಯ ಸಂಗೀತ: ಶಾರ್ವರಿ ಎನ್. ಮೂರ್ತಿ, ಸಂಗೀತ: ಕೆ.ಎನ್. ಶೃತಿ ಕಲ್ಕುಂಟೆ, ಆಯೋಜನೆ: ರಾಮಸೇವಾ ಮಂಡಲಿ, ಸ್ಥಳ: ಸಜ್ಜನ್ ರಾವ್ ವೃತ್ತದ ಒಳಗಡೆ, ಸಂಜೆ 5

'ಶ್ರೀರಾಮೋತ್ಸವ' ಸಂಗೀತ ಕಾರ್ಯಕ್ರಮ: ಪ್ರವಚನ: ಖೇಡ ವೇದವ್ಯಾಸಾಚಾರ್ಯ, ಗಾಯನ: ಶೆಂಕೋಟ್ಟೈ ಹರಿಹರ ಸುಬ್ರಮಣಿಯನ್, ಪಿಟೀಲು: ಎಂ.ಆರ್. ಶ್ರೀನಿಧಿ, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ: ಎಸ್.ಎನ್. ನಾರಾಯಣಮೂರ್ತಿ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಸಂಜೆ 5.30ರಿಂದ

ರಂಜನಿ ಮತ್ತು ಗಾಯತ್ರಿ

ಶ್ರೀರಾಮ ನವಮಿ ಸಂಗೀತೋತ್ಸವದ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಸುಧಾಮೂರ್ತಿ, ಸಿ.ಎಸ್. ಕೇದಾರ್, ರಾಮಗಾನ ಕಲಾಕಭೇರಿ: ರಂಜನಿ ಮತ್ತು ಗಾಯತ್ರಿ, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ಮನೋಜ್ ಶಿವ, ಘಟ: ಸುಕನ್ಯಾ ರಾಂಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, 'ಪ್ರಜಾವಾಣಿ' ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಸಂಜೆ 6ರಿಂದ

ಶ್ರೀರಾಮನವಮಿ ಸಂಗೀತೋತ್ಸವದ ಉದ್ಘಾಟನೆ: ಬಿ.ವಿ. ನಾಗರತ್ನ, ಎಂ.ಆರ್. ಜಯರಾಂ, ನಾದಸ್ವರ: ಚಿನ್ನಮನ್ನೂರ್ ಬ್ರದರ್ಸ್, ಎ. ಕಾರ್ತಿಕೇಯನ್, ಇಡುಂಬವನಂ ಪ್ರಕಾಶ್ ಇಳಯರಾಜ್ ಮತ್ತು ತಂಡ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 5.30ರಿಂದ

ಭಾವನಾ ಮೂರ್ತಿ, ರಂಜಿತಾ ಪ್ರಸಾದ್

'ದಾಸವಾಣಿ': ಭಾವನಾ ಮೂರ್ತಿ, ರಂಜಿತಾ ಪ್ರಸಾದ್, ಕೀ-ಬೋರ್ಡ್: ಹರೀಶ್ ಟಿ.ಜಿ., ತಬಲಾ: ನಾಗರಾಜ್ ಹೆಗ್ಡೆ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಸಂಜೆ 5.30

ಸಂಸ್ಥಾಪಕರ ದಿನಾಚರಣೆ: ಅಧ್ಯಕ್ಷತೆ: ರಾಗಪ್ರಿಯಾ ಆರ್., ಅತಿಥಿಗಳು: ಮನಮೋಹನ್ ಲಾಲವಾಣಿ, ಸೋನಮ್ ಯೋಗಯಾಲ್, ಸಚಿನ್ ಪೈ, ಪ್ರಶಸ್ತಿ ಪುರಸ್ಕೃತರು: ಭುವನೇಶ್ವರಿ, ರೇಣುಕಾತಾಯಿ ಪರಪ್ಪಗೋಳ, ಆಯೋಜನೆ: ಸೆಲ್ಕೋ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 9.30

ಹಚ್ಚೆ ಕಲಾಶಿಬಿರ: ಉದ್ಘಾಟನೆ: ಅಪ್ಪಗೆರೆ ತಿಮ್ಮರಾಜು, ಅಧ್ಯಕ್ಷತೆ: ಎಂ.ಆರ್. ಸತ್ಯನಾರಾಯಣ, ಉಪಸ್ಥಿತಿ: ಸುಬ್ಬರಾಯ ಎನ್. ಸಿದ್ಧಿ, ಆಯೋಜನೆ: ಬೆಂಗಳೂರು ಆರ್ಟ್ ಫೌಂಡೇಷನ್, ಸ್ಥಳ: ವರ್ಣ ಆರ್ಟ್ ಗ್ಯಾಲರಿ, 2ನೇ ಮಹಡಿ ಕನ್ನಡ ಭವನ, ಬೆಳಿಗ್ಗೆ 11

'ರಕ್ತರಾತ್ರಿ' ನಾಟಕ ಪ್ರದರ್ಶನ: ಆಯೋಜನೆ: ಪರಸ್ಪರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4.30

ಮುತ್ಯಾಲಮ್ಮ ದೇವಿಯ ರಥೋತ್ಸವ: ಮುತ್ತಿನ ಪಲ್ಲಕ್ಕಿ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

ವಿಶ್ವವಿಖ್ಯಾತ ಕರಗ ಶಕ್ತ್ಯೋತ್ಸವ: ಆಯೋಜನೆ: ಬೆಂಗಳೂರು ನಗರದ ಧರ್ಮರಾಯಸ್ವಾಮಿ ದೇವಸ್ಥಾನ, ಸ್ಥಳ: ಕಬ್ಬನ್ ಉದ್ಯಾನದ ಕರಗದ ಕುಂಟೆಗೆ ವಿಶೇಷ ಪೂಜೆ, ಮಧ್ಯಾಹ್ನ 12.30

'ಹರಿದಾಸವಾಣಿ': ಕಲಾಧರಿ ಭವಾನಿ, ಅಂಬಿಕಾ ಜಿ. ದತ್, ಪಿಟೀಲು: ಪ್ರೇಮಾ ವಿವೇಕ್, ಮೃದಂಗ: ದೀಪಿಕಾ ಶ್ರೀನಿವಾಸನ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 7.30

ಕಲಾಧರಿ ಭವಾನಿ, ಅಂಬಿಕಾ ಜಿ. ದತ್

ಪ್ರವಚನ ವಾಹಿನಿ: ಗಮಕ-ವ್ಯಾಖ್ಯಾನ: 'ಸುಂದರಕಾಂಡ (ತೊರವೆ ರಾಮಾಯಣ) ಹನುಮ ಭೀಮ ಸಮಾಗಮ (ಕುಮಾರವ್ಯಾಸ ಭಾರತ)' ಕುರಿತು ಪ್ರವಚನ: ಎನ್. ಕೆ. ರಾಮಶೇಷನ್, ಕಮಲ ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಶ್ರೀರಾಮ ನವಮಿ ಸಂಗೀತೋತ್ಸವ: ಗಾಯನ: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ಪಿಟೀಲು: ಸಿಂಧು ಸುಚೇತನ್, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಮೋರ್ಚಿಂಗ್: ಲಕ್ಷ್ಮೀನಾರಾಯಣ, ಸ್ಥಳ: ಶ್ರೀ ರಾಘವೇಂದ್ರ ಮತ್ತು ಆಂಜನೇಯ ಸ್ವಾಮಿಗಳ ದೇವಾಲಯದ ಆವರಣ, 8ನೇ ಕ್ರಾಸ್, ಮಲ್ಲೇಶ್ವರ, 6.30

ರಾಮನವಮಿ ಕಾರ್ಯಕ್ರಮ: ಭಜನಾಮೃತ: ವತ್ಸಲಾ ರಾವ್ ಮತ್ತು ಸ್ತುತಿ ವಾಹಿನಿ ತಂಡ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಸಹನಾ ಶ್ರೀವತ್ಸ

'ವೀಣಾವಾದನ': ಸಹನಾ ಶ್ರೀವತ್ಸ, ಪಿಟೀಲು: ಶ್ರೀವತ್ಸ ಎಂ. ಸುಬೋಧ, ಮೃದಂಗ: ಸುಧೀಂದ್ರ ಆಪ್ಟೆ, ಆಯೋಜನ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಪ್ರಕಾಶನಗರ, ಸಂಜೆ 6.30

ಶ್ರೀರಾಮ ನವಮಿ ಉತ್ಸವ: ಗಾಯನ: ಚಂಪಾ ಶ್ರೀಧರ್, ಅನಿತಾ ಪ್ರಸಾದ್, ಹಾರ್ಮೋನಿಯಂ: ರಾಮಪ್ಪ, ತಬಲಾ: ಯಲ್ಲಪ್ಪ, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿ: 28ರಲ್ಲಿ 19 ವಿಧಾನಸಭೆ ಕ್ಷೇತ್ರಗಳು ಸೂಕ್ಷ್ಮ

ಫ್ಲೆಕ್ಸ್, ಪೋಸ್ಟರ್ ತೆರವು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಾಗುತ್ತಿದ್ದಂತೆಯೇ ನಗರದಲ್ಲಿ ಬ್ಯಾನರ್, ಫ್ಲೆಕ್ಸ್, ಪೋಸ್ಟರ್‌ಗಳ ತೆರವು ಕಾರ್ಯ ಬುಧವಾರ ಮಧ್ಯಾಹ್ನದಿಂದಲೇ ಆರಂಭವಾಗಿದೆ.

ಸರ್ಕಾರಿ ಕಚೇರಿ, ಸರ್ಕಾರಿ ಆಸ್ತಿಗಳು ಸೇರಿದಂತೆ ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಜನಪ್ರತಿನಿಧಿಗಳ ಹೆಸರು ಹಾಗೂ ಭಾವಚಿತ್ರಗಳನ್ನು ತೆಗೆಯಲು ಜಿಲ್ಲಾ ಚುನಾವಣಾ ಅಧಿಕಾರಿ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಲಯ ಜಂಟಿ ಆಯುಕ್ತರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಜೊತೆ ನಡೆಸಿದ ವರ್ಚುವಲ್ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಫ್ಲೆಕ್ಸ್, ಪೋಸ್ಟರ್, ಬ್ಯಾನರ್, ಭಿತ್ತಿಪತ್ರಗಳು, ಗೋಡೆ ಬರಹಗಳು ಇರುವಂತಿಲ್ಲ. ಯಾರಾದರೂ ಪೋಸ್ಟರ್, ಬ್ಯಾನರ್ ಹಾಕಿದರೆ ಸಂಬಂಧಪಟ್ಟವರಿಗೆ ಪ್ರಕರಣ ದಾಖಲಿಸಬೇಕು' ಎಂದರು.

ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ಯಾವುದಾದರೂ ಕಾರ್ಯಕ್ರಮ ಆಯೋಜಿಸಿದ್ದಲ್ಲಿ ತತ್‌ಕ್ಷಣ ಅದನ್ನು ರದ್ದುಪಡಿಸಬೇಕು. ಶುದ್ಧ ಕುಡಿಯುವ ನೀರಿನ ಘಟಕ, ಉದ್ಯಾನ ಸೇರಿದಂತೆ ಇನ್ನಿತರೆ ಸ್ಥಳಗಳಲ್ಲಿ ಅಳವಡಿಸಿರುವ ನಾಮ ಫಲಕಗಳಲ್ಲಿ ಜನಪ್ರತಿನಿಧಿಗಳ ಹೆಸರು, ಭಾವಚಿತ್ರಗಳು ಇರುವಂತಿಲ್ಲ. ಎಲ್ಲೂ ಜನಪ್ರತಿನಿಧಿಗಳ ಹೆಸರಾಗಲಿ, ಸಂಪರ್ಕ ಸಂಖ್ಯೆಯಾಗಲಿ ಇರುವಂತಿಲ್ಲ ಎಂದರು.

ಸಭೆಯಲ್ಲಿ ವಿಶೇಷ ಆಯುಕ್ತರಾದ ಉಜ್ವಲ್ ಕುಮಾರ್ ಘೋಷ್, ಜಯರಾಮ ರಾಯಪುರ ಇದ್ದರು.

ಮತದಾನಕ್ಕೆ ಮನವಿ: ಬಿಬಿಎಂಪಿ ವ್ಯಾಪ್ತಿಯ 8 ವಲಯಗಳ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪದಾಧಿಕಾರಿಗಳ ಜೊತೆ ವರ್ಚುವಲ್ ಸಭೆ ನಡೆಸಿದ ತುಷಾರ್ ಗಿರಿನಾಥ್, ಚುನಾವಣೆಯಲ್ಲಿ ಎಲ್ಲರೂ ತಪ್ಪದೇ ಮತದಾನ ಮಾಡುವಂತೆ ಮನವಿ ಮಾಡಿದರು.

ಸ್ವೀಪ್ (ಜಾಗೃತಿ) ಕಾರ್ಯಚಟುವಟಿಕೆಗಳ ಕುರಿತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಜೊತೆ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಇಂದಿನಿಂದಲೇ ನೀತಿ ಸಂಹಿತೆ ಜಾರಿಯಾಗಿದೆ. ತಮ್ಮ ಮಟ್ಟದಲ್ಲಿ ಬರುವ ನಿವಾಸಿಗಳಿಗೆಲ್ಲರಿಗೂ ಮತದಾನ ಮಾಡುವಂತೆ ಪ್ರೇರೇಪಿಸಿ' ಎಂದು ತಿಳಿಸಿದರು.

ಮತದಾನ ಮಾಡುವ ಮುಂಚಿತವಾಗಿತೇ ಎಲ್ಲಾ ಮನೆಗಳಿಗೂ ಮತದಾನದ ಚೀಟಿಗಳನ್ನು ನೀಡಲಾಗುವುದು. ಅಲ್ಲದೆ ವಿ.ಎಚ್.ಎ ತಂತ್ರಾಂಶದ ಮೂಲಕ ಮತದಾರರ ಗುರುತಿನ ಚೀಟಿ ನಮೂದಿಸಿ ಮತಗಟ್ಟೆಯ ಮಾಹಿತಿ ಪಡೆದುಕೊಳ್ಳಬಹುದು ಎಂದರು.

ಮತಗಟ್ಟೆಗಳ ಬಳಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಅದರಂತೆ ಮತಗಟ್ಟೆಗಳ ಬಳಿ ಪಾರ್ಕಿಂಗ್ ವ್ಯವಸ್ಥೆ, ವಿಕಲಚೇತನರಿಗಾಗಿ ರ‍್ಯಾಂಪ್ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ, ಸರತಿ ಸಾಲಿನ ವ್ಯವಸ್ಥೆ, ಮತ ಚಲಾಯಿಸಲು ಬರುವವರಿಗೆ ಬಿಸಿಲು ಬೀಳದಂತೆ ಪೆಂಡಾಲ್ ವ್ಯವಸ್ಥೆ, ವಿಶೇಷವಾಗಿ ಮಹಿಳೆಯರಿಗಾಗಿ ಪಿಂಕ್ ಬೂತ್‌ಗಳು ಸೇರಿದಂತೆ ವಿವಿಧ ಥೀಮ್ ಆಧಾರಿತ ಬೂತ್‌ಗಳನ್ನು ಸ್ಥಾಪಿಸಲಾಗುವುದು ಎಂದು ಹೇಳಿದರು.

'ಪ್ರಗತಿ ಕಾಮಗಾರಿಗಳ ಪಟ್ಟಿ ಕೊಡಿ': ಬಿಬಿಎಂಪಿ ವ್ಯಾಪ್ತಿಯ ಎಲ್ಲಾ ಎಂಟು ವಲಯಗಳ ವ್ಯಾಪ್ತಿಯಲ್ಲಿ ಯೋಜನಾ ವಿಭಾಗ, ಕೆರೆಗಳ ವಿಭಾಗ, ರಾಜಕಾಲುವೆ ವಿಭಾಗ ಸೇರಿದಂತೆ ಇನ್ನಿತರೆ ವಿಭಾಗಗಳಿಗೆ ಸಂಬಂಧಿಸಿದಂತೆ ಪ್ರಗತಿಯಲ್ಲಿರುವ ಕಾಮಗಾರಿಗಳ ಪಟ್ಟಿ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾರ್ಯಾದೇಶ ನೀಡಿ ಕೆಲಸ ಪ್ರಾರಂಭಿಸಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಬಾರದು. ಹೊಸ ಟೆಂಡರ್, ಹೊಸದಾಗಿ ಕಾರ್ಯಾದೇಶ ನೀಡು ವಂತಿಲ್ಲ. ಚುನಾವಣಾ ನೀತಿ ಸಂಹಿತೆ ನಿಯಮ ಉಲ್ಲಂಘಿಸುವುದು ಕಂಡು ಬಂದರೆ ಚುನಾವಣಾ ಆಯೋಗದಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ಹೇಳಿದರು.

ಮದ್ಯ, ಹಣ ವಶ

ಬಿಬಿಎಂಪಿ ವ್ಯಾಪ್ತಿಯಲ್ಲಿ ಈವರೆಗೆ ₹2.76 ಕೋಟಿ ಮೌಲ್ಯದ ಮದ್ಯ ಹಾಗೂ ನಗದನ್ನು ವಶಪಡಿಸಿಕೊಳ್ಳಲಾಗಿದೆ. 28 ಪ್ರಕರಣಗಳಲ್ಲಿ ₹55.49 ಲಕ್ಷ ನಗದು, 41 ಪ್ರಕರಣಗಳಲ್ಲಿ ₹29.22 ಲಕ್ಷ ಮೌಲ್ಯದ ಮದ್ಯ, 30 ಪ್ರಕರಣಗಳಲ್ಲಿ ₹1.91 ಕೋಟಿ ಮೌಲ್ಯದ ಹೊಲಿಗೆ ಯಂತ್ರ, ಸೀರೆ, ವಾಹನ, ಶಾಲು, ಕುಕ್ಕರ್, ಪುಸ್ತಕ, ಬಾಕ್ಸ್, ಬಕೆಟ್, ತವಾ, ಸ್ಟಿಕ್ಕರ್ಸ್, ಟೋಪಿ, ಚಿನ್ನ, ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸೂಕ್ಷ್ಮ ವಿಧಾನಸಭೆ ಕ್ಷೇತ್ರಗಳು



ಯಶವಂತಪುರ, ದಾಸರಹಳ್ಳಿ, ಮಹದೇವಪುರ, ಬೆಂಗಳೂರು ದಕ್ಷಿಣ, ಆನೇಕಲ್, ಕೆ.ಆರ್. ಪುರ, ಮಲ್ಲೇಶ್ವರ, ಹೆಬ್ಬಾಳ, ಸರ್ವಜ್ಞನಗರ, ಸಿ.ವಿ. ರಾಮನ್ ನಗರ, ರಾಜರಾಜೇಶ್ವರಿನಗರ, ಶಿವಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಪದ್ಮನಾಭನಗರ, ಜಯನಗರ, ಬೊಮ್ಮನಹಳ್ಳಿ.

ಏ.10ರವರೆಗೆ ಅವಕಾಶ

ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಿಕೊಳ್ಳಲು ಏ.10ರವರೆಗೆ ಅವಕಾಶವಿದೆ. ಹೀಗಾಗಿ ಯಾರ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲವೋ ಅವರು ನೋಂದಣಿ ಮಾಡಿಸಿಕೊಳ್ಳಬಹುದು. ಅಲ್ಲದೆ, ಏ.1ರಂದು 18 ವರ್ಷ ತುಂಬುವವರೂ ಮತದಾರರ ಪಟ್ಟಿಗೆ ಸೇರಿಸಿಕೊಳ್ಳಲು ಅವಕಾಶವಿದೆ ಎಂದು ತುಷಾರ್ ಗಿರಿನಾಥ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮತಗಟ್ಟೆ ವಿವರವನ್ನು ಆ್ಯಪ್‌ನಲ್ಲಿ ನೀಡಲಾಗುತ್ತದೆ. ಕ್ಯೂಆರ್ ಕೋಡ್‌ಗಳಲ್ಲೂ ಮತದಾನ ಕೇಂದ್ರ ಮಾಹಿತಿ ಪಡೆದುಕೊಳ್ಳಬಹುದು. ಮತಗಟ್ಟೆಗಳಲ್ಲಿ ರ‍್ಯಾಂಪ್, ಕುಡಿಯುವ ನೀರು, ಪೀಠೋಪಕರಣ, ನಿರೀಕ್ಷಣಾ ಕೊಠಡಿ, ಸಹಾಯ ಡೆಸ್ಕ್, ಶೌಚಾಲಯ, ಫಲಕ ಸೇರಿದಂತೆ ಎಲ್ಲ ರೀತಿಯ ವ್ಯವಸ್ಥೆ ಇರುತ್ತವೆ. ಪಿಂಕ್ ಮತಗಟ್ಟೆಗಳು, ಗೋಗ್ರೀನ್ ಮತಗಟ್ಟೆಗಳು, ಹಿರಿಯ ನಾಗರಿಕ ಸ್ನೇಹಿತ ಮತದಾನ ಕೇಂದ್ರಗಳನ್ನು ರಚಿಸಲಾಗುತ್ತದೆ ಎಂದು ಹೇಳಿದರು.

2018ರ ವಿಧಾನಸಭಾ ಚುನಾವಣೆಯಲ್ಲಿ ಪಾಲಿಕೆಯ ಎಲ್ಲಾ 28 ವಿಧಾನಸಭಾ ಕ್ಷೇತ್ರಗಳ ಸರಾಸರಿ ಮತದಾನದ ಶೇ 55.04ರಷ್ಟಾಗಿದೆ. ಈ ಬಾರಿ ಮತದಾರರ ಶೇಕಡಾವಾರು ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಎಲ್ಲರೂ ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕಿದೆ ಎಂದರು.

ಮತದಾರರ ಅಂಕಿ ಅಂಶ

95,13,830	ಒಟ್ಟು ಮತದಾರರು
49,26,270	ಪುರುಷರು
45,85,824	ಮಹಿಳೆಯರು
1,763	ತೃತೀಯ ಲಿಂಗಿಗಳು
1,08,494	18ರಿಂದ 19 ವರ್ಷದ ಮತದಾರರು
8,615	ಒಟ್ಟು ಮತಗಟ್ಟೆಗಳು
2,36,719	80 ವರ್ಷ ಮೇಲ್ಪಟ್ಟ ಮತದಾರರು
2,217	ಸೂಕ್ಷ್ಮ ಮತಗಟ್ಟೆಗಳು

'ಗ್ಯಾರಂಟಿ'ಗಳ ಪಟ್ಟಿ ಬಿಡುಗಡೆ

300 ಯೂನಿಟ್ ಉಚಿತ ವಿದ್ಯುತ್: ಎಎಪಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಗೆ ಆಮ್ ಆದ್ಮಿ ಪಾರ್ಟಿಯ (ಎಎಪಿ) 'ಗ್ಯಾರಂಟಿ'ಗಳ ಪಟ್ಟಿಯನ್ನು ಬುಧವಾರ ಪಕ್ಷದ ರಾಷ್ಟ್ರೀಯ ವಕ್ತಾರ ಹಾಗೂ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಬಿಡುಗಡೆ ಮಾಡಿದರು.

'ಆಮ್ ಆದ್ಮಿ ಪಾರ್ಟಿ ಆಶ್ವಾಸನೆಗಳ ಬದಲು ಗ್ಯಾರಂಟಿ ಕಾರ್ಡ್ ನೀಡುತ್ತೇವೆ. ಇದೊಂದು ಕರಾರುಪತ್ರವಾಗಿದ್ದು, ಇವೆಲ್ಲವನ್ನೂ ಶೇಕಡ 100ರಷ್ಟು ಈಡೇರಿಸುತ್ತೇವೆ. ಪ್ರಣಾಳಿಕೆಯಲ್ಲಿದ್ದ ಎಲ್ಲ ಗ್ಯಾರಂಟಿಗಳನ್ನು ದೆಹಲಿಯಲ್ಲಿ ಈಡೇರಿಸಿದ್ದೇವೆ. ಪಂಜಾಬ್‌ನಲ್ಲಿ ಕೂಡ ಒಂದೊಂದಾಗಿ ಜಾರಿಯಾಗುತ್ತಿವೆ' ಎಂದು ಸಂಜಯ್ ಸಿಂಗ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ರಾಜ್ಯದಲ್ಲಿ ಪ್ರತಿ ಮನೆಗೆ ತಿಂಗಳಿಗೆ 300 ಯೂನಿಟ್ ಉಚಿತ ವಿದ್ಯುತ್, ನಿರುದ್ಯೋಗಿಗಳಿಗೆ ತಿಂಗಳಿಗೆ ₹3000 ಭತ್ಯೆ, ಗುಣಮಟ್ಟದ ಆರೋಗ್ಯ ಸೇವೆಗಾಗಿ ಕ್ಲಿನಿಕ್‌ಗಳು, ಸರ್ಕಾರಿ ಶಾಲೆಗಳ ಅಭಿವೃದ್ಧಿ, ಹಳೆ ಪಿಂಚಣಿ ಯೋಜನೆ ಜಾರಿ ಮುಂತಾದ ಒಟ್ಟು ಹತ್ತು ವಲಯಗಳಿಗೆ ಸಂಬಂಧಿಸಿದ ಪ್ರಮುಖ ಗ್ಯಾರಂಟಿಗಳನ್ನು ಘೋಷಿಸಲಾಗಿದೆ' ಎಂದು ತಿಳಿಸಿದರು.

ನಗರದಲ್ಲಿ ಬುಧವಾರ ಆಮ್ ಆದ್ಮಿ ಪಾರ್ಟಿಯ ರಾಜ್ಯ ಕಾರ್ಯಾಧ್ಯಕ್ಷ ಮೋಹನ್ ದಾಸರಿ, ಪ್ರಣಾಳಿಕೆ ಸಮಿತಿ ಅಧ್ಯಕ್ಷ ಡಾ. ಅಶ್ವಿನ್ ಮಹೇಶ್, ರಾಷ್ಟ್ರೀಯ ವಕ್ತಾರ ಸಂಜಯ್ ಸಿಂಗ್, ರಾಜ್ಯಾಧ್ಯಕ್ಷ ಪೃಥ್ವಿರೆಡ್ಡಿ, ರಾಜ್ಯ ಸಂವಹನಾ ಉಸ್ತುವಾರಿ ಬ್ರಿಜೇಶ್ ಕಾಳಪ್ಪ ಅವರು 'ಗ್ಯಾರಂಟಿ'ಗಳ ಪಟ್ಟಿ ಬಿಡುಗಡೆ ಮಾಡಿದರು.

'ಆಮ್ ಆದ್ಮಿ ಪಾರ್ಟಿ ರಾಷ್ಟ್ರೀಯ ಪಕ್ಷದ ಸ್ಥಾನಮಾನಕ್ಕೆ ಕಾನೂನಿನ ಪ್ರಕಾರ ಅರ್ಹವಾಗಿದ್ದರೂ ಚುನಾವಣಾ ಆಯೋಗವು ಇನ್ನೂ ಅಧಿಕೃತವಾಗಿ ಘೋಷಿಸಿಲ್ಲ. ಸ್ಥಾನಮಾನ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹಲವು ತಿಂಗಳುಗಳಿಂದ ಬಾಕಿ ಉಳಿಸಿಕೊಂಡಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಮಾತನಾಡಿ, 'ಕಳೆದ ಒಂದು ತಿಂಗಳಿಂದ ಪ್ರಣಾಳಿಕೆ ರಚಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ. ಜನರಿಂದ ಜನರಿಗಾಗಿ ಪ್ರಣಾಳಿಕೆ ಸಿದ್ಧಪಡಿಸಲಾಗುತ್ತಿದೆ. ರಾಜ್ಯದ ಪ್ರತಿಯೊಂದು ವರ್ಗದ ಜನರ ಸಮಸ್ಯೆಗಳಿಗೆ ಪ್ರಣಾಳಿಕೆಯಲ್ಲಿ ಪರಿಹಾರ ಇರಲಿದೆ' ಎಂದು ಹೇಳಿದರು.

ಬೋಪಯ್ಯ, ಅಪ್ಪಚ್ಚು ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗಿನ ಪುಷ್ಪಗಿರಿ ಪಕ್ಷಿಧಾಮ, ಅಭಯಾರಣ್ಯದ ಅನುಸೂಚಿತ ಪ್ರದೇಶದೊಳಗೆ ಕಾನೂನು ಉಲ್ಲಂಘಿಸಿ ರಸ್ತೆ ನಿರ್ಮಿಸಿದ ಆರೋಪ ಹೊತ್ತಿರುವ ಶಾಸಕರಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್ ವಿರುದ್ಧ ಹಸಿರು ನ್ಯಾಯಪೀಠ ಆದೇಶದಂತೆ ರಾಜ್ಯ ಸರ್ಕಾರ ಕ್ರಮ ಜರುಗಿಸಬೇಕು ಎಂದು ಕಾಂಗ್ರೆಸ್ ಮುಖಂಡ ಬಿ.ಕೆ.ಚಂದ್ರಶೇಖರ್ ಒತ್ತಾಯಿಸಿದ್ದಾರೆ.

ಕೊಡಗಿನವರೇ ಆದ ಭಾರತೀಯ ವಾಯುಪಡೆಯ ನಿವೃತ್ತ ಮುಖ್ಯಸ್ಥ ನಂದಾ ಕಾರ್ಯಪ್ಪ ಅವರು ಇಬ್ಬರ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ 10 ವರ್ಷಗಳಿಗೂ ಮುಂಚೆ ರಿಟ್ ಅರ್ಜಿ ಸಲ್ಲಿಸಿದ್ದರು. ಸುಪ್ರೀಂಕೋರ್ಟ್ ಕೇಂದ್ರ ಅಧಿಕಾರಯುಕ್ತ ಸಮಿತಿ ರಚಿಸಿತ್ತು. ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ ಸಮಿತಿ ಶಾಸಕರ ಸುಳ್ಳು ನೆಪಗಳನ್ನು ತಿರಸ್ಕರಿಸಿ ಅವರ ವಿರುದ್ಧ ಹಾಗೂ ಅಂದಿನ ಜಿಲ್ಲಾಧಿಕಾರಿ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿತ್ತು. ನಂತರ ರಾಷ್ಟ್ರೀಯ ಹಸಿರು ಪೀಠ 2017ರಲ್ಲಿ ಶಾಸಕರಿಗೆ ನೋಟಿಸ್ ನೀಡಿತ್ತು. ನಾಲ್ಕು ವರ್ಷ ನೋಟಿಸ್ ಕಡೆಗಣಿಸಿದ್ದರು. ವಿವರಣೆಯನ್ನೂ ನೀಡಿರಲಿಲ್ಲ ಎಂದು ವಿವರಿಸಿದ್ದಾರೆ.

ಈ ಎಲ್ಲ ಬೆಳವಣಿಗೆಗಳ ನಂತರ ಅಗತ್ಯ ಶಿಕ್ಷೆಯ ಪ್ರಕ್ರಿಯೆ ಆರಂಭಿಸುವಂತೆ ಹಸಿರು ನ್ಯಾಯಪೀಠ ಸರ್ಕಾರಕ್ಕೆ ಆದೇಶಿಸಿತ್ತು. ಆದರೆ, ರಾಜ್ಯ ಸರ್ಕಾರವು ಆದೇಶವನ್ನು ಪಾಲಿಸಿರಲಿಲ್ಲ. ಮೂರು ತಿಂಗಳ ಒಳಗೆ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನ್ಯಾಯಪೀಠ ಸೂಚಿಸಿದೆ ಎಂದು ಹೇಳಿದ್ದಾರೆ.

ಹಿಂದೆ ಪತ್ರಿಕಾ ಸಂದರ್ಶನದಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ್ದ ತಮಗೆ ಅಂದು ವಿಧಾನಸಭಾಧ್ಯಕ್ಷರಾಗಿದ್ದ ಬೋಪಯ್ಯ 'ಹಕ್ಕು ಬಾಧ್ಯತಾ ಸಮಿತಿ' ಮುಂದೆ ಕರೆಸಿದ್ದರು. ಹಕ್ಕು ಬಾಧ್ಯತಾ ಸಮಿತಿಗೆ ವಿಷಯ ಮನವರಿಕೆ ಮಾಡಿಸಿದ್ದೆ. ಈಗ ಶಿಕ್ಷೆ ಖಚಿತವಾಗಿದೆ. ಶಾಸಕರ ವಿರುದ್ಧ ಶಿಸ್ತು ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಟಿಕೆಟ್ ಆಕಾಂಕ್ಷಿ ಜಿ. ಧನಂಜಯ್ ಪ್ರಚಾರಕ್ಕೆ ಕಾಂಗ್ರೆಸ್ಸಿಗರಿಂದಲೇ ಅಡ್ಡಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ದಾಸರಹಳ್ಳಿ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ನಾನೇ' ಎಂದು ಪ್ರಚಾರ ಹಮ್ಮಿಕೊಂಡಿದ್ದ ಜಿ. ಧನಂಜಯ್ ಅವರ ವಿರುದ್ಧ ಕಾಂಗ್ರೆಸ್ ಪಕ್ಷದ ಇತರೆ ಅಭ್ಯರ್ಥಿಗಳು ಬುಧವಾರ ಅಡ್ಡಿಪಡಿಸಿದ್ದಾರೆ.

ಕ್ಷೇತ್ರದ ಇತರೆ ಟಿಕೆಟ್ ಆಕಾಂಕ್ಷಿಗಳಾದ ಕೆ.ಸಿ. ಅಶೋಕ್, ಕೆ. ನಾಗಭೂಷಣ್ ಹಾಗೂ ಗೀತಾ ಶಿವರಾಮ್ ಅವರು ತಮ್ಮ ಬೆಂಬಲಿಗರೊಂದಿಗೆ ಬಂದು, ಹೈಕಮಾಂಡ್ ಅಧಿಕೃತ ಅಭ್ಯರ್ಥಿ ಹೆಸರು ಪ್ರಕಟಿಸಿಲ್ಲ. ಆದ್ದರಿಂದ ಚುನಾವಣಾ ಪ್ರಚಾರ ಕೈಗೊಳ್ಳಬಾರದು ಎಂದು ಗೋ ಬ್ಯಾಕ್ ಧನಂಜಯ್ ಎಂದು ಕೂಗುತ್ತಾ ಪ್ರಚಾರ ಕಾರ್ಯಕ್ಕೆ ಅಡ್ಡಿಪಡಿಸಿದರು. ಗಂಗಮ್ಮನ ಗುಡಿ ಪೊಲೀಸರು ಸ್ಥಳಕ್ಕೆ ಧಾವಿಸಿ ಕಾರ್ಯಕರ್ತರನ್ನು ಚದುರಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿರುವ ಜಿ. ಧನಂಜಯ್ ಅವರು ಚುನಾವಣಾ ಪ್ರಚಾರ ಮಾಡುವಾಗ ಪಕ್ಷದ ಇತರೆ ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರು ಅಡ್ಡಿಪಡಿಸಿದರು.

ಈ ವೇಳೆ ಮಾತನಾಡಿದ ಜಿ ಧನಂಜಯ್, 'ನಾನು ಕ್ಷೇತ್ರದ ಶಾಸಕರ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿದ್ದೇನೆ. ಆದರೆ, ಇಷ್ಟು ವರ್ಷಗಳಿಂದ ಕಾಂಗ್ರೆಸ್‌ನಲ್ಲಿರುವ ಇವರು ಯಾಕೆ ಶಾಸಕರ ವಿರುದ್ಧ ಮಾತನಾಡುತ್ತಿಲ್ಲ. ಇವರು ಯಾರೂ ಪಕ್ಷದ ಪರವಾಗಿ ಕೆಲಸ ಮಾಡುತ್ತಿಲ್ಲ. ಜೆಡಿಎಸ್ ಪಕ್ಷದವರಿಂದ ₹15 ಕೋಟಿ ಪಡೆದು ಕಾಂಗ್ರೆಸ್ ಪಕ್ಷ ಸೋಲಿಸಲು ಕೆಲ ಶಕುನಿಗಳು ತೊಂದರೆ ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

'ಅವರು ಹಣ ಪಡೆದಿಲ್ಲ ಎಂದಾದರೆ ಆಂಜನೇಯನ ಮೇಲೆ ಆಣೆ ಮಾಡಲಿ. ಇದು ಸುಳ್ಳು ಎಂದಾದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ' ಎಂದರು.

ಈ ಬಾರಿ ನನಗೆ ಅಗ್ನಿಪರೀಕ್ಷೆ: ರೇವಣ್ಣ

ಹಾಸನ: 'ಜಿಲ್ಲೆಯಲ್ಲಿ 25 ವರ್ಷಗಳಿಂದ ರಾಜಕೀಯ ಮಾಡುತ್ತಿದ್ದೇನೆ. ಜಿಲ್ಲೆ ಏನು ಎಂಬುದು ನನಗೆ ಗೊತ್ತಿದೆ. ನಮ್ಮ ಮುಖಂಡರ ಜೊತೆಗೆ ಕುಳಿತು ಮಾತನಾಡುತ್ತೇನೆ. ಇದರಲ್ಲಿ ಯಾವುದೇ ದಾಕ್ಷಿಣ್ಯ ಇಲ್ಲ. ಹೆದರಿಕೊಂಡು ಓಡಿ ಹೋಗಲ್ಲ. ಜಿಲ್ಲೆಯಲ್ಲಿ ಈ ಬಾರಿ ನನಗೆ ಅಗ್ನಿಪರೀಕ್ಷೆ ನಡೆಯಲಿದೆ' ಎಂದು ಶಾಸಕ ಎಚ್.ಡಿ. ರೇವಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ರೇವಣ್ಣ ಜಿಲ್ಲೆಗೆ ದುಡಿದಿದ್ದಾನೆ ಎಂದರೆ ಜಿಲ್ಲೆಯ ಜನ ನನ್ನ ಕೈಹಿಡಿಯಲಿ. ಇಲ್ಲವೆಂದರೆ, ಅವರೇ ತೀರ್ಮಾನಿಸಲಿ. ಕಾರ್ಯಕರ್ತರೆಲ್ಲ ಒಟ್ಟಾಗಿದ್ದೇವೆ. ಹಾಸನದಲ್ಲಿ ಸಮರ್ಥ ನಾಯಕರಿಲ್ಲ ಎಂದು ತಿಳಿದುಕೊಳ್ಳಬೇಡಿ' ಎಂದರು.

ಹಾಸನ ಟಿಕೆಟ್ ಆಕಾಂಕ್ಷಿ ಎಚ್.ಪಿ. ಸ್ವರೂಪ್ ಅವರು ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ ಕುರಿತಂತೆ, 'ಅವರು ಯಾರೆಂದು ಗೊತ್ತಿಲ್ಲ. ಹಾಸನ ಕ್ಷೇತ್ರದಲ್ಲಿ ಸಾಮಾನ್ಯ ಕಾರ್ಯಕರ್ತನನ್ನು ನಿಲ್ಲಿಸುವುದಾಗಿ ಕುಮಾರಸ್ವಾಮಿ ಹೇಳಿದ್ದಾರೆ. ಆ ಸಾಮಾನ್ಯ ಕಾರ್ಯಕರ್ತ ಯಾರು ಎಂದು ನೋಡೋಣ' ಎಂದಷ್ಟೇ ಹೇಳಿದರು.

ಜಾತಿ ಗಲಭೆಗೆ ಕಾಂಗ್ರೆಸ್ ಷಡ್ಯಂತ್ರ: ಎನ್. ರವಿಕುಮಾರ್ ಆರೋಪ

ಗಲಭೆ ಮೇಲೆ ಕಣ್ಣಿಡಲು ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷವು ರಾಜ್ಯದ ವಿವಿಧ ಕಡೆಗಳಲ್ಲಿ ಗಲಭೆ ಎಬ್ಬಿಸಲು ಪ್ರಯತ್ನಿಸುತ್ತಿದ್ದು, ಅದರ ಮೇಲೆ ಕಣ್ಣಿಟ್ಟು, ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ದೂರು ನೀಡಲು ಕಾವಲು ಸಮಿತಿ ರಚನೆ ಮಾಡಲಾಗುವುದು ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕಾರಿಪುರ ಮತ್ತು ಇತರ ಕಡೆಗಳಲ್ಲಿ ಹಿಂಸಾಚಾರಕ್ಕೆ ಕಾಂಗ್ರೆಸ್ ಪಕ್ಷದ ಪಿತೂರಿಯೇ ಕಾರಣವಾಗಿದೆ ಎಂದು ಅವರು ದೂರಿದರು.

'ನಮ್ಮ ಸರ್ಕಾರ ಯಾವುದೇ ಜಾತಿಗೂ ಅನ್ಯಾಯ ಮಾಡಿಲ್ಲ. ಸದಾಶಿವ ಆಯೋಗ ಶಿಫಾರಸು ಮಾಡಿದ್ದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಮೀಸಲಾತಿ ನೀಡಲಾಗಿದೆ. ಬಂಜಾರ, ಕೊರಮ, ಕೊರಚ ಸಮುದಾಯಕ್ಕೆ ಸದಾಶಿವ ಆಯೋಗ ಶೇ 3 ಶಿಫಾರಸು ಮಾಡಿತ್ತು, ಬೊಮ್ಮಾಯಿ ಅವರು ಶೇ 4.5 ರಷ್ಟು ಮೀಸಲು ನೀಡಿದ್ದಾರೆ. ಇದನ್ನು ಸಹಿಸದ ಕಾಂಗ್ರೆಸ್ ಗಲಭೆ ಸೃಷ್ಟಿಸುತ್ತಿದೆ' ಎಂದು ತಿಳಿಸಿದರು.

ಪ್ರತಿ 10 ವರ್ಷಗಳಿಗೊಮ್ಮೆ ಮೀಸಲಾತಿ ಪರಾಮರ್ಶೆ ಮಾಡಬೇಕು ಎಂದು ಡಾ.ಅಂಬೇಡ್ಕರ್ ಅವರೇ ಹೇಳಿದ್ದರು. ಆದರೆ, ಕಾಂಗ್ರೆಸ್ ಪಕ್ಷ ತನ್ನ ಅಧಿಕಾರದ ಅವಧಿಯಲ್ಲಿ ಯಾವತ್ತೂ ಪರಾಮರ್ಶೆ ನಡೆಸಿರಲಿಲ್ಲ. ಬಸವರಾಜ ಬೊಮ್ಮಾಯಿ ಮೀಸಲಾತಿ ಪರಾಮರ್ಶೆ ನಡೆಸಿ, ಜನಸಂಖ್ಯೆಗೆ ಅನುಗುಣವಾಗಿ ಪರಿಷ್ಕರಣೆ ಮಾಡಿದ್ದಾರೆ ಎಂದು ಅವರು ಹೇಳಿದರು.

ಸಿದ್ದರಾಮಯ್ಯ ಅವರು ಲಿಂಗಾಯತರನ್ನು ಒಡೆಯಲು ಮುಂದಾದರು. ಈಗ ನಾವು ಲಿಂಗಾಯತರಿಗೆ ಶೇ 7ರಷ್ಟು ಮೀಸಲಾತಿ ಕೊಟ್ಟಿದ್ದು, ಆ ಸಮಾಜ ಖುಷಿಯಿಂದಿದೆ. ಒಕ್ಕಲಿಗರಿಗೆ ಶೇ 6ರಷ್ಟು ಮೀಸಲಾತಿ ನೀಡಿದ್ದು, ಎರಡೂ ಸಮಾಜಗಳು ಸಂತಸದಿಂದಿವೆ ಎಂದರು.

'ಹಿಂದುತ್ವ ನಮ್ಮ ರಕ್ತ– ಭಾವನೆ'

'ಹಿಂದುತ್ವ ನಮ್ಮ ರಕ್ತ, ಭಾವನೆ ಮತ್ತು ಶಕ್ತಿ. ನಮ್ಮದು ಚುನಾವಣೆ ಹಿಂದುತ್ವವಲ್ಲ. ಹಿಂದುತ್ವ ಎಂದರೆ ಎಲ್ಲರನ್ನು ಒಳಗೊಂಡ ಅಭಿವೃದ್ಧಿ' ಎಂದು ಬಿಜೆಪಿ ಚುನಾವಣಾ ನಿರ್ವಹಣಾ ಸಂಚಾಲಕಿ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚುನಾವಣೆಯನ್ನು ಅಭಿವೃದ್ಧಿ ಕಾರ್ಯಸೂಚಿಯ ಮೇಲೆಯೇ ಎದುರಿಸುತ್ತೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಯ ಫಲಾನುಭವಿಗಳನ್ನು ತಲುಪಿ ಪಕ್ಷದ ಪರವಾಗಿ ಮತ ಚಲಾಯಿಸಲು ಮನವಿ ಮಾಡುತ್ತೇವೆ' ಎಂದರು.

'ನಮ್ಮ ಹಿಂದುತ್ವ ಚುನಾವಣೆಯ ಹಿಂದುತ್ವ ಅಲ್ಲ. ನಿರಂತರವಾಗಿಯೂ ಹಿಂದುತ್ವವೇ ನಮ್ಮ ಪಕ್ಷದ ಧ್ಯೇಯ' ಎಂದರು.

'ಈ ಬಾರಿ ಚುನಾವಣೆಯಲ್ಲಿ ನಾವು ಯಾವುದನ್ನು ಕಾರ್ಯಗತ ಮಾಡಲು ಸಾಧ್ಯವಿದೆಯೋ ಅದನ್ನು ಮಾತ್ರ ಪ್ರಣಾಳಿಕೆಯಲ್ಲಿ ಹೇಳುತ್ತೇವೆ. ಕಾಂಗ್ರೆಸ್‌ನಂತೆ ಸುಳ್ಳು ಭರವಸೆಗಳನ್ನು ಕೊಡಲು ಹೋಗುವುದಿಲ್ಲ' ಎಂದು ಶೋಭಾ ಹೇಳಿದರು. ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ದುಡ್ಡಿನ ಮದದಿಂದ ಹಣವನ್ನು ಕಲಾವಿದರ ಮೇಲೆ ಎಸೆದಿದ್ದಾರೆ. ಈ ಮೂಲಕ ಅವರು ಕಲಾವಿದರನ್ನು ಅವಮಾನಗೊಳಿಸಿದ್ದಾರೆ ಎಂದರು.

'ಅನರ್ಹತೆ: ಒಂದು ತಿಂಗಳು ಪ್ರತಿಭಟನೆ'

ಬೆಂಗಳೂರು: 'ರಾಹುಲ್ ಗಾಂಧಿ ಪ್ರಕರಣದಲ್ಲಿ ರಾಷ್ಟ್ರಪತಿಗೆ ಅನರ್ಹತೆಯ ಪ್ರಸ್ತಾವವನ್ನು ಸಲ್ಲಿಸದೇ ಅನರ್ಹಗೊಳಿಸಲಾಗಿದೆ. ಈ ವಿಚಾರವಾಗಿ ಮುಂದಿನ ಒಂದು ತಿಂಗಳು ದೇಶದಾದ್ಯಂತ ಪ್ರತಿಭಟನೆ ನಡೆಸಲಾಗುವುದು' ಎಂದು ಕಾಂಗ್ರೆಸ್ ಮುಖಂಡ, ಕೇಂದ್ರದ ಮಾಜಿ ಸಚಿವ ಆನಂದ್ ಶರ್ಮಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್ 8ರ 1,2,3,4ರಲ್ಲಿ ಯಾವ ಅಪರಾಧಕ್ಕೆ ಅನರ್ಹಗೊಳಿಸಲಾಗುವುದು ಎಂದು ವಿವರಿಸಲಾಗಿದೆ. ಇಲ್ಲಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಮೊದಲೇ ಅನರ್ಹಗೊಳಿಸಲಾಗಿದೆ. ಹೀಗಾಗಿ, ಈ ಅನರ್ಹತೆ ಊರ್ಜಿತ ಆಗುವುದಿಲ್ಲ' ಎಂದರು.

'ವಿಶ್ವದಲ್ಲೇ ಮೊದಲ ಬಾರಿಗೆ ಆಡಳಿತ ಪಕ್ಷವೇ ಅಧಿವೇಶನದ ಕಲಾಪಕ್ಕೆ ಅಡ್ಡಿಪಡಿಸುವ ಕೆಟ್ಟ ಸಂಸ್ಕೃತಿ ಆರಂಭವಾಗಿದೆ. ಯಾವುದೇ ಚರ್ಚೆಗೆ ಆಡಳಿತ ಪಕ್ಷ ಅವಕಾಶ ನೀಡುತ್ತಿಲ್ಲ. ಆ ಮೂಲಕ, ಬಿಜೆಪಿ ಸರ್ಕಾರ ಭಯಭೀತವಾಗಿರುವುದು ಸ್ಪಷ್ಟ. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷ ಚರ್ಚೆಗೆ ಎತ್ತಿರುವ ವಿಷಯಗಳು ಬಿಜೆಪಿಯ ನಿದ್ದೆಗೆಡಿಸಿವೆ. ಈಗ ಬಿಜೆಪಿ ಬಲಿಷ್ಠ ಸರ್ಕಾರ ಸಂಸತ್ತಿನಲ್ಲಿ ಚರ್ಚೆಗೆ ಹೆದರಿದರೆ ಯಾವ ಸಂದೇಶ ರವಾನೆಯಾಗುತ್ತಿದೆ ಎಂದು ಜನರೇ ನಿರ್ಧರಿಸಬೇಕು. ಚುನಾಯಿತ ಪ್ರತಿನಿಧಿಗೆ ಸಂಸತ್ತಿನಲ್ಲಿ ಮಾತನಾಡಲು ಅವಕಾಶ ತಿರಸ್ಕರಿಸಲಾಗುತ್ತಿದೆ' ಎಂದು ಅವರು ಆರೋಪಿಸಿದರು.

ಕಾಂಗ್ರೆಸ್ ಕಾರ್ಯಕರ್ತರ ವಶ

ಬೆಂಗಳೂರು: ರಾಹುಲ್ ಗಾಂಧಿ ಅವರನ್ನು ಸಂಸತ್‌ನ ಸದಸ್ಯತ್ವದಿಂದ ಅನರ್ಹಗೊಳಿಸಿರುವ ಕ್ರಮ ಖಂಡಿಸಿ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಅವರ ನೇತೃತ್ವದಲ್ಲಿ ನಗರದ ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಎದುರು ಕಾರ್ಯಕರ್ತರು ಪಂಜಿನ ಮೆರವಣಿಗೆ ನಡೆಸಿದರು.

ಬಳಿಕ ರಸ್ತೆಯಲ್ಲಿ ಮೆರವಣಿಗೆ ನಡೆಸಲು ಮುಂದಾದ ವೇಳೆ ಅವರನ್ನು ವಶಕ್ಕೆ ಪಡೆದುಕೊಂಡು ಬಳಿಕ ಬಿಡುಗಡೆ ಮಾಡಿದರು.

ಬಿ.ವಿ.ಶ್ರೀನಿವಾಸ್ ಮಾತನಾಡಿ, 'ರಾಹುಲ್ ಗಾಂಧಿ ಅವರು ಅದಾನಿ ವಿಷಯ ಕುರಿತು ಪ್ರಶ್ನೆ ಮಾಡಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಸೇಡಿನ ರಾಜಕಾರಣ ಆರಂಭಿಸಿದ್ದಾರೆ. ಇದು ಸಂವಿಧಾನ ವಿರೋಧಿ ಮತ್ತು ಜನವಿರೋಧಿ ಕೇಂದ್ರ ಸರ್ಕಾರವಾಗಿದೆ' ಎಂದು ಆರೋಪಿಸಿದರು.

'ಕೇಂದ್ರ ಸರ್ಕಾರದ ವಿರುದ್ಧ ಮಾತನಾಡುವ ರಾಜಕಾರಣಿಗಳನ್ನು ಹತ್ತಿಕ್ಕಲು ಪ್ರಯತ್ನ ಮಾಡಲಾಗುತ್ತಿದೆ. ಶೇ 40 ಕಮಿಷನ್ ಸರ್ಕಾರ ತೊಲಗಿಸಲು ರಾಜ್ಯದ ಜನರು ಕಾಂಗ್ರೆಸ್ ಪರ ನಿಂತಿದ್ದಾರೆ' ಎಂದು ಹೇಳಿದರು.

ಶೇ 40 ಕಮಿಷನ್ ಸರ್ಕಾರ ತೊಲಗಿಸಲು ರಾಜ್ಯದ ಜನರು ಕಾಂಗ್ರೆಸ್ ಪರ ನಿಂತಿದ್ದಾರೆ ಎಂದು ಹೇಳಿದರು.

ರಾಜ್ಯ ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಚ್.ಎಸ್. ಮಂಜುನಾಥ್ ಗೌಡ ಮಾತನಾಡಿ, 'ಕಳೆದ 9 ವರ್ಷಗಳಿಂದ ಕೇಂದ್ರದ ಬಿಜೆಪಿ ಸರ್ಕಾರ ಪ್ರಜಾಪ್ರಭುತ್ವದ ಮೌಲ್ಯಗಳ ದಮನಕಾರಿ ಮಾಡುತ್ತಿದೆ. ಪ್ರಜಾಪ್ರಭುತ್ವ ಉಳಿಸಲು ಹೋರಾಟ ಮಾಡುವ ಪರಿಸ್ಥಿತಿ ಬಂದಿದೆ' ಎಂದು ಹೇಳಿದರು.

ಸಂಸತ್ ಸದಸ್ಯತ್ವದಿಂದ ರಾಹುಲ್ ಗಾಂಧಿ ಅವರನ್ನು ಅನರ್ಹಗೊಳಿಸಿರುವ ಕ್ರಮ ಖಂಡಿಸಿ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಅವರ ನೇತೃತ್ವದಲ್ಲಿ ನಗರದ ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಎದುರು ಪಂಜಿನ ಮೆರವಣಿಗೆ ನಡೆಯಿತು.

ಅಧಿಕಾರ ದುರುಪಯೋಗಕ್ಕೆ ಸಮಯ ತಳ್ಳಿದರು– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಹಿಂದೆಯೇ ವಿಧಾನಸಭೆ ಚುನಾವಣೆಗೆ ದಿನಾಂಕ ಘೋಷಣೆಯಾಗಿ ನೀತಿ ಸಂಹಿತೆ ಜಾರಿ ಆಗಬೇಕಿತ್ತು. ಆದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರ ಎಷ್ಟು ಸಾಧ್ಯವೋ ಅಷ್ಟು ಅಧಿಕಾರ ದುರುಪಯೋಗ ಮಾಡಿಕೊಳ್ಳಲು ಇಷ್ಟು ದಿನ ಕಾಲ ಸಮಯ ತಳ್ಳಿದರು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಚುನಾವಣೆಗೆ ದಿನಾಂಕ ಘೋಷಿಸಿದ ಬೆನ್ನಲ್ಲೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮೇ 10 ಕೇವಲ ಮತದಾನದ ದಿನವಲ್ಲ, ರಾಜ್ಯದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಬಡಿದೋಡಿಸುವ ಪವಿತ್ರ ದಿನ. ಫೇಲಾದ ಎರಡೂ ಎಂಜಿನ್‌ಗಳ ಬದಲಿಗೆ ಜನರೇ ಹೊಸ ಎಂಜಿನ್ ನಿರ್ಮಾಣ ಮಾಡುವ ದಿನ' ಎಂದು ವಿಶ್ಲೇಷಿಸಿದರು.

'ರಾಜ್ಯದಲ್ಲಿ ಒಂದು ಹಂತದಲ್ಲಿ ಚುನಾವಣೆ ನಡೆಸುವ ಆಯೋಗದ ತೀರ್ಮಾನವನ್ನು ಸ್ವಾಗತಿಸುತ್ತೇವೆ. ಆಯೋಗ ಈ ಬಾರಿ ಸಾಕಷ್ಟು ಸುಧಾರಣೆಗಳನ್ನು ತರಲು ನಿರ್ಧರಿಸಿದ್ದು, ಈ ಬಗ್ಗೆ ನಾವು ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. ಕಳೆದ ನಾಲ್ಕು ವರ್ಷಗಳಿಂದ ಡಬಲ್ ಎಂಜಿನ್ ಸರ್ಕಾರದ ದಬ್ಬಾಳಿಕೆಗೆ ಜನ ಬೇಸತ್ತಿದ್ದು, ಚುನಾವಣೆಯಲ್ಲಿ ಇದಕ್ಕೆ ಜನ ಅಂತ್ಯ-ವಾಡಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚುನಾವಣಾ ಆಯೋಗ ಹೊಸ ಬದಲಾವಣೆ ತರುವ ಬಗ್ಗೆ ಕೇಳಿದಾಗ, 'ನಾವು ಚುನಾವಣಾ ಆಯೋಗಕ್ಕೆ ಪತ್ರ ಬರೆದು ಗುಜರಾತ್ ಚುನಾವಣೆಯಲ್ಲಿ ಬಳಸಿದ ಮತಯಂತ್ರ ಬಳಸಬಾರದು ಎಂದು ಮನವಿ ಮಾಡಿದ್ದೆವು. ಚುನಾವಣೆ ಸಮಯದಲ್ಲಿ ಬೂತ್ ಆರಂಭವಾಗುವ ಮೊದಲು ಎಲ್ಲ ಪಕ್ಷದ ಬೂತ್ ಏಜೆಂಟರಿಗೆ 50 ಮತ ಹಾಕಿ ಪ್ರಯೋಗ ಮಾಡಿ ಮತದಾನ ಆರಂಭಿಸುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಮ್ಮ ಕಾರ್ಯಕರ್ತರಿಗೆ ತರಬೇತಿ ನೀಡುತ್ತೇವೆ' ಎಂದರು.

ತುರ್ತು ಪ್ರಸ್ತಾವಕ್ಕೆ ಸೂಚನೆ

ಬೆಂಗಳೂರು: ಚುನಾವಣಾ ನೀತಿಸಂಹಿತೆಯಿಂದ ವಿನಾಯಿತಿ ಪಡೆಯಲು ತುರ್ತು ಪ್ರಸ್ತಾವಗಳನ್ನು ಮಾತ್ರ ತಮ್ಮ ನೇತೃತ್ವದ ಪರಿಶೀಲನಾ ಸಮಿತಿಗೆ ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಸುತ್ತೋಲೆ ಹೊರಡಿಸಿದ್ದಾರೆ. ನೀತಿಸಂಹಿತೆಯ ಉಲ್ಲಂಘನೆ ಆಗದಂತೆ ವಿವಿಧ ಇಲಾಖೆಗಳು ಎಚ್ಚರಿಕೆ ವಹಿಸಬೇಕು. ನೀತಿಸಂಹಿತೆ ವಿನಾಯ್ತಿ ಬೇಕಿರುವ ಪ್ರಸ್ತಾವಗಳನ್ನು ಕೇಂದ್ರ ಚುನಾವಣಾ ಆಯೋಗಕ್ಕೆ ಸಲ್ಲಿಸಿ, ಅನುಮತಿ ಪಡೆಯಬೇಕು. ಮುಖ್ಯ ಕಾರ್ಯದರ್ಶಿ ನೇತೃತ್ವದ ಪರಿಶೀಲನಾ ಸಮಿತಿ ಅಂತಹ ಪ್ರಸ್ತಾವಗಳನ್ನು ಪರಿಶೀಲಿಸಿ ಆಯೋಗಕ್ಕೆ ಕಳುಹಿಸಬೇಕಾಗುತ್ತದೆ. ತುರ್ತು ಪ್ರಸ್ತಾವಗಳಿದ್ದರೆ, ಸೂಕ್ತ ಸಮರ್ಥನೆಗಳೊಂದಿಗೆ ಸಲ್ಲಿಸಬೇಕು ಎಂದು ಬುಧವಾರ ಹೊರಡಿಸಿರುವ ಸುತ್ತೋಲೆಯಲ್ಲಿ ಸೂಚನೆ ನೀಡಿದ್ದಾರೆ.

ವಿಧಾನಸಭೆ ಚುನಾವಣೆ: ರಾಜಕೀಯ ಪಕ್ಷಗಳ ಮುಖಂಡರ ಜೊತೆ ರೈತ ಸಂಘ ಚರ್ಚೆ

'ರೈತರ ಪ್ರಣಾಳಿಕೆಗೆ ಒಪ್ಪಿಗೆ ನೀಡುವ ಪಕ್ಷಕ್ಕೆ ಬೆಂಬಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರ ಚುನಾವಣಾ ಪ್ರಣಾಳಿಕೆಗೆ ಒಪ್ಪಿಗೆ ನೀಡುವ ಪಕ್ಷಕ್ಕೆ ಬೆಂಬಲ ನೀಡಲಾಗುವುದು. ನಮಗೆ ಯಾವ ಪಕ್ಷವೂ ಶತ್ರುವಲ್ಲ, ಆತ್ಮೀಯವೂ ಅಲ್ಲ' ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ನಗರದಲ್ಲಿ ಬುಧವಾರ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘ, ಪ್ರೆಸ್‌ಕ್ಲಬ್ ಸಹಯೋಗದಲ್ಲಿ ಆಯೋಜಿಸಿದ್ದ ರಾಜಕೀಯ ಪಕ್ಷಗಳ ಮುಖಂಡರ ಜತೆಗಿನ ಮುಖಾಮುಖಿ ಚರ್ಚೆಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಇದುವರೆಗೆ 21 ಸರ್ಕಾರಗಳು ಆಡಳಿತ ನಡೆಸಿವೆ. ಆದರೆ, ರೈತರ ಸ್ಥಿತಿ ಬದಲಾಗಿಲ್ಲ. ದಿನದಿಂದ ದಿನಕ್ಕೆ ಶೋಚನೀಯವಾಗುತ್ತ ಸಾಗಿದೆ. ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ಅಧಿಕಾರಕ್ಕೆ ಬಂದ ಬಳಿಕ ಜಾರಿಗೊಳಿಸುತ್ತಿಲ್ಲ' ಎಂದು ಕಿಡಿಕಾರಿದರು.

'1960ರ ಸಂದರ್ಭದಲ್ಲಿ ಆಹಾರಕ್ಕಾಗಿ ಭಿಕ್ಷೆ ಬೇಡುವ ಸ್ಥಿತಿ ಇತ್ತು. ಈಗ ವಿದೇಶಕ್ಕೆ ಆಹಾರ ಪದಾರ್ಥ ರಫ್ತು ಮಾಡಲಾಗುತ್ತಿದೆ. ಈ ಸಾಧನೆಗೆ ರೈತರ ಶ್ರಮವೇ ಕಾರಣ. ದೇಶದ ಜನರನ್ನು ಹೊಟ್ಟೆ ಹಸಿವಿನ ಸಂಕಷ್ಟದಿಂದ ಪಾರು ಮಾಡಿದ್ದು ರೈತರೇ ಹೊರತು ಐಟಿ ಕಂಪನಿಗಳಲ್ಲ. ಆದರೆ, ರೈತರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಸರ್ಕಾರಗಳು ನಿರ್ಲಕ್ಷ್ಯ ತಾಳಿವೆ' ಎಂದು ಆರೋಪಿಸಿದರು.

ರೈತ ಮುಖಂಡ ತೇಜಸ್ವಿ ವಿ ಪಟೇಲ್, 'ರೈತರ ಬದುಕು ಹಸನು ಮಾಡುವ ಯೋಜನೆಗಳನ್ನು ರಾಜಕೀಯ ಪಕ್ಷಗಳು ಹೊಂದಿಲ್ಲ. ಬೆಳೆ ವಿಮೆಯಲ್ಲೂ ರೈತರಿಗೆ ಅನ್ಯಾಯವಾಗುತ್ತದೆ. ಚುನಾವಣೆಯಲ್ಲಿ ಈ ಬಾರಿ ಅತಿ ಕಡಿಮೆ ಖರ್ಚು ಮಾಡುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು' ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ಸದಸ್ಯ ಪ್ರೊ.ಕೆ.ಇ. ರಾಧಾಕೃಷ್ಣ ಮಾತನಾಡಿ, 'ರೈತರ ಕಲ್ಯಾಣಕ್ಕಾಗಿ ಕಾಲಮಿತಿ ಕ್ರಮಗಳನ್ನು ಪಕ್ಷವು ಕೈಗೊಳ್ಳಲಿದೆ. ಪ್ರಣಾಳಿಕೆಯಲ್ಲಿ ಯೋಜನೆಗಳನ್ನು ಪ್ರಕಟಿಸುವ ಜತೆಗೆ, ಬಜೆಟ್‌ನಲ್ಲಿ ಎಷ್ಟು ಹಣ ನಿಗದಿಪಡಿಸಲಾಗುವುದು ಎನ್ನುವುದನ್ನು ಸಹ ತಿಳಿಸಲಾಗುವುದು' ಎಂದು ತಿಳಿಸಿದರು.

'ವಿವಿಧ ಯೋಜನೆಗಳಲ್ಲಿ ಜಮೀನು ನೀಡುವ ರೈತರನ್ನು ಸಹ ಪಾಲುದಾರರನ್ನಾಗಿ ಮಾಡಿಕೊಳ್ಳಲಾಗುವುದು. ಅಣೆಕಟ್ಟುಗಳ ಹೂಳೆತ್ತಲು ಆದ್ಯತೆ ರೂಪಿಸಲಾಗುವುದು. ಸಕ್ಕರೆ ಕಾರ್ಖಾನೆಗಳ ಮಾಲೀಕರು ಮಾತ್ರವಲ್ಲ ಶಿಕ್ಷಣ ಸಂಸ್ಥೆಗಳ ಮಾಲೀಕರು ಸಚಿವರಾದಾಗ ಹಿತಾಸಕ್ತಿ ಸಂಘರ್ಷ ನಡೆಯುತ್ತದೆ. ಆದರೆ, ಇದನ್ನು ತಡೆಯುವ ದಾರಿ ಇಲ್ಲ' ಎಂದರು.

ಜೆಡಿಎಸ್ ಪ್ರತಿನಿಧಿಸಿದ್ದ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ, 'ರೈತರನ್ನು ಎಲ್ಲ ಸಂಕಷ್ಟಗಳಿಂದ ಪಾರು ಮಾಡುವ ಯೋಜನೆಗಳನ್ನು ಜೆಡಿಎಸ್ ಹೊಂದಿದೆ. ಪಕ್ಷವು ಅಧಿಕಾರಕ್ಕೆ ಬಂದರೆ ದಿನದ 24 ಗಂಟೆಯೂ ರೈತರಿಗೆ ಉಚಿತ ವಿದ್ಯುತ್ ನೀಡಲಿದೆ. ಗ್ರಾಮೀಣ ರೈತ ಯುವಕರನ್ನು ಮದುವೆಯಾಗುವ ಯುವತಿಗೆ ₹2 ಲಕ್ಷ ನೀಡಲಾಗುವುದು' ಎಂದರು. ಆಮ್ ಆದ್ಮಿ ಪಕ್ಷ ಪ್ರತಿನಿಧಿಸಿದ್ದ ಕಾರ್ಯಾಧ್ಯಕ್ಷ ನಾಗಣ್ಣ ಮಾತನಾಡಿ, 'ಪಕ್ಷವು ಘೋಷಣೆಗಳನ್ನು ಮಾಡುವ ಮುನ್ನ ತಲಸ್ಪರ್ಶಿ ಅಧ್ಯಯನ ಕೈಗೊಳ್ಳುತ್ತದೆ. ರಾಜ್ಯ ಸರ್ಕಾರದ ಮೇಲೆ ₹6 ಲಕ್ಷ ಕೋಟಿ ಸಾಲ ಇದೆ. ಪ್ರತಿ ವರ್ಷ ₹32 ಸಾವಿರ ಕೋಟಿ ಬಡ್ಡಿ ಪಾವತಿಸಲಾಗುತ್ತಿದೆ. ದೆಹಲಿಯಲ್ಲಿನ ಆಪ್ ಸರ್ಕಾರ ಒಂದು ಪೈಸೆ ಸಾಲ ಮಾಡದೇ ಯೋಜನೆ ರೂಪಿಸಿದ ಮಾದರಿಯನ್ನು ಕರ್ನಾಟಕದಲ್ಲೂ ಅನುಸರಿಸಲಾಗುವುದು. ರೈತರಿಗೆ ಗೊಬ್ಬರ, ಬಿತ್ತನೆ ಬೀಜ, ವಿದ್ಯುತ್ ಉಚಿತವಾಗಿ ನೀಡಬೇಕು. ಇದಕ್ಕೆ ₹21 ಸಾವಿರ ಕೋಟಿ ಸಾಕು' ಎಂದರು.

ಬಿಜೆಪಿಯಿಂದ ಯಾರೂ ಪಾಲ್ಗೊಂಡಿರಲಿಲ್ಲ. ಪತ್ರಕರ್ತ ಶ್ರೀಶ, ರೈತ ಮುಖಂಡರಾದ ನಾರಾಯಣ ರೆಡ್ಡಿ, ವೀರನಗೌಡ ಪಾಟೀಲ್, ಯತಿರಾಜ್ ನಾಯ್ಡು, ಉಳುವಪ್ಪ ಬಳಗೇರ್, ಸುರೇಶ್ ಪಾಟೀಲ್, ರಮೇಶ್ ಉಗಾರ್, ಲಕ್ಷ್ಮಿದೇವಿ ಇದ್ದರು.

ರೈತರ ಪ್ರಣಾಳಿಕೆಗಳು

- 60 ವರ್ಷ ತುಂಬಿದ ರೈತರಿಗೆ ₹5 ಸಾವಿರ ಪಿಂಚಣಿ ಸೌಲಭ್ಯ ಕಲ್ಪಿಸಬೇಕು.
- ಹಗಲು ವೇಳೆ ಕೃಷಿ ಪಂಪ್‌ಸೆಟ್‌ಗಳಿಗೆ 12 ಗಂಟೆಗಳ ನಿರಂತರ ವಿದ್ಯುತ್ ನೀಡಬೇಕು.
- ಸಂಪೂರ್ಣ ಸಾಲ ಮನ್ನಾ ಮಾಡಬೇಕು ಮತ್ತು ಸಾಲ ನೀತಿ ಬದಲಾಗಬೇಕು.
- ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಬಡ್ಡಿ ರಹಿತ ಕೃಷಿ ಸಾಲ ನೀಡಬೇಕು.
- ಕೃಷಿ ಸಾಲಕ್ಕೆ 'ಸಿಬಿಲ್ ಸ್ಕೋರ್' ಪರಿಗಣನೆ ಕೈ ಬಿಡಬೇಕು.
- ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಲು ಕಾಯ್ದೆ ರೂಪಿಸಬೇಕು.
- ಫಸಲ್ ಭೀಮಾ ಬೆಳೆ ವಿಮೆ ಯೋಜನೆಯನ್ನು ತಿದ್ದುಪಡಿ ಮಾಡಬೇಕು.
- ಕಬ್ಬಿನ ಎಫ್‌ಆರ್‌ಪಿ ದರವನ್ನು ರೈತರ ಜಮೀನಿನಲ್ಲಿನ ದರ ಎಂದು ನಿಗದಿ ಪಡಿಸಬೇಕು
- ಕಬ್ಬಿನ ಅಲೆಮನೆಗಳಲ್ಲಿ ಕಬ್ಬಿನಿಂದ ಎಥೆನಾಲ್ ಉತ್ಪಾದನೆಗೆ ಅವಕಾಶ ನೀಡಬೇಕು.
- ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆ ಮಾಲೀಕರು ಹಾಗೂ ಕುಟುಂಬಸ್ಥರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬಾರದು.
- ಎಪಿಎಂಸಿ ತಿದ್ದುಪಡಿ ಕಾಯ್ದೆ ರದ್ದುಗೊಳಿಸುವ ಭರವಸೆ ನೀಡಬೇಕು.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಸಿಆರ್‌ಪಿಎಫ್‌ನಲ್ಲಿ 9,223 ಟ್ರೇಡ್ಸ್‌ಮನ್ ಹುದ್ದೆಗಳು

ಕೇಂದ್ರ ಸಶಸ್ತ್ರ ಮೀಸಲು ಪೊಲೀಸ್ ಪಡೆಯಲ್ಲಿ (ಸಿಆರ್‌ಪಿಎಫ್‌ನಲ್ಲಿ) ಖಾಲಿಯಿರುವ ಒಂಬತ್ತು ಸಾವಿರಕ್ಕೂ ಹೆಚ್ಚು ಟ್ರೇಡ್ಸ್‌ಮನ್ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಎಸ್ಸೆಸ್ಸೆಲ್ಸಿ ಪಾಸಾದವರು ಹಾಗೂ ವಿವಿಧ ಟ್ರೇಡ್‌ಗಳಲ್ಲಿ ಅರ್ಹತೆ ಪಡೆದು, ಅನುಭವ ಹೊಂದಿರುವವರು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆ ವಿಧಾನ ಮತ್ತು ಆಯ್ಕೆ ಪ್ರಕ್ರಿಯೆ ಕುರಿತ ಮಾಹಿತಿ ಇಲ್ಲಿದೆ.

ಮಂಜುನಾಥ್ ಭದ್ರಶೆಟ್ಟಿ

ಕೇಂದ್ರ ಗೃಹ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಬಹುದೊಡ್ಡ ಅರೆ ಸೇನಾಪಡೆ ಎಂದರೆ ಅದು ಕೇಂದ್ರೀಯ ಸಶಸ್ತ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್). ಈ ಸೇನಾಪಡೆಯಲ್ಲಿ ಯೋಧರನ್ನಷ್ಟೇ (ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ) ಅಲ್ಲದೇ, ಸೇನಾಪಡೆಯ ವಿವಿಧ ಟ್ರೇಡ್‌ಗಳಲ್ಲಿ ಕಾರ್ಯನಿರ್ವಹಿಸಲು 'ಟ್ರೇಡ್ಸ್‌ಮನ್ ಕಾನ್‌ಸ್ಟೆಬಲ್'ಗಳನ್ನೂ ನೇಮಕ ಮಾಡಿಕೊಳ್ಳಲಾಗುತ್ತದೆ.

ಪ್ರಸ್ತುತ ವಿವಿಧ ಟ್ರೇಡ್ಸ್‌ಮನ್ ವಿಭಾಗಗಳಲ್ಲಿ ಖಾಲಿಯಿರುವ 9,212 ಹುದ್ದೆಗಳ ಭರ್ತಿಗಾಗಿ ಸಿಆರ್‌ಪಿಎಫ್ ಅರ್ಜಿ ಆಹ್ವಾನಿಸಿದೆ. ಮೆಟ್ರಿಕ್ಯುಲೇಷನ್ ಅಥವಾ ಅಥವಾ 10 ನೇ ತರಗತಿ ಪೂರ್ಣ ಗೊಳಿಸಿದ, ವಿವಿಧ ಕೌಶಲಗಳನ್ನು ಹೊಂದಿರುವ ಯುವಕ-ಯುವತಿಯರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು.

ಖಾಲಿಯಿರುವ 9,212 ಹುದ್ದೆಗಳಲ್ಲಿ 9,105 ಹುದ್ದೆಗಳನ್ನು ಪುರುಷರಿಗೆ ಹಾಗೂ 107 ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. 11 ಹುದ್ದೆಗಳು ಪಯೋನಿಯರ್ಸ್ ವಿಭಾಗಕ್ಕೆ (ಕೌಶಲ ಆಧಾರಿತ ಉದ್ಯೋಗಗಳು) ಸಂಬಂಧಿಸಿವೆ. ಪಯೋನಿಯರ್ಸ್ ಹೊರತುಪಡಿಸಿ ಉಳಿದ ಎಲ್ಲ ಹುದ್ದೆಗಳು ರಾಜ್ಯವಾರು ಹಂಚಿಕೆಯಾಗಿವೆ.

ಇದೇ ಮಾರ್ಚ್ 27 ರಿಂದ ಸಿಆರ್‌ಪಿಎಫ್‌ನ ಅಧಿಕೃತ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದೆ. ಏಪ್ರಿಲ್ 25 ಅರ್ಜಿ ಸಲ್ಲಿಕೆಗೆ ಕೊನೆ ದಿನವಾಗಿದೆ.

ಅರ್ಜಿ ಶುಲ್ಕ: ಸಾಮಾನ್ಯ, ಇಡಬ್ಲ್ಯೂಎಸ್, ಒಬಿಸಿ ವರ್ಗದವರಿಗೆ ಅರ್ಜಿ ಶುಲ್ಕ ₹100 ಇದೆ. ಎಸ್‌ಸಿ/ಎಸ್‌ಟಿ ಹಾಗೂ ಮಹಿಳೆಯರಿಗೆ ಶುಲ್ಕ ವಿನಾಯಿತಿ ಇದೆ.

ಯಾವ ಯಾವ ಟ್ರೇಡ್‌ಗಳಿವೆ?

ಕಾನ್‌ಸ್ಟೆಬಲ್ ಡ್ರೈವರ್, ಗಾರ್ಡನರ್, ಕುಕ್, ವಾಶರ್, ಕ್ಲೀನರ್, ಫಿಟ್ಟರ್, ಬಗ್ಲರ್, ಟೈಲರ್, ಕಾಬ್ಲರ್, ಪೇಂಟರ್, ಕಾರ್ಪೆಂಟರ್, ಹೇರ್ ಡ್ರೆಸ್ಸರ್, ಸಫಾಯಿ ಕರ್ಮಚಾರಿ, ಬ್ರಾಸ್ ಬ್ಯಾಂಡ್.. ಇಂಥ ಕೌಶಲ ಆಧರಿತ ಹುದ್ದೆಗಳಿವೆ. ಎಲೆಕ್ಟ್ರಿಷಿಯನ್, ಮೋಟಾರ್ ಮೆಕಾನಿಕಲ್, ಪ್ಲಂಬರ್- ಇವು ಪಯೋನಿಯರ್ಸ್ ವಿಭಾಗಕ್ಕೆ ಸಂಬಂಧಿಸಿವೆ. ಈ ವಿಭಾಗಗಳಿಗೆ ಅರ್ಜಿ ಸಲ್ಲಿಸುವವರು ಎಸ್ಸೆಸ್ಸೆಲ್ಸಿ ಜೊತೆಗೆ ಸಂಬಂಧಿಸಿದ ವಿಭಾಗಗಳಲ್ಲಿ ಪಡೆದಿರುವ ಅರ್ಹತೆ ಪ್ರಮಾಣ ಪತ್ರಗಳನ್ನು ಹೊಂದಿರಬೇಕು.

ಟ್ರೇಡ್ಸ್‌ಮನ್ ಮತ್ತು ಜನರಲ್ ಡ್ಯೂಟಿ

ಸಿಆರ್‌ಪಿಎಫ್‌ನಲ್ಲಿ ಸೇವೆಯನ್ನು ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ ಹಾಗೂ ಟ್ರೇಡ್ಸ್‌ಮನ್ ಕಾನ್‌ಸ್ಟೆಬಲ್ ಎಂದು ವಿಂಗಡಿಸಲಾಗಿರುತ್ತದೆ. ಅರ್ಜಿ ಸಲ್ಲಿಸುವವರು ಈ ವಿಭಾಗಗಳ ಬಗ್ಗೆ ಅರಿತಿರಬೇಕು. ಟ್ರೇಡ್ಸ್‌ಮನ್ ಕೆಲಸಕ್ಕೆ ಸೇರಬೇಕೆಂದರೆ ಸೂಚಿಸಿದ ಕ್ಷೇತ್ರದಲ್ಲಿ ಈ ಮೊದಲೇ ಅರ್ಹತಾ ಪ್ರಮಾಣಪತ್ರ ಮತ್ತು ಕನಿಷ್ಠ ಒಂದು ವರ್ಷ ಅನುಭವ ಕೌಶಲವನ್ನು ಹೊಂದಿರಬೇಕಾಗುತ್ತದೆ. ಹಾಗೆಯೇ, ಪ್ರಾಯೋಗಿಕ ಪರೀಕ್ಷೆಯನ್ನೂ ಎದುರಿಸಬೇಕಾಗುತ್ತದೆ. ಇನ್ನು, ಕಾನ್‌ಸ್ಟೆಬಲ್ ಜನರಲ್ ಡ್ಯೂಟಿಯು ನೇರ ನೇಮಕಾತಿಯಾಗಿದ್ದು, ಕನಿಷ್ಠ ವಿದ್ಯಾರ್ಹತೆ ಜೊತೆಗೆ, ನಿಯಮಾನುಸಾರ ಪರೀಕ್ಷೆಗಳನ್ನು ತೇರ್ಗಡೆಯಾಗಬೇಕು. ಹೀಗೆ ಆಯ್ಕೆಯಾದವರು ಸಿಆರ್‌ಪಿಎಫ್‌ನಲ್ಲಿ ಕಾನ್‌ಸ್ಟೆಬಲ್ ಜನರಲ್ ಡ್ಯೂಟಿಯಲ್ಲಿ (ಯೋಧ) ಸೇವೆ ಸಲ್ಲಿಸುತ್ತಾರೆ.

ಸಿಬಿಟಿ ಪರೀಕ್ಷೆ- ಪ್ರಶ್ನೆ-ಅಂಕಗಳ ವಿವರ

ವಿಷಯ	ಪ್ರಶ್ನೆಗಳ ಸಂಖ್ಯೆ	ಗರಿಷ್ಠ ಅಂಕಗಳು
ಸಾಮಾನ್ಯ ಜ್ಞಾನ ಹಾಗೂ ಗ್ರಹಿಕೆ ಸಾಮರ್ಥ್ಯ	25	25
ಪ್ರಚಲಿತ	25	25
ಬೇಸಿಕ್ ಗಣಿತ	25	25
ಇಂಗ್ಲಿಷ್-ಹಿಂದಿ ಭಾಷೆ	25	25
ಒಟ್ಟು	100	100

ನೇಮಕಾತಿ ಹೇಗೆ ನಡೆಯಲಿದೆ?

ಐದು ಹಂತಗಳಲ್ಲಿ ನೇಮಕಾತಿ ಪ್ರಕ್ರಿಯೆ ನಡೆಯಲಿದೆ. ಮೊದಲಿಗೆ ಕಂಪ್ಯೂಟರ್ ಆಧರಿತ ಪರೀಕ್ಷೆ (ಸಿಬಿಟಿ- ಕಂಪ್ಯೂಟರ್ ಬೇಸ್ಡ್ ಟೆಸ್ಟ್), ದೈಹಿಕ ಸಾಮರ್ಥ್ಯ ಪರೀಕ್ಷೆ (ಇಟಿ, ಪಿಎಸ್‌ಟಿ), ಟ್ರೇಡ್ ಪರೀಕ್ಷೆ, ಡಾಕ್ಯುಮೆಂಟ್ ವೆರಿಫಿಕೇಶನ್ ಮತ್ತು ವೈದ್ಯಕೀಯ ಪರೀಕ್ಷೆ ನಡೆಯಲಿದೆ. ಮೊದಲ ಹಂತದ ಸಿಬಿಟಿಯಲ್ಲಿ 100 ಅಂಕಗಳಿಗೆ ಬಹುಆಯ್ಕೆಯ 100 ಪ್ರಶ್ನೆಗಳ ಒಂದು ಪತ್ರಿಕೆ ಮಾತ್ರ ಇರುತ್ತದೆ. 4 ತಪ್ಪು ಉತ್ತರಗಳಿಗೆ ಒಂದು ಅಂಕ ಕಳೆಯಲಾಗುತ್ತದೆ. ಎಸ್ಸೆಸ್ಸೆಲ್ಸಿ ಹಂತದ ಪಠ್ಯಕ್ರಮ(ಸಿಲಬಸ್) ಆಧರಿಸಿ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಲಾಗಿರುತ್ತದೆ. ಜುಲೈ1 ರಿಂದ 13ರವರೆಗೆ ಈ ಪರೀಕ್ಷೆಗಳು ನಡೆಯಲಿವೆ. ಅಭ್ಯರ್ಥಿಗಳು ಮುಂದಿನ ಹಂತಕ್ಕೆ ಆಯ್ಕೆಯಾಗಬೇಕಾದರೆ ಸಿಬಿಟಿಯಲ್ಲಿ ಕನಿಷ್ಠ ಶೇ 30 ಅಂಕಗಳನ್ನು ಪಡೆಯಲೇಬೇಕು.

ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಸೂಚಿತ ಪರೀಕ್ಷಾ ಕೇಂದ್ರಗಳಲ್ಲಿ ಯಾವುದಾದರೂ ಮೂರನ್ನು ಆದ್ಯತಾನುಸಾರ ಆಯ್ಕೆ ಮಾಡಬೇಕು.

ವಯೋಮಿತಿ: ಟ್ರೇಡ್ಸ್‌ಮನ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವವರು ಕನಿಷ್ಠ 21 ವರ್ಷ, ಗರಿಷ್ಠ 27 ವರ್ಷ ಎಸ್.ಸಿ/ಎಸ್‌ಟಿ ವರ್ಗದ ಅಭ್ಯರ್ಥಿಗಳಿಗೆ 5 ವರ್ಷ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿ ಸಡಿಲಿಕೆ ಇದೆ.

ವೇತನ ಶ್ರೇಣಿ: ₹21,700 ರಿಂದ ₹69,100ವರೆಗೆ ಇದ್ದು ಇಲಾಖೆ ಕಾಲಕಾಲಕ್ಕೆ ನಿಯಮಾನು ಸಾರ ಹೆಚ್ಚಿಸುವ ವೇತನ ಇತರೆ ಭತ್ಯೆಗಳು ಸೇರುತ್ತವೆ.

ಹೆಚ್ಚಿನ ಮಾಹಿತಿಗೆ: ಅರ್ಜಿಸಲ್ಲಿಕೆಪ್ರಕ್ರಿಯೆಬಗ್ಗೆ, ಹುದ್ದೆಗಳ ವರ್ಗೀಕರಣ, ಟ್ರೇಡ್ ಪರೀಕ್ಷೆ ಮಾನದಂಡಗಳೇನು? ಇಟಿ-ಪಿಎಸ್‌ಟಿ ಅರ್ಹತಾ ಮಾನದಂಡಗಳು ಸೇರಿದಂತೆ ಇನ್ನಷ್ಟು ಮಾಹಿತಿಗಾಗಿ https://crpf.gov.in/recruitment ಜಾಲತಾಣಕ್ಕೆ ಭೇಟಿ ನೀಡಬಹುದು. ❖

ಮಾದರಿ ಪ್ರಶ್ನೋತ್ತರ

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ದಕ್ಷಿಣ ಭಾರತದ ಮದುಮಲೈ ಹುಲಿ ಸಂರಕ್ಷಿತಾರಣ್ಯದಲ್ಲಿ ದಂಪತಿ ಸಾಕಿದ ಅನಾಥ ಆನೆ ಮರಿಯ ಕಥೆಯನ್ನು ಹೊಂದಿದ್ದ 41 ನಿಮಿಷದ 'ದಿ ಎಲಿಫಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರಕ್ಕೆ 95ನೇ ಆಸ್ಕರ್ ಬೆಸ್ಟ್ ಡಾಕ್ಯೂಮೆಂಟರಿ ಶಾರ್ಟ್ ಸಬ್ಜೆಕ್ಟ್ ವಿಭಾಗದಲ್ಲಿ ಪ್ರಶಸ್ತಿ ದೊರೆತಿದೆ.

2) ಈ ಹಿಂದೆ ಸ್ಲಮ್ ಡಾಗ್ ಮಿಲಿಯನೇರ್ ಸಿನಿಮಾದ `ಜೈ ಹೋ' ಹಾಡಿಗೆ ಆಸ್ಕರ್ ಪ್ರಶಸ್ತಿ ಬಂದಿತ್ತು. ಈಗ 'ಆರ್‌ಆರ್‌ಆರ್' ಚಿತ್ರದ `ನಾಟು ನಾಟು' ಹಾಡಿಗೆ ಆಸ್ಕರ್ ಅಕಾಡೆಮಿಯ ಬೆಸ್ಟ್ ಓರಿಜಿನಲ್ ಸಾಂಗ್ ವಿಭಾಗದಲ್ಲಿ ಪ್ರಶಸ್ತಿ ಬಂದಿದೆ.

3) ಎಸ್.ಎಸ್.ರಾಜಮೌಳಿ ನಿರ್ದೇಶನದ ಆರ್‌ಆರ್‌ಆರ್ ಚಲನಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಜ್ಯೂನಿಯರ್ ಎನ್‌ಟಿಆರ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಆರ್‌ಆರ್‌ಆರ್ ಚಿತ್ರದಲ್ಲಿ ಚಂದ್ರಬೋಸ್ ಸಾಹಿತ್ಯ ಬರೆದಿರುವ ಹಾಡಿಗೆ ಎಂ. ಕೀರವಾಣಿ ಸಂಗೀತ ನೀಡಿದ್ದಾರೆ.

4) ಭಾನು ಅಥಯ್ಯ, ಸತ್ಯಜೀತ್ ರಾಯ್, ರಸೂಲ್ ಪೂಕುಟ್ಟಿ, ಗುಲ್ಜಾರ್, ಎ.ಆರ್ ರೆಹಮಾನ್ ಮತ್ತಿತರರು ಆಸ್ಕರ್ ಪ್ರಶಸ್ತಿ ಗೆದ್ದ ಭಾರತೀಯರಾಗಿದ್ದಾರೆ

ಉತ್ತರ ಸಂಕೇತಗಳು:

ಎ) 1 ಮತ್ತು 4ನೇ ಹೇಳಿಕೆಗಳು ಮಾತ್ರ ಸರಿಯಾಗಿವೆ

ಬಿ) 4 ನೇ ಹೇಳಿಕೆ ಮಾತ್ರ ಸರಿಯಾಗಿದೆ.

ಸಿ) 1,2 ಮತ್ತು 3 ಹೇಳಿಕೆಗಳು ಮಾತ್ರ ಸರಿಯಾಗಿವೆ.

ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

2) ಡಯಾಫ್ರಾಗಮ್ ಯಾವುದನ್ನು ಪ್ರತ್ಯೇಕಿಸುತ್ತದೆ?

ಎ) ಹೃದಯ ಮತ್ತು ಶ್ವಾಸಕೋಶ

ಬಿ) ಎದೆ ಮತ್ತು ಹೊಟ್ಟೆ

ಸಿ) ಯಕೃತ್ತು ಮತ್ತು ಶ್ವಾಸಕೋಶ

ಡಿ) ಹೊಟ್ಟೆ ಮತ್ತು ಮೇದೋಜ್ಜೀರಕ ಗ್ರಂಥಿ

ಉತ್ತರ: ಬಿ

3) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಇಂಡೋ-ಪೆಸಿಫಿಕ್ ಪ್ರದೇಶವನ್ನು ಸ್ವತಂತ್ರ ಮತ್ತು ಮುಕ್ತವಾಗಿಡುವುದಕ್ಕೆ 'ಔಕಾಸ್' (AUKUS) ಸದಸ್ಯ ರಾಷ್ಟ್ರಗಳು ಒಪ್ಪಂದಕ್ಕೆ ಬಂದಿವೆ. ಔಕಸ್ (AU- ಆಸ್ಟ್ರೇಲಿಯಾ UK-ಬ್ರಿಟನ್-US-ಅಮೆರಿಕ) ಕೂಟವು ಈ ಒಪ್ಪಂದದ ಅಡಿ ಪರಮಾಣು ಚಾಲಿತ ಜಲಾಂತರ್ಗಾಮಿ ನೌಕೆ ಯೋಜನೆಗೆ ಒಪ್ಪಿಗೆ ಸೂಚಿಸಿವೆ

2) ಅಮೆರಿಕ, ಬ್ರಿಟನ್ ಹಾಗೂ ಆಸ್ಟ್ರೇಲಿಯಾಗಳು ಪರಮಾಣು ಚಾಲಿತ ಜಲಾಂತರ್ಗಾಮಿ ನೌಕೆ ಯೋಜನೆಗೆ ಒಪ್ಪಿಗೆ ಸೂಚಿಸಿವೆ. ಇದಕ್ಕೆ ಅತ್ಯಾಧುನಿಕ ಪರಮಾಣು ಎಂಜಿನ್ ತಂತ್ರಜ್ಞಾನವನ್ನು ಅಮೆರಿಕ ನೀಡಲಿದೆ, ಇದರ ವಿನ್ಯಾಸವನ್ನು ಬ್ರಿಟನ್ ಮಾಡಲಿದೆ.

ಉತ್ತರ ಸಂಕೇತಗಳು

ಎ) ಹೇಳಿಕೆ 1 ಮಾತ್ರ ಸರಿಯಾಗಿದೆ

ಬಿ) ಹೇಳಿಕೆ 2 ಮಾತ್ರ ಸರಿಯಾಗಿದೆ

ಸಿ) ಹೇಳಿಕೆ 1 ಮತ್ತು 2 ಎರಡೂ ಸರಿಯಾಗಿವೆ

ಡಿ) ಎರಡೂ ಹೇಳಿಕೆಗಳು ತಪ್ಪಾಗಿವೆ

ಉತ್ತರ: ಡಿ

4) 2017ರಲ್ಲಿ ಪೂರ್ಣಗೊಂಡ ನರ್ಮದಾ ನದಿಗೆ ಅಣೆಕಟ್ಟು ನಿರ್ಮಾಣ ಯೋಜನೆಗೆ ಮೊದಲು ಅಡಿಗಲ್ಲು ಹಾಕಿದ್ದು ಯಾರು ಮತ್ತು ಯಾವ ವರ್ಷ?

ಎ) 1901- ಬ್ರಿಟಿಷ್ ಸರ್ಕಾರದ ಹಿರಿಯ ಅಧಿಕಾರಿ.

ಬಿ) 1961- ಪ್ರಧಾನಿ ಜವಾಹರ ಲಾಲ್ ನೆಹರೂ

ಸಿ) 1969- ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ

ಡಿ) 2001- ಮುಖ್ಯಮಂತ್ರಿ ನರೇಂದ್ರ ಮೋದಿ

ಉತ್ತರ: ಬಿ

5) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಕರ್ನಾಟಕ ಮಾನವ ಅಭಿವೃದ್ಧಿ ವರದಿ-2022ರ ಪ್ರಕಾರ 1990 ರಿಂದ 2019ರ ಅವಧಿಯಲ್ಲಿ ಶೇ. 1.9ರ ಬೆಳವಣಿಗೆಯೊಂದಿಗೆ ಮಾನವ ಅಭಿವೃದ್ಧಿ ಸೂಚ್ಯಂಕ ಏರಿಕೆಯನ್ನು ಕಂಡಿದೆ.

2) ಬಾಗಲಕೋಟೆ, ಬಳ್ಳಾರಿ, ರಾಮನಗರ, ಮಂಡ್ಯ, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳು ಮಾನವ ಅಭಿವೃದ್ಧಿಯಲ್ಲಿ ಗಣನೀಯವಾಗಿ ಏರಿಕೆಯಾದ ಜಿಲ್ಲೆಗಳ ಪಟ್ಟಿಯಲ್ಲಿವೆ.

3) ಇದೇ ಮೊದಲ ಬಾರಿಗೆ ತಾಲ್ಲೂಕು ಮಟ್ಟದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಬಹು ಆಯಾಮದ ಬಡತನ ಸೂಚ್ಯಂಕಗಳನ್ನು ಅಂದಾಜು ಮಾಡಲಾಗಿದೆ. ಮಂಗಳೂರು ತಾಲ್ಲೂಕು ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ, ಬೆಂಗಳೂರು ದಕ್ಷಿಣ ತಾಲ್ಲೂಕು ದ್ವಿತೀಯ ಸ್ಥಾನದಲ್ಲಿದೆ.

ಉತ್ತರ ಸಂಕೇತಗಳು:

ಎ) 1 ಮತ್ತು 2ನೇ ಹೇಳಿಕೆಗಳು ಮಾತ್ರ ಸರಿಯಾಗಿವೆ

ಬಿ) 1 ಮತ್ತು 3ನೇ ಹೇಳಿಕೆಗಳು ಮಾತ್ರ ಸರಿಯಾಗಿವೆ

ಸಿ) ಹೇಳಿಕೆ 2 ಮತ್ತು 3 ಮಾತ್ರ ಸರಿಯಾಗಿದೆ

ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

6) ಈ ಕೆಳಗಿನವುಗಳಲ್ಲಿ ಸರಿಯಾದ ಹೊಂದಾಣಿಕೆ ಇಲ್ಲದ್ದು ಯಾವುದು?

ಎ) ಪಾಣಿನಿ - ಅಷ್ಟಾಧ್ಯಾಯಿ

ಬಿ) ಶೂದ್ರಕ - ಮೃಚ್ಛಕಟಿಕ

ಸಿ) ಕಲ್ಹಣ - ವಿಕ್ರಮಾಂಕ ದೇವ ಚರಿತಂ

ಡಿ) ಬಾಬರ್ - ತುಜುಕ್-ಇ-ಬಾಬರಿ

ಉತ್ತರ: ಸಿ

ಮತ್ತಷ್ಟು ಪ್ರಶ್ನೋತ್ತರಕ್ಕಾಗಿ https://www.prajavani.net/education-career ನೋಡಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಪಿಯುಸಿ-ಸಿಇಟಿ ಪರೀಕ್ಷೆ ದಿಕ್ಸೂಚಿ

BIOLOGY

11) Diseases are broadly groups grouped into infectious and non-infectious diseases. In the list given below, identify the infectious diseases.

i) Cancer ii) Influenza

iii) Allergy iv) Small pox

a) i and ii b) ii and iii

c) iii and iv d) ii and iv

Ans:- d

12) The sporozoites that cause infection when a female Anopheles mosquito bites a human being are formed in -

a) Liver of human b) RBCs of mosquito

c) Salivary glands of mosquito

d) Intestine of human

Ans:- c

13) The chances of contacting bird flu from a properly cooked (above 100°C) chicken and egg are:

a) very high b) high

c) moderate d) none

Ans:- d

14) What is the function of protein GLUT-4?

a) Acts as an enzyme

b) Enables glucose transport into cells

c) Fight infectious agents

d) Functions as intercellular ground substance

Answer: (b)

Expln:- GLUT4 is an insulin-responsive glucose transporter that is found in the adipose tissue, and brain. It is present in the cytoplasm of cells in vesicles from which it is translocated to the plasma membrane under the influence of insulin.

15) A group of animals which are related by descent and share many similarities are referred to as:

a) breed b) race

c) variety d) species

Ans:- a

16) **Cell in the quiescent stage (G_0)**

a) Always become cancerous

b) Show indefinite proliferation

c) Remain metabolically inactive

d) Remain metabolically active

Answer: (d)

Expln:- In G_0, some cells in the adult animals do not appear to exhibit division (e.g., heart cells) and many other cells divide only occasionally. These cells that do not divide further exist G_1 phase to enter an inactive stage called quiescent stage (G_0) of the cell cycle. Cells in this stage remain metabolically active but no longer proliferate unless called on to do so depending on the requirement of the organism.

17) Inbreeding is carried out in animal husbandry because it:

a) increases vigour b) improves the breed

c) increases heterozygosity

d) increases homozygosity

Ans:- d

18) Consider the following statements i, ii, and iii regarding criteria for the essentiality of the nutrients in plants:

i. The presence of elements is must for plants to complete their life cycle.

ii. The role of the element can be replaced by another in their life cycle.

iii. The elements must be directly involved in the metabolism of the plant.

Choose the correct statement/s:

a) i and iii b) i and ii

c) iii only d) ii and iii

Answer: (a)

Expln:- The criteria for the essentiality of an element are given below:

(a) The element must be absolutely necessary for supporting normal growth and reproduction. In the absence of the element, the plants do not complete their life cycle or set the seeds.

(b) The requirement of the element must be specific and not replaceable by another element. In other words, deficiency of any one element cannot be met by supplying some other element.

(c) The element must be directly involved in the metabolism of the plant.

19). Sonalika and Kalyan Sona are varieties of:

a) wheat b) rice

c) millet d) tobacco

Ans:- a

20) During the chemiosmotic synthesis of ATP in photosynthesis:

a) The protons accumulate in the intermembrane space of chloroplast

b) The proton gradient is not required

c) The protons accumulate in the intermembrane space of the mitochondrion

d) The protons accumulate within the lumen of the thylakoids

Answer: (c)

Expln:- During chemiosmotic synthesis, ATP synthesis is linked to the development of a proton gradient across a membrane. This time these are membranes of the thylakoid. There is one difference though, here the proton accumulation is towards the inside of the membrane, i.e., in the lumen. In respiration, protons accumulate in the intermembrane space of the mitochondria when electrons move through the ETS.

PHYSICS

8) A uniform chain of length L is lying partly on a table, the remaining part hanging down from the edge of the table. If the coefficient of friction between the chain and the table is 0.5, what is the minimum length of the chain that should lie on the table to prevent the chain from slipping down to the ground?

(A) L/3 (B) L/2

(C) 2L/3 (D) 3L/4

Ans: (C) 2L/3

$$\frac{1}{L} = \frac{\mu}{\mu+1}$$

$$\therefore 1 = \frac{L \times 0.5}{1.5} = L/3.$$

Where l is the part of length of the chain hanging and L is the total length of the chain.

Length of the chain lying on the table

$$= L - \frac{L}{3} = \frac{2L}{3}.$$

9) A man weighing 70 kg, riding a motorbike weighing 230 kg at 54 km hr^{-1}, accelerates at $1 ms^{-2}$ for 10s, when suddenly a child rushes onto the road. The rider manages to apply the brakes screeching to bring his vehicle to a halt in 3s, just in time to save the child. What should have been the average retarding force on the vehicle?

(A) 1.5 N (B) 4.5 N

(C) 3.5 N (D) None of the above

Ans: D

Expln:- Total mass = m = 70 + 230 = 300 kg.

Velocity after $t = 10^5$ is $S = u + at$;

$V = 15 + 1 \times 10 = 25\ ms^{-1}$.

Hence initial momentum $P_1 = m \times V$

$= 7500\ kgms^{-1}$

Vehicle comes to rest after time t = 35

Hence final momentum $P_2 = 0$

$$F = \frac{dp}{dt} = \frac{P_2 - P_1}{t} = \frac{0 - 7500}{3} = 2.5\ kgN.$$

($\therefore$ None of the answers given is correct.)

10) The graph showing the variation of the magnetic field strength (B) with distance (r) from a long current conductor is



Ans: (C)

Expln:-

For a straight conductor, $B = \frac{\mu_0}{4\pi}(I/d)$; $B \alpha 1/d$.

Hence the graph C is correct.

11) Inside a cyclotron, a charged article is subjected to both an electric field and a magnetic field. It gains kinetic energy due to....

(A) Only the electric field

(B) only the magnetic field

(C) Both the fields (D) none of the fields.

Ans: (A) Only the electric field

Expln:- In a cyclotron electric field helps to increase the kinetic energy of the particle, where as, magnetic field helps to change the direction of charged particle.

12) A certain length of insulated wire can be bent to form either a single circular loop (case I) or a double loop of smaller radius (case II). When the same steady current is passed through the wire, the ratio of the magnetic field at the centre in case I to that in case II is

(A) 1 (B) 2

(C) 1/2 (D) 1/4

Ans: (D) 1/4

Expln:- For a circular loop B α n/R

Case 1 → $n_1 = 1; R_1 = R$

Case 2 → $n_2 = 2; R_2 = R/2$

$$\frac{B_1}{B_2} = \frac{n_1}{n_2} \times \frac{R_1}{R_2} \Rightarrow \frac{1}{2} \times \frac{R/2}{R} = 1/4$$

$\therefore B_1 : B_2 = 1 : 4.$

13) A rod of length 2 m slides with a speed of 5 ms^{-1} on a rectangular conducting frame as shown in figure. There exists a uniform magnetic field of 0.04 T perpendiculars to the plane of the figure. If the resistance of the rod is 3Ω then the current through the rod is



A). 1.33 A B) 75mA

C). 133 mA D). 0.75 A

Ans: c

We know that the current,

i = Blv/R= (0.04×2×5)/3 = 133 mA

14) The ratio of magnetic field at the centre of a current carrying circular coil to its magnetic moment is 'x'. If the current and the radius both are doubled then the new ratio will become

A) x/8 B). 2x

C). 4x D) x/4

Ans: a

Expln:- Magnetic field at the center of the current carrying loop is given by $B=(\mu_0/4\pi)\times(2\pi i/a)=(\mu_0 i)/2a$.

Magnetic moment at the center of the current carrying loop is given by $M=i\pi a^2$

thus $B/M=\mu_0/(2\pi a^3)=x$ (given) when both current and radius are doubled ratio become x/8 times.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಬಂಜಾರ, ಭೋವಿ, ಕೊರಮ, ಕೊರಚ ಸಮುದಾಯಗಳಿಂದ ಮುಂದುವರಿದ ಪ್ರತಿಭಟನೆ

ಒಳಮೀಸಲು ಶಿಫಾರಸಿಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಒಳಮೀಸಲಾತಿ ವರ್ಗೀಕರಣ ಕುರಿತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡದೇ ರದ್ದುಪಡಿಸುವಂತೆ ಒತ್ತಾಯಿಸಿ ಬಂಜಾರ, ಭೋವಿ, ಕೊರಮ, ಕೊರಚ ಸಮುದಾಯದವರು ಜಿಲ್ಲೆಯ ಸೊರಬ ಪಟ್ಟಣದಲ್ಲಿ ಬುಧವಾರ ಪ್ರತಿಭಟಿಸಿದರು.

ಬಸ್ ನಿಲ್ದಾಣದ ಬಳಿ ಮಾನವ ಸರಪಳಿ ನಿರ್ಮಿಸಿದ ಪ್ರತಿಭಟನಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪ್ರತಿಕೃತಿ ದಹಿಸಲು ಪೊಲೀಸರು ಅವಕಾಶ ನೀಡಲಿಲ್ಲ. ಚುನಾವಣೆ ನೀತಿ ಸಂಹಿತೆ ಜಾರಿಯಾಗಿದೆ ಎಂದು ಪೊಲೀಸರು ಹೇಳಿದಾಗ ಪ್ರತಿಭಟನಕಾರರು ಅಲ್ಲಿಂದ ತೆರಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್ ಕುಮಾರ್ ಬೆಳಿಗ್ಗೆಯಿಂದಲೇ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದರು.

ಗಾಡಿಕೊಪ್ಪದಲ್ಲೂ ಬಂಜಾರ ಸಮುದಾಯದವರು ಒಳಮೀಸಲಾತಿ ವರ್ಗೀಕರಣದ ವರದಿ ಶಿಫಾರಸನ್ನು ವಿರೋಧಿಸಿ ಪ್ರತಿಭಟನೆ ನಡೆಸಿದರು.

ದಾವಣಗೆರೆ ವರದಿ: ಒಳಮೀಸಲಾತಿ ವರ್ಗೀಕರಣ ಕುರಿತ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡುವ ಸರ್ಕಾರದ ನಿರ್ಧಾರ ಖಂಡಿಸಿ ಜಿಲ್ಲೆಯ ಹೊನ್ನಾಳಿಯಲ್ಲಿ ತಾಲ್ಲೂಕು ಬಂಜಾರ ಸಮುದಾಯದಿಂದ ಪ್ರತಿಭಟಿಸಲಾಯಿತು. 'ಕೂಡಲೇ ಶಿಫಾರಸನ್ನು ತಡೆ ಹಿಡಿಯಬೇಕು. ಇಲ್ಲದಿದ್ದರೆ ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ' ಎಂದು ಸಮಾಜದ ಅಧ್ಯಕ್ಷ ಅಂಜುನಾಯ್ಕ ಎಚ್ಚರಿಸಿದರು.

ರಸ್ತೆ ತಡೆ ಮಾಡಿ ಪ್ರತಿಭಟನೆ (ಬಸವನಬಾಗೇವಾಡಿ): ಸದಾಶಿವ ಆಯೋಗದ ವರದಿ ಜಾರಿ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದನ್ನು ಖಂಡಿಸಿ ರಾಜ್ಯ ಬಿಜೆಪಿ ಸರ್ಕಾರದ ವಿರುದ್ದ ಬಂಜಾರ, ಬೋವಿ ಸೇರಿದಂತೆ ವಿವಿಧ ಸಮುದಾಯದವರು ಬುಧವಾರ ಬೃಹತ್ ಪ್ರತಿಭಟನೆ ನಡೆಸಿದರು.

ಇಲ್ಲಿಯ ಡಾ.ಬಿ. ಅಂಬೇಡ್ಕರ್ ವೃತ್ತದಿಂದ ಪ್ರತಿಭಟನೆ ಆರಂಭಿಸಿ ಬಸವೇಶ್ವರ ವೃತ್ತಕ್ಕೆ ಬಂದ ಕೆಲ ಕಾಲ ರಸ್ತೆ ತಡೆ ನಡೆಸಿದರು. ನಂತರ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಸೊರಬದ ಬಸ್ ನಿಲ್ದಾಣದ ಎದುರು ಬುಧವಾರ ಒಳಮೀಸಲಾತಿ ವರ್ಗೀಕರಣ ವಿರೋಧಿಸಿ ಬಂಜಾರ, ಭೋವಿ, ಕೊರಮ, ಕೊರಚ ಸಮುದಾಯದವರು ಪ್ರತಿಭಟಿಸಿದರು

'ಒಳಮೀಸಲಾತಿ ರದ್ದುಪಡಿಸಿ, ಇಲ್ಲವೇ ವಿಷ ಕೊಡಿ'

ಬಾಗಲಕೋಟೆ: 'ಒಳ ಮೀಸಲಾತಿ ರದ್ದುಪಡಿಸಿ, ಇಲ್ಲವೇ ವಿಷ ಕೊಡಿ' ಎಂದು ಬಂಜಾರ ಸಮಾಜದ ಮುಖಂಡ ರಾಜು ಲಮಾಣಿ ಬುಧವಾರ ಆಗ್ರಹಿಸಿದರು.

ಬಾಗಲಕೋಟೆಯಲ್ಲಿ ಪ್ರತಿಭಟನೆ ಮಾಡಿದ ಬಂಜಾರ ಸಮಾಜದ ಮುಖಂಡರು, ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಬಾಯಿ ಬಡಿದುಕೊಂಡು ಆಕ್ರೋಶ ವ್ಯಕ್ತಪಡಿಸಿದರು.

ಬಂಜಾರ ಸೇವಾ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಲರಾಮ ನಾಯ್ಕ ಅವರು, 'ಹಿಂದಿನ ಸರ್ಕಾರ ನಮಗೆ ಊಟ ಹಾಕಿತ್ತು. ಅದನ್ನು ಇವರು ಬೂಟುಗಾಲಲೇ ಒದ್ದಿದ್ದಾರೆ, ಇವರನ್ನು ಜಾಡಿಸಿ, ಜಾಡಿಸಿ ಒದೆಯಲು ನಾವೂ ಸಿದ್ಧರಿದ್ದೇವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತೆ ಶೇ 100ರಷ್ಟು ಮುಖ್ಯಮಂತ್ರಿ ಆಗುವುದಿಲ್ಲ. ಅವರು ಮುಖ್ಯಮಂತ್ರಿಯಾದರೆ ನೇಣು ಹಾಕಿಕೊಳ್ಳುತ್ತೇನೆ' ಎಂದು ಎಚ್ಚರಿಸಿದರು.

ವಿಧಾನ ಪರಿಷತ್ ಸದಸ್ಯ ಪ್ರಕಾಶ ರಾಠೋಡ, ಹೂವಪ್ಪ ರಾಠೋಡ, ಲಿಂಗಪ್ಪ ಚವ್ಹಾಣ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಚುನಾವಣೆ ಬಹಿಷ್ಕಾರದ ಎಚ್ಚರಿಕೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): 'ಸರ್ಕಾರದ ಒಳಮೀಸಲಾತಿ ನಿರ್ಧಾರವನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಸರ್ಕಾರ ಈ ವರದಿಯನ್ನು ಜಾರಿ ಮಾಡಕೂಡದು' ಎಂದು ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರದ ಬಂಜಾರ ಸಮಾಜದವರು ಬುಧವಾರ ಆಗ್ರಹಿಸಿದರು. ಶಿಫಾರಸು ಹಿಂಪಡೆಯದಿದ್ದರೆ ವಿಧಾನಸಭಾ ಚುನಾವಣೆ ಬಹಿಷ್ಕರಿಸುವ ಎಚ್ಚರಿಕೆ ನೀಡಿದರು.

ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ ಸಮಾಜದ ಮುಖಂಡ ಶಿವಣ್ಣ ಲಮಾಣಿ, 'ಒಳಮೀಸಲಾತಿ ವರದಿ ಅವೈಜ್ಞಾನಿಕ. ಒಳಮೀಸಲಾತಿ ಜಾರಿ ನಿರ್ಧಾರವನ್ನು ತಕ್ಷಣ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ಮುಖಂಡ ಅಶೋಕ ಲಮಾಣಿ, 'ಒಳ ಮೀಸಲಾತಿ ಶಿಫಾರಸು ಹಿಂಪಡೆಯಬೇಕು. ತಾಲ್ಲೂಕಿನ ಎಲ್ಲಾ ತಾಂಡಾದಲ್ಲಿ ವಿಧಾನಸಭಾ ಚುನಾವಣೆ ಬಹಿಷ್ಕರಿಸಲಾಗುತ್ತದೆ' ಎಂದರು.

'ಶೇ 4 ಮೀಸಲು ರದ್ದು ಹಿಂಪಡೆಯಲಿ'

ದಾವಣಗೆರೆ, ಮುಳಗುಂದ, ಸವದತ್ತಿಯಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಳಗುಂದ (ಗದಗ ಜಿಲ್ಲೆ): 'ಪ್ರವರ್ಗ 2'ಬಿ' ಅಡಿ ಮುಸ್ಲಿಮರಿಗೆ ನೀಡುತ್ತಿದ್ದ ಮೀಸಲಾತಿ ರದ್ದು ಪಡಿಸಿದ ಆದೇಶ ಹಿಂಪಡೆಯಬೇಕು' ಎಂದು ಅಂಜುಮನ್ ಎ ಇಸ್ಲಾಂ ಕಮಿಟಿ ಅಧ್ಯಕ್ಷ ಇಮಾಮಸಾಬ್ ಶೇಖ್ ಆಗ್ರಹಿಸಿದರು.

ಅಂಜುಮನ್ ಎ ಇಸ್ಲಾಂ ಕಮಿಟಿಯು ವತಿಯಿಂದ ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಿ, ಪಟ್ಟಣ ಪಂಚಾಯಿತಿಯ ಮೂಲಕ ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

'ಮುಸ್ಲಿಮರಿಗೆ ಪ್ರವರ್ಗ 2'ಬಿ'ಅಡಿ ಇದ್ದ ಮೀಸಲಾತಿ ರದ್ದುಗೊಳಿಸಿರುವುದು ಸರಿಯಲ್ಲ. ಇದರಿಂದ ಸಮಾಜದ ಪ್ರಗತಿಗೆ ಹಿನ್ನಡೆಯಾಗಲಿದೆ. ಶೇ 4ರಷ್ಟು ಮೀಸಲಾತಿ ಮುಂದುವರಿಸಬೇಕು' ಎಂದು ಆಗ್ರಹಿಸಿದರು.

ಸಮುದಾಯ ಎತ್ತಿಕಟ್ಟುವುದು ಸರಿಯಲ್ಲ (ಸವದತ್ತಿ, ಬೆಳಗಾವಿ ವರದಿ): ಮುಸ್ಲಿಮರ ಮೀಸಲಾತಿ ರದ್ದತಿ ಖಂಡಿಸಿ ಮುಸ್ಲಿಂ ಅಸೋಸಿಯೇಷನ್ ಸದಸ್ಯರು ಇಲ್ಲಿನ ತಹಶೀಲ್ದಾರ್ ಜಿ.ಬಿ. ಜಕ್ಕನಗೌಡರ್ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

'ಲಿಂಗಾಯತ, ಒಕ್ಕಲಿಗರಿಗೆ ಮೀಸಲಾತಿ ನೀಡಲು ವಿರೋಧವಿಲ್ಲ. ಆದರೆ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಜಾರಿಯಾಗುವವರೆಗೂ ಮೀಸಲಾತಿ ಬೇಕೇ ಬೇಕು. ಮುಖ್ಯಮಂತ್ರಿಗಳು ಮೀಸಲಾತಿ ಮುಂದಿಟ್ಟುಕೊಂಡು ಸಮುದಾಯಗಳನ್ನು ಎತ್ತಿಕಟ್ಟುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಲಾಯಿತು.

ಮುಸ್ಲಿಮರ ಮೌನ ಪ್ರತಿಭಟನೆ (ದಾವಣಗೆರೆ): ಅಲ್ಪಸಂಖ್ಯಾತರ ಶೇ 4ರಷ್ಟು ಮೀಸಲಾತಿ ರದ್ದುಗೊಳಿಸಿರುವುದರ ವಿರುದ್ಧ ತಾಲ್ಲೂಕು ಮುಸ್ಲಿಮರು ಅಂಜುಂ–ಎ–ಮುಸ್ಲಿಂ ಸಮಿತಿಯಿಂದ ಚನ್ನಗಿರಿಯಲ್ಲಿ ಬುಧವಾರ ಮೌನ ಪ್ರತಿಭಟನೆ ನಡೆಸಲಾಯಿತು.

ಸರ್ಕಾರದ ನಿರ್ಧಾರ ವಿರೋಧಿಸಿ ಮಾರ್ಚ್ 31ರಂದು ದಾವಣಗೆರೆ ನಗರದ ಮಂಡಕ್ಕಿ ಭಟ್ಟಿ ಲೇಔಟ್‌ನ ಮಿಲಾದ್ ಮೈದಾನದಲ್ಲಿ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಪ್ರಕಟಣೆ ತಿಳಿಸಿದೆ.

'ಒಕ್ಕಲಿಗರು, ಲಿಂಗಾಯತರಿಗೆ ಶೇ 10, ಮುಸ್ಲಿಮರಿಗೆ ಶೇ 5ರಷ್ಟು ಮೀಸಲಾತಿ ನೀಡಲಿ'

ಮಡಿಕೇರಿ: 'ಒಕ್ಕಲಿಗರು, ಲಿಂಗಾಯತರಿಗೆ ಶೇ 10 ಹಾಗೂ ಮುಸ್ಲಿಮರಿಗೆ ಶೇ 5 ಮೀಸಲಾತಿ ನೀಡಬೇಕು' ಎಂದು ಕೊಡಗು ಮುಸ್ಲಿಂ ಅಸೋಸಿಯೇಷನ್ ಒತ್ತಾಯಿಸಿದೆ.

'ಚುನಾವಣೆ ಹಿನ್ನೆಲೆಯಲ್ಲಿ ಲಾಭ ಪಡೆಯಲೆಂದೇ ಮುಸ್ಲಿಮ ಮೀಸಲಾತಿಯನ್ನು ಕಿತ್ತು ಒಕ್ಕಲಿಗರು ಹಾಗೂ ಲಿಂಗಾಯತರಿಗೆ ನೀಡಲಾಗಿದೆ' ಎಂದು ಅಸೋಸಿಯೇಷನ್ ಅಧ್ಯಕ್ಷ ಪಿ.ಸಿ.ಹಸೈನಾರ್ ಹಾಜಿ ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು 'ಸರ್ಕಾರದ ನಿರ್ಧಾರದಿಂದ ಯಾವ ಸಮುದಾಯಕ್ಕೂ ಒಳ್ಳೆಯದಾಗುವುದಿಲ್ಲ. ಸರ್ಕಾರ ಈ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಕಾನೂನು ಹೋರಾಟ ನಡೆಸಲಾಗುವುದು' ಎಂದರು.

ಸದಾಶಿವ ಆಯೋಗದ ವರದಿ ಜಾರಿ: ಪ್ರಲ್ಹಾದ ಜೋಷಿ

ನವದೆಹಲಿ: ಕರ್ನಾಟಕದ ಬಿಜೆಪಿ ಸರ್ಕಾರವು ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಜಾರಿ ಮಾಡಿ ಒಳಮೀಸಲಾತಿ ನೀಡಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಷಿ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮುಸ್ಲಿಮರಿಗೆ ಮೀಸಲಾತಿ ನೀಡಿದ್ದು ಸಂವಿಧಾನ ವಿರೋಧಿ ಆಗಿತ್ತು. ಧರ್ಮದ ಆಧಾರದಲ್ಲಿ ಮೀಸಲಾತಿ ಕೊಡಲು ಆಗದು ಎಂದು ಸುಪ್ರೀಂ ಕೋರ್ಟ್ ಸಹ ತಿಳಿಸಿತ್ತು. ಹಾಗಾಗಿ, ಆ ಮೀಸಲಾತಿ ತೆಗೆಯಲಾಗಿದೆ' ಎಂದರು.

'ಕಾಂಗ್ರೆಸ್ ಹಾಗೂ ಜೆಡಿಎಸ್ ಒಳ ಒಪ್ಪಂದ ಮಾಡಿಕೊಂಡು ಈ ಹಿಂದಿನಿಂದಲೂ ಚುನಾವಣೆ ಎದುರಿಸುತ್ತಿವೆ. ಬಿಜೆಪಿ ಯಾವುದೇ ಪಕ್ಷದ ಜತೆಗೆ ಒಳ ಒಪ್ಪಂದ ಮಾಡಿಕೊಳ್ಳುವುದಿಲ್ಲ. ಈ ಸಲ ಅತಂತ್ರ ವಿಧಾನಸಭೆ ಸೃಷ್ಟಿಯಾಗುವುದಿಲ್ಲ. ಬಿಜೆಪಿಗೆ ಸಂಪೂರ್ಣ ಬಹುಮತ ಸಿಗಲಿದೆ' ಎಂದೂ ಅವರು ಹೇಳಿದರು.

ಹೊಸ 'ಪ್ರವರ್ಗ'ಗಳ ಸೃಜನೆ ● ಕೇವಲ ಲಿಂಗಾಯತರು, ಒಕ್ಕಲಿಗರಿಗಷ್ಟೇ ಮೀಸಲಲ್ಲ

2ಸಿ, 2ಡಿ: ಇತರೆ ಜಾತಿಗಳಿಗೂ ಪಾಲಿದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ 'ಪ್ರವರ್ಗ 2ಬಿ'ಗೆ (ಮುಸ್ಲಿಂ ಮತ್ತು ಅದರಲ್ಲಿರುವ ಉಪ ಜಾತಿಗಳು) ನೀಡಿದ್ದ ಮೀಸಲಾತಿಯನ್ನು ತೆಗೆದು, ಒಕ್ಕಲಿಗರಿರುವ 'ಪ್ರವರ್ಗ 3ಎ' ಮತ್ತು ಪಂಚಮಸಾಲಿ ಲಿಂಗಾಯತರಿರುವ 'ಪ್ರವರ್ಗ 3ಬಿ'ಗೆ ತಲಾ ಶೇ 2ರಂತೆ ಹಂಚಿರುವ ರಾಜ್ಯ ಸರ್ಕಾರ, ಈ ಪ್ರವರ್ಗಗಳ ಬದಲು ಹೊಸತಾಗಿ 'ಪ್ರವರ್ಗ 2ಸಿ' ಮತ್ತು 'ಪ್ರವರ್ಗ 2ಡಿ' ಸೃಜಿಸಿದೆ.

ಮಾರ್ಚ್ 24ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಒಕ್ಕಲಿಗರು ಮತ್ತು ಲಿಂಗಾಯತರಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸಿ ತೀರ್ಮಾನ ಕೈಗೊಳ್ಳಲಾಗಿತ್ತು.

ಲಿಂಗಾಯತರಿಗೆ ಶೇ 5ರಷ್ಟಿದ್ದ ಮೀಸಲಾತಿಯನ್ನು ಶೇ 7ಕ್ಕೆ, ಒಕ್ಕಲಿಗರಿಗೆ ಶೇ 4ರಷ್ಟಿದ್ದ ಮೀಸಲಾತಿಯನ್ನು ಶೇ 6ಕ್ಕೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು. 2 ಸಿ ಮತ್ತು 2 ಡಿ ಎಂದು ಹೊಸ ವರ್ಗೀಕರಣ ಮಾಡಲಾಗಿದೆ. ಇದರಲ್ಲಿ ಕೇವಲ ಎರಡು ಜಾತಿಗಳು ಮಾತ್ರ ಇಲ್ಲ. 2ಸಿಯಲ್ಲಿ (ಹಿಂದಿದ್ದ 3 ಎ ಪಟ್ಟಿಯಲ್ಲಿ) ಒಕ್ಕಲಿಗರು ಮಾತ್ರವಲ್ಲದೇ, ರೆಡ್ಡಿ, ಬಲಿಜ, ನಾಯ್ಡು, ಕೊಡವರು ಕೂಡ ಇದ್ದಾರೆ.

2 ಡಿ ಪಟ್ಟಿಯಲ್ಲಿ(ಹಿಂದಿನ 3 ಬಿ) ವೀರಶೈವ, ಪಂಚಮಸಾಲಿ ಸೇರಿದಂತೆ ಲಿಂಗಾಯತರ ಉಪ ಪಂಗಡಗಳು, ಕ್ರಿಶ್ಚಿಯನ್, ಬಂಟ್, ಜೈನ(ದಿಗಂಬರ), ವೈಷ್ಣವ ಉಪ ಪಂಗಡಗಳೂ ಇವೆ.

ಹೊಸತಾಗಿ 'ಪ್ರವರ್ಗ 2ಸಿ' ಮತ್ತು 'ಪ್ರವರ್ಗ 2ಡಿ'ಯನ್ನು ಸೃಜಿಸಿ, ಅಲ್ಲಿ ವಿವಿಧ ಜಾತಿ ಮತ್ತು ಉಪಜಾತಿಗಳನ್ನು ಸೇರಿಸಲಾಗಿತ್ತು.

ಪ್ರವರ್ಗ 3ಎ (ಹೊಸತಾಗಿ 2ಸಿ)

ಒಕ್ಕಲಿಗ, ವಕ್ಕಲಿಗ, ಸರ್ಪ ಒಕ್ಕಲಿಗ, ಹಳ್ಳಿಕಾರ್ ಒಕ್ಕಲಿಗ, ನಾಮಧಾರಿ ಒಕ್ಕಲಿಗ, ಗಂಗಡ್‌ಕಾರ್ ಒಕ್ಕಲಿಗ, ದಾಸ್ ಒಕ್ಕಲಿಗ, ರೆಡ್ಡಿ ಒಕ್ಕಲಿಗ, ಮರಸು ಒಕ್ಕಲಿಗ, ಗೌಡ / ಗೌಡ ಹಳ್ಳಿಕಾರ್, ಕುಂಚಿಟಿಗ, ಗೌಡ, ಕಾಪು, ಹೆಗ್ಗಡೆ, ಕಮ್ಮ, ರಡ್ಡಿ, ಗೌಂಡರ್, ನಾಮಧಾರಿ ಗೌಡ, ಉಪ್ಪಿನ ಕೊಳಗ / ಉತ್ತಮ ಕೊಳಗ, ಕೊಡಗರು, ಬಲಿಜ, ಬಲಜಿಗ / ಬಣಜಿಗ / ಗೌಡಬಣಜಿಗ, ನಾಯ್ಡು, ತೆಲಗ ಬಲಿಜ /ತೆಲಗ ಬಣಜಿಗ, ಶೆಟ್ಟಿಬಲಿಜ / ಶೆಟ್ಟಿಬಣಜಿಗ / ಬಣಜಿಗ ಶೆಟ್ಟಿ, ದಾಸರ ಬಲಿಜ / ದಾಸರ ಬಲಜಿಗ/ ದಾಸರ ಬಣಜಿಗ / ದಾಸ ಬಣಜಿಗ, ಕಸ್ಬನ್ಮುನ್ನೂರ / ಮುನ್ನಾರ್ / ಮುನ್ನೂರ್ ಕಾಪು, ಬಳೆಗಾರ / ಬಳೆ ಬಣಜಿಗ/ ಬಳೆ ಬಲಜಿಗ / ಬಳೆ ಚೆಟ್ಟಿ / ಬಣಗಾರ, ರೆಡ್ಡಿ (ಬಲಿಜ), ಜನಪ್ಪನ್, ಉಪ್ಪಾರ (ಬಲಿಜ), ತುಲೇರು (ಬಲಿಜ)

ಪ್ರವರ್ಗ 3ಬಿ (ಹೊಸತಾಗಿ 2ಡಿ)

ವೀರಶೈವ ಲಿಂಗಾಯತ, ಲಿಂಗಾಯತ ಉಪ ಜಾತಿಗಳಾದ– ಹೆಳವ, ಅಂಬಿಗ, ಭೋಯಿ, ಗಂಗಮತ, ಸುಣಗಾರ, ಅಗಸ, ಮಡಿವಾಳ, ಕುಂಬಾರ, ಕುರುಬ, ಬಜಂತ್ರಿ, ಬಂಡಾರಿ, ಹಡಪದ, ಕ್ಷೌರಿಕ, ನವಲಿಗ ನಾವಿ, ಅಕ್ಕಸಾಲಿ, ಬಡಿಗಾರ್, ಕಮ್ಮಾರ, ಕಂಸಾಳ, ಪಾಂಚಾಳ, ಮೇದರ ಉಪ್ಪಾರ, ಗೌಳಿ, ಮರಾತ, ಮರಾಠ, ಅರೆ ಕ್ಷತ್ರಿ, ಅರೆ ಮರಾಠ, ಆರ್ಯ ಮರಾಠ, ಆರ್ಯ, ಆರ್ಯರು, ಕೊಂಕಣ ಮರಾಠ, ಕ್ಷತ್ರಿಯ ಮರಾಠ, ಕುಳವಾಡಿ, ಕ್ರಿಶ್ಚಿಯನ್, ಬಂಟ್/ಬಂಟ್, ಪರಿವಾರ ಬಂಟ್, ಜೈನರು (ದಿಗಂಬರರು), ಸಾತಾನಿ, ಚಾತ್ರದ ಶ್ರೀವೈಷ್ಣವ / ಚಾತ್ತಾದ ವೈಷ್ಣವ ಶಾತ್ತಾದ ವೈಷ್ಣವ / ಶಾತ್ರಾದ ಶ್ರೀವೈಷ್ಣವ, ಕದ್ರಿ ವೈಷ್ಣವ, ಸಮೆರಾಯ, ಸಾತ್ತದವಲ್, ಸಾತ್ತದವನ್, ವೈಷ್ಣವ

ಏಳು ಐಎಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ಏಳು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ವರ್ಗಾವಣೆಗೊಂಡವರ ವಿವರ: ಎಂ.ಎಸ್.ಶ್ರೀಕರ್ –ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ . ಶೇಖ್ ತನ್ವೀರ್–ಸಿಇಒ, ಮಂಡ್ಯ ಜಿಲ್ಲಾ ಪಂಚಾಯಿತಿ. ಲೋಖಂಡೆ ಸ್ನೇಹಲ್ ಸುಧಾಕರ್–ಸಿಇಒ, ಶಿವಮೊಗ್ಗ ಜಿಲ್ಲಾ ಪಂಚಾಯಿತಿ. ಎಸ್.ರಂಗಪ್ಪ– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಔಷಧ ಸರಬರಾಜು ನಿಗಮ. ಗರಿಮಾ ಪನ್ವರ್–ಸಿಇಒ, ಯಾದಗಿರಿ ಜಿಲ್ಲಾ ಪಂಚಾಯಿತಿ. ಆಕೃತಿ ಬನ್ಸಾಲ್–ಹೆಚ್ಚುವರಿ ಸ್ಥಾನಿಕ ಆಯುಕ್ತೆ, ಕರ್ನಾಟಕ ಭವನ, ದೆಹಲಿ.

ಆಯುಷ್ ಇಲಾಖೆಯ ಆಯುಕ್ತ ಜೆ.ಮಂಜುನಾಥ್ ಅವರಿಗೆ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿಯ ಯೋಜನಾ ನಿರ್ದೇಶಕ ಹುದ್ದೆಯ ಹೆಚ್ಚುವರಿ ಪ್ರಭಾರ ವಹಿಸಲಾಗಿದೆ.

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad – 500 028
Corporate Identity Number (CIN) - L13100TG1958GOI001674

PRESS NOTIFICATION

Tender Enquiry No:HO(Contracts)/HMM/67LT/DIOM/2022/875/169 Dated 30/03/2023

NMDC Limited, A "NAVARATNA" Public Sector Company under Ministry of Steel, Govt. of India, invites **online bids** through **MSTC Portal** from experienced domestic bidders for the work of ***Hiring of Mining Machineries for excavation of 15.00 LT (+/- 20%) of Ore and 52.00 LT (+/- 20%) of waste in a year in beyond MMX Section of Donimalai Iron Ore Mine (DIOM) and extendable by another year with same terms & conditions on mutual consent basis at Donimalai, Dist: Bellary, Karnataka state – 583 118.***

The detailed NIT and Bid documents can be viewed and/or downloaded **from 30/03/2023 to 28/04/2023 from following website links;**

1. NMDC website – **https://nmdcportals.nmdc.co.in/nmdctender**
2. Central Public Procurement portal–**https://www.eprocure.gov.in/epublish/app** and search tender through tender enquiry number
3. MSTC Portal - portal **https://www.mstcecommerce.com/eprochome/ nmdc/**

For accessing the bid document from MSTC portal, bidders to visit MSTC website (use Microsoft Edge browser for compatibility) and search Tender Event No. **NMDC/HO/102/22-23/ET/1022**.

The bidders are requested to submit their bids online through MSTC Portal. The details of submission of bid through online are given in NIT. The Bidders on regular basis are required to visit the NMDC's website/CPP Portal/ MSTC Portal for corrigendum, if any, at a future date.

For further clarification, the following can be contacted –

Chief General Manager (Contracts), NMDC Limited, Hyderabad, Fax No. 040 – 2353 4746, Telephone No. 040 – 23532800, email: contracts@nmdc.co.in

For and on behalf of NMDC Ltd.
Chief General Manager (Contracts)

हर एक काम देश के नाम — इस्पाती इरादा

ರ್‍ಯಾಲಿ, ರೋಡ್ ಶೋ, ಪಾದಯಾತ್ರೆಗಳ ಮೂಲಕ ವರ್ಷ ಪೂರ್ತಿ ಚುನಾವಣೆಗೆ ಸಿದ್ಧತೆ ಮಾಡಿಕೊಂಡಿರುವ ರಾಜಕೀಯ ಪಕ್ಷಗಳು

ನಿರ್ಣಾಯಕ ಹಂತದ ಪ್ರಚಾರಕ್ಕೆ ಸರ್ವಪಕ್ಷಗಳು ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆ ಎದುರಿಸಲು ಎಲ್ಲ ಪ್ರಮುಖ ರಾಜಕೀಯ ಪಕ್ಷಗಳು ಸಜ್ಜಾಗಿವೆ. ಕಳೆದ ಒಂದು ವರ್ಷದಿಂದ ವಿವಿಧ ಪಕ್ಷಗಳು ತಮ್ಮದೆ ಆದೇ ಆದ ರೀತಿಯಲ್ಲಿ ಪೂರ್ವಭಾವಿ ತಯಾರಿ ನಡೆಸಿಕೊಂಡಿವೆ. ರ್‍ಯಾಲಿಗಳು, ರೋಡ್ ಶೋ, ಪಾದಯಾತ್ರೆಗಳ ಮೂಲಕ ತಮ್ಮ ಪರ ಅಲೆ ಎಬ್ಬಿಸುವ ಪ್ರಯತ್ನ ಮಾಡಿದ್ದವು. ಇದೀಗ ಚುನಾವಣೆ ದಿನಾಂಕ ಪ್ರಕಟವಾದ ಬೆನ್ನಲ್ಲೇ ಎಲ್ಲ ನಿರ್ಣಾಯಕ ಹಂತದ ಪ್ರಚಾರ ಕಾರ್ಯಕ್ಕೆ ಇಳಿಯಲಿವೆ.

ಬಿಜೆಪಿ:

ಬಿಜೆಪಿ ಕಳೆದ ಒಂದು ವರ್ಷದಿಂದ ಪಕ್ಷದ ಪರವಾಗಿ ಅಲೆ ಎಬ್ಬಿಸಲು 'ಪರಿವರ್ತನಾ ಯಾತ್ರೆ', 'ಬೂತ್ ವಿಜಯ', 'ಜನ ಸಂಕಲ್ಪ ಯಾತ್ರೆ', 'ನವಶಕ್ತಿ ಸಮಾವೇಶ', 'ವಿಜಯಸಂಕಲ್ಪ' ಯಾತ್ರೆಗಳನ್ನು ನಡೆಸಿದೆ. ವಿಜಯಸಂಕಲ್ಪ ಯಾತ್ರೆ ಅಂತಿಮ ಸಮಾವೇಶ ದಾವಣಗೆರೆಯಲ್ಲಿ ಇತ್ತೀಚೆಗೆ ಮಹಾಸಂಗಮ ರೂಪದಲ್ಲಿ ನಡೆಸಿತು. ಪ್ರಧಾನಿ ಮೋದಿ ಇದರಲ್ಲಿ ಭಾಗವಹಿಸಿದ್ದರು. ಅಲ್ಲದೇ, ಮೋದಿ ಆರು ಬಾರಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಒಂಬತ್ತು ಬಾರಿ ರಾಜ್ಯಕ್ಕೆ ಭೇಟಿ ನೀಡಿ ಹಲವು ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಉದ್ಘಾಟನೆ ಮಾಡಿದರು. ಇನ್ನು ಕೆಲವು ಯೋಜನೆಗಳಿಗೆ ಚಾಲನೆ ನೀಡಿದ್ದೂ ಅಲ್ಲದೇ, ಸುಮಾರು ₹50 ಸಾವಿರ ಕೋಟಿಗೂ ಅಧಿಕ ಮೊತ್ತದ ಹೊಸ ಯೋಜನೆಗಳನ್ನು ಘೋಷಿಸಿದ್ದಾರೆ.

ಕಾಂಗ್ರೆಸ್:

ವಿಧಾನಸಭೆ ಚುನಾವಣೆಯಲ್ಲಿ ರಾಜಕೀಯ ಲಾಭದ ಫಸಲು ತೆಗೆಯಲು ಸುಮಾರು ಒಂದು ವರ್ಷದ ಹಿಂದೆಯೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ 'ಮೇಕೆದಾಟು' ಪಾದಯಾತ್ರೆ ಹಮ್ಮಿಕೊಂಡಿತು. ಕೋವಿಡ್ ಕೋಲಾಹಲದ ಮಧ್ಯೆಯೂ ಯಾತ್ರೆಯನ್ನು ಮುನ್ನಡೆಸಿದರು. ಆ ಬಳಿಕ ದಾವಣಗೆರೆಯಲ್ಲಿ 'ಸಿದ್ದರಾಮಯ್ಯ–75' ಅಮೃತ ಮಹೋತ್ಸವ, ಸ್ವಾತಂತ್ರ್ಯ ನಡಿಗೆ, ರಾಹುಲ್‌ಗಾಂಧಿಯ 'ಭಾರತ್ ಜೋಡೊ' ಯಾತ್ರೆಯೂ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಹಾದು ಹೋಯಿತು. ಜನವರಿಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು 'ಪ್ರಜಾಧ್ವನಿ' ಹೆಸರಿ ನಲ್ಲಿ ಬಸ್ ಯಾತ್ರೆ ನಡೆಸಿದರು. ಪ್ರಿಯಾಂಕ ಗಾಂಧಿ ಅವರು 'ನಾ ನಾಯಕಿ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜೆಡಿಎಸ್:

ವರ್ಷದ ಮೊದಲೇ ವಿಧಾನಸಭಾ ಚುನಾವಣಾ ತಯಾರಿಯನ್ನು ಜೆಡಿಎಸ್ ಆರಂಭಿಸಿತ್ತು. ನೀರಾವರಿ ಯೋಜನೆಗಳ ಅನುಷ್ಠಾನದ ಭರವಸೆ ನೀಡಿ 'ಜನತಾ ಜಲಧಾರೆ' ಎಂಬ ಕಾರ್ಯಕ್ರಮ ಆಯೋಜಿಸಿತ್ತು. 'ಜನತಾ ಜಲಧಾರೆ' ರಥಯಾತ್ರೆ 180 ವಿಧಾನಸಭೆ ಕ್ಷೇತ್ರಗಳಲ್ಲಿ ಸಂಚರಿಸಿ, ಎಲ್ಲ ನದಿಗಳು ಮತ್ತು ಪ್ರಮುಖ ಜಲ ಮೂಲಗಳಿಂದ ನೀರು ಸಂಗ್ರಹಿಸಿ ಅದನ್ನು ಬೆಂಗಳೂರಿಗೆ ತರಲಾಯಿತು. ನೆಲಮಂಗಲದ ಬಳಿ ಬೃಹತ್ ಸಮಾವೇಶ ನಡೆಸಿ ಗಂಗಾ ಆರತಿ ಮತ್ತು ಗಂಗಾ ಪೂಜೆಯ ಮೂಲಕ ಯಾತ್ರೆ ಸಮಾರೋಪಗೊಂಡಿತ್ತು. ಅಧಿಕಾರಕ್ಕೆ ಬಂದರೆ ಶಿಕ್ಷಣ, ಆರೋಗ್ಯ, ರೈತ ಸಬಲೀಕರಣ, ಯುವಕರು ಮತ್ತು ಮಹಿಳೆಯರ ಸಬಲೀಕರಣ, ಎಲ್ಲರಿಗೂ ವಸತಿ ಕಲ್ಪಿಸುವ ಕಾರ್ಯಕ್ರಮಗಳ ಜಾರಿಯ ಭರವಸೆ ನೀಡುವ ಉದ್ದೇಶದಿಂದ 100 ವಿಧಾನಸಭಾ ಕ್ಷೇತ್ರಗಳಲ್ಲಿ 'ಪಂಚ ರತ್ನ' ಯಾತ್ರೆ ನಡೆಯಿತು.

ಕೆಆರ್‌ಎಸ್ ಪಕ್ಷ

ಚುನಾವಣೆ ದೃಷ್ಟಿಯಲ್ಲಿಟ್ಟು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಅಧ್ಯಕ್ಷ ರವಿಕೃಷ್ಣಾ ರೆಡ್ಡಿ ನೇತೃತ್ವದಲ್ಲಿ ಫೆ. 27ರಿಂದ 'ಕರುನಾಡ ಕಟ್ಟೋಣ' ಸಂಕಲ್ಪ ಯಾತ್ರೆ ಬೆಂಗಳೂರಿನಿಂದ ನಡೆಸಿತು. ಸಮಿತಿ ಕಳೆದ ವರ್ಷ 45 ದಿನಗಳ 'ಜನಚೈತ್ರ ಯಾತ್ರೆ' ಹಮ್ಮಿಕೊಂಡಿತ್ತು. 31 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಪ್ರಸ್ತುತ ರಾಜಕೀಯ, ಭ್ರಷ್ಟಾಚಾರ, ದುರಾಡಳಿತ, ಬೆಲೆ ಏರಿಕೆ ಕುರಿತು ರೆಡ್ಡಿ ಜನ ಜಾಗೃತಿ ಮೂಡಿಸಿದ್ದರು.

- ಜನಾಂದೋಲನ ಮಹಾಮೈತ್ರಿ ಸಂಘಟನೆಯು ಸಿಟಿಜನ್ ಫಾರ್ ಡೆಮಾಕ್ರಸಿ, ಜನತಂತ್ರ ಪ್ರಯೋಗ ಶಾಲೆ ಸಹಯೋಗದಲ್ಲಿ, ಸಂಘಟನೆಯ ಮುಖಂಡರಾದ ಎಸ್.ಆರ್. ಹಿರೇಮಠ, ಬಡಗಲಪುರ ನಾಗೇಂದ್ರ, ಪಿ.ಆರ್.ಎಸ್.ಮಣಿ, ಎಚ್.ವಿ. ದಿವಾಕರ್ ನೇತೃತ್ವದಲ್ಲಿ ಜ.2ರಿಂದ 11ರವರೆಗೆ ಸಮಾಜ ಪರಿವರ್ತನಾ ಸತ್ಯಾಗ್ರಹ ಯಾತ್ರೆ ಹಮ್ಮಿಕೊಂಡಿತ್ತು.
- ಆಮ್ ಆದ್ಮಿ ಪಕ್ಷದ ನೇತಾರ ಅರವಿಂದ ಕೇಜ್ರಿವಾಲ್ ರಾಜ್ಯಕ್ಕೆ ಎರಡು ಬಾರಿ ಬಂದು ಸಮಾವೇಶಗಳನ್ನು ನಡೆಸಿದರು.

'ಕಾಂಗ್ರೆಸ್ ಕಟ್ಟಿ ಹಾಕಲು ಆದಾಯ ತೆರಿಗೆ ಅಧಿಕಾರಿಗಳ ನಿಯೋಜನೆ'

ಕಾಂಗ್ರೆಸ್ ಅನ್ನು ಕಟ್ಟಿಹಾಕುವುದಕ್ಕಾಗಿಯೇ ಹೆಚ್ಚು ಆದಾಯ ತೆರಿಗೆ ಅಧಿಕಾರಿಗಳನ್ನು ಚುನಾವಣಾ ಆಯೋಗವು ನಿಯೋಜಿಸಿದೆ. ಕಳೆದ ಉಪ ಚುನಾವಣೆಯಲ್ಲಿ ಬಿಜೆಪಿ ತನ್ನ ಅಭ್ಯರ್ಥಿಗೆ ₹ 25 ಕೋಟಿಯಿಂದ ₹ 50 ಕೋಟಿಯಷ್ಟು ಹಣ ಖರ್ಚು ಮಾಡಿತ್ತು. ಆಗ ಚುನಾವಣಾ ಆಯೋಗ ಏನು ಮಾಡಿತ್ತು? ಆಪರೇಷನ್ ಕಮಲ ಮಾಡಿದ್ದು ಯಾರು? ಇಡೀ ಚುನಾವಣಾ ವ್ಯವಸ್ಥೆಯನ್ನು ಬಿಜೆಪಿ ಭ್ರಷ್ಟಗೊಳಿಸಿದೆ. ಬಿಜೆಪಿಯೇ ಚುನಾವಣೆಯಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಲಿದೆ.

ಬಿಜೆಪಿಯ ಚುನಾವಣಾ ಅಕ್ರಮಗಳನ್ನು ತಡೆಯಲು ನಮ್ಮ ಕಾರ್ಯಕರ್ತರಿಗೂ ಹೇಳುತ್ತೇವೆ. ಆಯೋಗವು ಪಾರದರ್ಶಕ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವ ನಿರೀಕ್ಷೆಯನ್ನಿಟ್ಟುಕೊಂಡಿದ್ದೇವೆ. ಮಾದರಿ ನೀತಿ ಸಂಹಿತೆ ಜಾರಿಯಾಗಿದ್ದು, ಒಂದೇ ಹಂತದಲ್ಲಿ ಚುನಾವಣೆ ನಡೆಯುತ್ತಿರುವುದನ್ನು ಸ್ವಾಗತಿಸುವೆ. ಕಾಂಗ್ರೆಸ್ ಪ್ರಚಾರ ಕಾರ್ಯಕ್ರಮಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ. ಏ.5ರಂದು ರಾಹುಲ್ ಗಾಂಧಿ ರಾಜ್ಯಕ್ಕೆ ಬರುತ್ತಿದ್ದಾರೆ. ನಾನು ಇದುವರೆಗೆ 60 ಕ್ಷೇತ್ರ ಹಾಗೂ ಡಿ.ಕೆ.ಶಿವಕುಮಾರ್ 50– 60 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದ್ದೇವೆ. ಪಕ್ಷದಿಂದ ಅನೇಕ ಪ್ರಚಾರ ಸಭೆಗಳನ್ನು ಮಾಡಿದ್ದು, ಚುನಾವಣೆಗೆ ಸಿದ್ಧರಾಗಿದ್ದೇವೆ.

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

'80 ದಾಟಿದವರಿಗೆ ಮನೆಯಿಂದ ಮತದಾನ ಸ್ವಾಗತಾರ್ಹ'

ವಿಧಾನಸಭಾ ಚುನಾವಣೆಯು ಮತ್ತೆ ಡಬಲ್ ಎಂಜಿನ್ ಸರ್ಕಾರ ರಚನೆಗೆ ಅವಕಾಶ ಮಾಡಿಕೊಡಲಿದೆ.

ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಹೆಚ್ಚು ವೇಗವಾಗಿ ಅಭಿವೃದ್ಧಿ ಕಾರ್ಯ ಸಾಧ್ಯ. ಒಂದೇ ಹಂತದಲ್ಲಿ ಚುನಾವಣೆ ನಡೆಯಲೆಂಬ ಅಪೇಕ್ಷೆ ಇತ್ತು. ಅದೇ ನಿರೀಕ್ಷೆಯಂತೆ ಚುನಾವಣೆ ನಡೆಯುತ್ತಿದೆ. ಶಾಂತಿಯುತವಾಗಿ ಮತದಾನ ಆಗಲಿ. ಗೊಂದಲ, ಗಲಭೆಯಿಂದ ಮರು ಮತದಾನ ಆಗದಿರಲಿ ಎಂಬ ಅಪೇಕ್ಷೆ ನಮ್ಮದು. 80 ವರ್ಷಕ್ಕೂ ಮೇಲ್ಪಟ್ಟ 12 ಲಕ್ಷಕ್ಕೂ ಹೆಚ್ಚು ಮತದಾರರು, ಸಾವಿರಾರು ಅಂಗವಿಕಲ ಮತದಾರರು ಮನೆಯಲ್ಲೇ ಕುಳಿತು ಮತದಾನ ಮಾಡಲು ಚುನಾವಣಾ ಆಯೋಗ ಅವಕಾಶ ನೀಡಿದೆ. ತಂತ್ರಜ್ಞಾನಕ್ಕೆ ಒತ್ತು ನೀಡಿದ್ದರಿಂದ ಇದು ಸಾಧ್ಯವಾಗಿದೆ.

ಬೆಂಗಳೂರು ಮಹಾನಗರದಲ್ಲಿ ಮತದಾನ ಶೇಕಡವಾರು ಕಡಿಮೆ ಆಗುವ ಕುರಿತು ಆಯೋಗ ಆತಂಕ ವ್ಯಕ್ತಪಡಿಸಿದೆ. ಇದಕ್ಕಾಗಿ ನಗರ ಮತದಾರರನ್ನು ಕರೆ ತರಲು ಮತ್ತು ಮನವೊಲಿಸಲು ವಿಶೇಷ ಪ್ರಯತ್ನದ ಅಗತ್ಯವಿದೆ. ಮಹಿಳಾ ಮತದಾರರು ಹಲವು ಕಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದು ಖುಷಿಯ ಸಂಗತಿ.

ಶೋಭಾ ಕರಂದ್ಲಾಜೆ, ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ

2018ರ ಫಲಿತಾಂಶ	
ಬಿಜೆಪಿ	104
ಕಾಂಗ್ರೆಸ್	78
ಜೆಡಿಎಸ್	37
ಬಿಎಸ್‌ಪಿ	01
ಕೆಪಿಜೆಪಿ	01
ಸ್ವತಂತ್ರ	01
ಚುನಾವಣೆ ನಡೆದಿದ್ದು	222
ಒಟ್ಟು ಕ್ಷೇತ್ರಗಳು	224

ಯಾವ ಪಕ್ಷಗಳಿಂದ ಅಭ್ಯರ್ಥಿಗಳ ಪಟ್ಟಿ ಪ್ರಕಟ	
ಕಾಂಗ್ರೆಸ್ ಪಕ್ಷ	124
ಬಿಜೆಪಿ	ಪ್ರಕಟಿಸಿಲ್ಲ
ಜೆಡಿಎಸ್	93
ಬಿಎಸ್‌ಪಿ	53
ಎಎಪಿ	80
ಕೆಆರ್‌ಎಸ್	110

'ಜನ ಸಾಮಾನ್ಯರಿಗೆ ಕಿರುಕುಳ ನೀಡಬಾರದು'

ರಾಜ್ಯ ವಿಧಾನಸಭೆಗೆ ಒಂದೇ ಹಂತದಲ್ಲಿ ಚುನಾವಣೆ ನಡೆಸುವ ಕೇಂದ್ರ ಚುನಾವಣಾ ಆಯೋಗದ ನಿರ್ಧಾರ ಸ್ವಾಗತಾರ್ಹ. ಚುನಾವಣಾ ವೇಳಾಪಟ್ಟಿ ಪ್ರಕಟಣೆಯನ್ನು ವಾರದಿಂದಲೂ ನಿರೀಕ್ಷಿಸಿದ್ದೆವು. ಚುನಾವಣೆಯ ಪಾವಿತ್ರ್ಯ ಕಾಪಾಡುವುದಾಗಿ ಎಲ್ಲ ರಾಜಕೀಯ ಪಕ್ಷಗಳೂ ಹೇಳುತ್ತಿವೆ. ಆದರೆ, ರಾಷ್ಟ್ರೀಯ ಪಕ್ಷಗಳು ಕುಕ್ಕರ್, ವಾಚು, ತವಾ ಹಂಚಿ ಚುನಾವಣಾ ಆಮಿಷ ಒಡ್ಡುತ್ತಿವೆ. ಚುನಾವಣಾಧಿಕಾರಿಗಳು ಬೃಹತ್ ಪ್ರಮಾಣದ ನಗದು, ವಸ್ತು ವಶಪಡಿಸಿಕೊಂಡಿದ್ದಾರೆ. ಅಂಥವರಿಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಇರುವುದೇ ಅಚ್ಚರಿ.

ಚುನಾವಣಾ ಬಂದೋಬಸ್ತ್‌ಗಾಗಿ ತೆರೆಯುವ ತನಿಖಾ ಠಾಣೆಗಳಲ್ಲಿ ಸಾಮಾನ್ಯ ಜನರಿಗೆ ಕಿರುಕುಳ ಆಗಬಾರದು. ಆಸ್ಪತ್ರೆಗೆ ಹೋಗುತ್ತಿರುವವರು, ರೈತರು ಹೊಂದಿರುವ ಹಣ ಜಪ್ತಿ ಮಾಡಬಾರದು. ನಮ್ಮ ಪಕ್ಷ ಚುನಾವಣಾ ತಯಾರಿಯ ಶೇಕಡ 50 ರಷ್ಟು ಕೆಲಸವನ್ನು ಈಗಾಗಲೇ ಮುಗಿಸಿದೆ. ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಎರಡರಿಂದ ಮೂರು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು. ನಾನು ಚನ್ನಪಟ್ಟಣದಲ್ಲಿ ಮಾತ್ರ ಸ್ಪರ್ಧಿಸುತ್ತೇನೆ. ಹಾಸನ ಅಭ್ಯರ್ಥಿ ವಿಚಾರದಲ್ಲಿ ಯಾವ ಗೊಂದಲವೂ ಇಲ್ಲ. ಆ ಬಗ್ಗೆ ನನ್ನ ಹಿಂದಿನ ಹೇಳಿಕೆಗೆ ಬದ್ಧನಿದ್ದೇನೆ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ಕೆಲಸಗಳ ಆಧಾರದ ಮೇಲೆ ಸಕಾರಾತ್ಮಕ ತೀರ್ಪು ಕೇಳುತ್ತೇವೆ'

ಚುನಾವಣೆ ಎದುರಿಸಲು ಬಿಜೆಪಿ ಸನ್ನದ್ಧವಾಗಿದೆ. ಬಿಜೆಪಿ ಬಲಿಷ್ಠ ಕೇಡರ್ ಇರುವ, ಅತಿ ಹೆಚ್ಚು ಸದಸ್ಯರನ್ನು ಹೊಂದಿರುವ ಪಕ್ಷ. ಈಗಾಗಲೇ ಹಲವಾರು ಅಭಿಯಾನ ಮಾಡಿದೆ. ನಿರಂತರವಾಗಿ ಪಕ್ಷದ ಸಂಘಟನೆ ಮಾಡಿಕೊಂಡು ಬಂದಿದ್ದು, ಬೂತ್ ಮಟ್ಟದ ಅಭಿಯಾನ, ಮೋರ್ಚಾಗಳ ಸಮ್ಮೇಳನ, ಸಂಕಲ್ಪ ಯಾತ್ರೆ, ವಿಜಯ ಸಂಕಲ್ಪ ಯಾತ್ರೆ ಕೈಗೊಳ್ಳಲಾಗಿದೆ. ವಿವಿಧ ಜನಪರ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ಹಲವು ಯೋಜನೆಗಳನ್ನು ಜಾರಿ ಮಾಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಹೆಚ್ಚಳ ಮಾಡಲಾಗಿದೆ. ಒಳಮೀಸಲಾತಿ ಹೆಚ್ಚಳ, ಒಬಿಸಿಯಲ್ಲಿ ಬದಲಾವಣೆ ಜನಮಾನಸದಲ್ಲಿ ಪಕ್ಷ ಮತ್ತು ಸರ್ಕಾರದ ಪರವಾಗಿ ಜನತಾ ಜನಾರ್ದನರು ನಿಲ್ಲಲಿದ್ದಾರೆ. ನಮ್ಮ ಕೆಲಸಗಳ ಆಧಾರದ ಮೇಲೆ ಸಕಾರಾತ್ಮಕ ತೀರ್ಪು ಕೇಳಲಿದ್ದೇವೆ. ಜನರ ಆಶೀರ್ವಾದ ನಮ್ಮ ಪರ ಇದೆ.

ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಕಳೆದ ಮೂರು ತಿಂಗಳುಗಳಿಂದ ಮಾಡಿರುವ ಪ್ರವಾಸ ಸಕಾರಾತ್ಮಕ ಪರಿಣಾಮ ಬೀರಿದೆ. 2023 ರ ಮೇ 13 ರಂದು ಸ್ಪಷ್ಟವಾದ ಬಹುಮತ ಭಾರತೀಯ ಜನತಾ ಪಕ್ಷಕ್ಕೆ ಸಿಗಲಿದೆ. ಮತ್ತೆ ನಮ್ಮ ಸರ್ಕಾರ 5 ವರ್ಷ ಆಡಳಿತ ಮಾಡುವುದರಲ್ಲಿ ಸಂಶಯವಿಲ್ಲ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬಿಎಂಟಿಸಿ ಸಹಯೋಗದ ಪ್ರತಿಷ್ಠಿತ 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಯನ್ನು ಲೇಖಕಿ ವೈದೇಹಿ ಅವರಿಗೆ ಬುಧವಾರ ಬೆಂಗಳೂರಿನಲ್ಲಿ ಪ್ರದಾನ ಮಾಡಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಸಾಹಿತಿ ಚಂದ್ರಶೇಖರ ಕಂಬಾರ, ಕೆಎಸ್‌ಆರ್‌ಟಿಸಿ ಕೇಂದ್ರ ಕ್ರಿಯಾ ಸಮಿತಿ ಅಧ್ಯಕ್ಷ ವ.ಚ. ಚನ್ನೇಗೌಡ, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲಪಾಂಡು, ಕವಿ ಎಚ್‌.ಎಸ್. ವೆಂಕಟೇಶಮೂರ್ತಿ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಇದ್ದರು ಪ್ರಜಾವಾಣಿ ಚಿತ್ರ

ವಾರ್ತಾ ಇಲಾಖೆ ನಿರ್ದೇಶಕರಾಗಿ ಡಿ.ಪಿ. ಮುರಳೀಧರ್

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಂಟಿ ನಿರ್ದೇಶಕರಾಗಿದ್ದ ಡಿ.ಪಿ. ಮುರಳೀಧರ್ ಅವರಿಗೆ ಇಲಾಖೆಯ ನಿರ್ದೇಶಕರ ಹುದ್ದೆಗೆ ಬುಧವಾರ ಬಡ್ತಿ ನೀಡಲಾಗಿದೆ.

ಅವರಿಗೆ ಜಂಟಿ ನಿರ್ದೇಶಕರ ವೇತನ ಶ್ರೇಣಿಯಿಂದ 'ಗ್ರೂಪ್-ಎ' ಹಿರಿಯ ಶ್ರೇಣಿಯ ನಿರ್ದೇಶಕರ ವೇತನ ಶ್ರೇಣಿಗೆ ಬಡ್ತಿ ನೀಡಲಾಗಿದೆ. ಬುಧವಾರವೇ ಅವರು ನಿರ್ದೇಶಕರ ಹುದ್ದೆಯ ಅಧಿಕಾರ ಸ್ವೀಕರಿಸಿದ್ದಾರೆ.

ಹಣದ ಬಲ ತಡೆಯುವುದು ಸವಾಲು: ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನಸಭೆ ಚುನಾವಣೆಯ ಸಮಯದಲ್ಲಿ ಹಣದ ಬಲ ತಡೆಯುವುದು ದೊಡ್ಡ ಸವಾಲು ಎಂದು ಕೇಂದ್ರ ಚುನಾವಣಾ ಆಯೋಗ ಹೇಳಿದೆ.

ರಾಜ್ಯದಲ್ಲಿ ಮತದಾರರ ಮೇಲೆ ಪ್ರಭಾವ ಬೀರುವ ಚಟುವಟಿಕೆಗಳ ಮೇಲೆ ನಿಗಾ ಇಟ್ಟು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದಿದೆ.

ರಾಜ್ಯದ ಚುನಾವಣಾ ಸಿದ್ಧತೆ ಕುರಿತು ಪರಿಶೀಲಿಸಲು ಕೇಂದ್ರ ಚುನಾವಣಾ ಆಯೋಗವು ಕರ್ನಾಟಕಕ್ಕೆ ಇತ್ತೀಚೆಗೆ ಭೇಟಿ ನೀಡಿತ್ತು. ಹಣ ಬಲದ ಬಳಕೆಗೆ ಬಗ್ಗೆ ಕೆಲವು ರಾಜಕೀಯ ಪಕ್ಷಗಳು ದೂರು ನೀಡಿದ್ದವು. ಚುನಾವಣಾ ಸಂದರ್ಭದಲ್ಲಿ ಮತದಾರರ ಮೇಲೆ ಪ್ರಭಾವ ಬೀರಲು ಅಪಾರ ಪ್ರಮಾಣದ ಹಣ ಬಳಸುತ್ತಿರುವುದು ಆಯೋಗದ ಗಮನಕ್ಕೂ ಬಂದಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಿಳಿಸಿದರು.

ರಾಜ್ಯದಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಾಗಿರುವುದು ಬುಧವಾರದಿಂದ. ಆದರೆ, ಅಧಿಕಾರಿಗಳು ಕಟ್ಟೆಚ್ಚರ ವಹಿಸಿ ಅನೇಕ ಅಕ್ರಮಗಳಿಗೆ ತಡೆ ಒಡ್ಡಿದ್ದಾರೆ. ಕೆಲವು ದಿನಗಳಲ್ಲೇ ₹58 ಕೋಟಿ ಮೊತ್ತದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಹೇಳಿದರು.

'ಮತದಾರರಿಗೆ ಹಣ ಮತ್ತಿತರ ಆಮಿಷ ನೀಡುವುದನ್ನು ತಡೆಗಟ್ಟಲು ಆಯೋಗ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇಂತಹ ಕೃತ್ಯಗಳ ಮೇಲೆ ನಿಗಾ ಇಡಲು 2,400 ವಿಚಕ್ಷಣಾ ತಂಡಗಳನ್ನು ರಚಿಸಲಾಗುತ್ತದೆ. ರಾಜ್ಯದ 19 ಜಿಲ್ಲೆಗಳಲ್ಲಿ ಅಂತರ್‌ರಾಜ್ಯದ ಗಡಿಗಳಿದ್ದು, ಇಲ್ಲಿ 171 ಅಂತರ್‌ರಾಜ್ಯದ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗುತ್ತದೆ. ವಾಣಿಜ್ಯ ತೆರಿಗೆ, ಅರಣ್ಯ, ಅಬಕಾರಿ ಸೇರಿದಂತೆ ಹಲವು ಇಲಾಖೆಗಳ ಶಾಶ್ವತ ಚೆಕ್‌ಪೋಸ್ಟ್‌ಗಳು ನಿಗಾ ಇಡಲಿವೆ' ಎಂದು ಅವರು ಮಾಹಿತಿ ನೀಡಿದರು.

ಗುಜರಾತ್, ಹಿಮಾಚಲ ಪ್ರದೇಶ ಹಾಗೂ ಈಶಾನ್ಯ ರಾಜ್ಯಗಳ ವಿಧಾನಸಭಾ ಚುನಾವಣೆ ಮೇಲೆ ಹೆಚ್ಚಿನ ನಿಗಾ ವಹಿಸಿದ್ದರಿಂದ ₹1,028 ಕೋಟಿ ಮೊತ್ತದ ಹಣ ಹಾಗೂ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಯಿತು. ಇದು ಕಳೆದ ಚುನಾವಣೆಗೆ ಹೋಲಿಸಿದರೆ 23 ಪಟ್ಟು ಹೆಚ್ಚು ಎಂದು ಪ್ರತಿಪಾದಿಸಿದರು.

ರ್‍ಯಾಲಿಯಲ್ಲಿ ಹಣ ಎಸೆದ ಪ್ರಕರಣ–ಕ್ರಮದ ಭರವಸೆ: ಚುನಾವಣೆ ವೇಳೆ ಮತದಾರರ ಸೆಳೆಯಲು ಹಣ ಎಸೆಯುವಂತಹ ಘಟನೆಗಳು ಕಂಡು ಬಂದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯೋಗ ಎಚ್ಚರಿಸಿದೆ.

ಮಂಗಳವಾರ ನಡೆದ ರ್‍ಯಾಲಿಯೊಂದರಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮತದಾರರ ಮೇಲೆ ಹಣ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಈ ಪ್ರತಿಕ್ರಿಯೆ ನೀಡಿದರು.

ಅಭ್ಯರ್ಥಿಗಳು, ಮುಖಂಡರು, ಏಜೆಂಟರ ವಾಹನಗಳು ಅಥವಾ ಮನೆಗಳಲ್ಲಿ ನಗದು, ಉಚಿತ ಕೊಡುಗೆಗಳು ಕಂಡುಬಂದರೆ, ಆ ವ್ಯಕ್ತಿ ಯಾರೇ ಆಗಿದ್ದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಅಧಿಕಾರಿಗಳಿಂದ ಮತಗಟ್ಟೆ ನಿರ್ವಹಣೆ

- ಎಲ್ಲ ಮತಗಟ್ಟೆಗಳು ನೆಲಮಹಡಿಯಲ್ಲಿ ಇರಲಿವೆ. ಅಂಗವಿಕಲರ ಅನುಕೂಲಕ್ಕಾಗಿ ಗಾಲಿ ಕುರ್ಚಿಯೊಂದಿಗೆ ಗಟ್ಟಿಮುಟ್ಟಾದ ರ್‍ಯಾಂಪ್ ನಿರ್ಮಿಸಲಾಗುತ್ತದೆ. ಎಲ್ಲ ಮತಗಟ್ಟೆಗಳಲ್ಲಿ ಶೌಚಾಲಯ, ರ್‍ಯಾಂಪ್, ವಿದ್ಯುತ್, ಕುಡಿ ಯುವ ನೀರು ಸೇರಿದಂತೆ ಕನಿಷ್ಠ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ.
- ಮಹಿಳಾ ಅಧಿಕಾರಿಗಳು ಹಾಗೂ ಅಂಗವಿಕಲರು ಪ್ರತ್ಯೇಕ ಮತಗಟ್ಟೆಗಳ ನಿರ್ವಹಣೆ ಮಾಡಲಿದ್ದಾರೆ. ಮಹಿಳಾ ಮತಗಟ್ಟೆಯಲ್ಲಿ ಪೊಲೀಸ್, ಭದ್ರತಾ ಸಿಬ್ಬಂದಿ ಸೇರಿದಂತೆ ಎಲ್ಲ ಸಿಬ್ಬಂದಿ ಮಹಿಳೆಯರೇ ಇರಲಿದ್ದಾರೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ ಒಂದು ಮಾದರಿ ಮತಗಟ್ಟೆಯನ್ನು ಸ್ಥಳೀಯ ವಸ್ತುಗಳನ್ನು, ವಿವಿಧ ಕಲಾಪ್ರಕಾರಗಳನ್ನು ಬಳಸಿ ಅಲಂಕಾರ ಮಾಡಲಾಗುತ್ತದೆ.
- ಜಿಲ್ಲೆಗೆ ಒಂದು ಮತಗಟ್ಟೆಯನ್ನು ಲಭ್ಯವಿರುವ ಅತ್ಯಂತ ಕಿರಿಯ ಉದ್ಯೋಗಿಗಳ ತಂಡ ನಿರ್ವಹಿಸಲಿದೆ. ಇದು ಚುನಾವಣಾ ಆಯೋಗದ ಹೊಸ ಯೋಜನೆ.
- ಚುನಾವಣಾ ವೇಳಾಪಟ್ಟಿ ಘೋಷಣೆಯಾದ ದಿನದಿಂದ ಫಲಿತಾಂಶ ಘೋಷಣೆಯಾಗುವ ದಿನಾಂಕದ ವರೆಗೆ ರಾತ್ರಿ 10ರಿಂದ ಬೆಳಗ್ಗಿನ ಜಾವ 6ರ ವರೆಗೆ ಎಲ್ಲ ರೀತಿಯ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಲಾಗಿದೆ ಎಂದೂ ಅವರು ಹೇಳಿದರು.



80 ವರ್ಷ ದಾಟಿದವರಿಗೆ ಮನೆಯಿಂದಲೇ ಮತ

ಅಂಗವಿಕಲರು, 80 ವರ್ಷ ದಾಟಿದವರು, ಅಗತ್ಯ ಸೇವೆಯ ಉದ್ಯೋಗಸ್ಥರು ಹಾಗೂ ಕೋವಿಡ್ ಬಾಧಿತರು ಅಂಚೆ ಮತದಾನ (ಮನೆಯಿಂದಲೇ ಮತ ಚಲಾಯಿಸಲು ಅವಕಾಶ) ಮಾಡಬಹುದು. ಇದಕ್ಕಾಗಿ ಆಯೋಗದ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಲಾಗಿದೆ. ಇವರನ್ನು 'ಗೈರುಹಾಜರಿ ಮತದಾರರು' ಎಂದು ಗುರುತಿಸಲಾಗುತ್ತದೆ. ಈ ಮತದಾರರು ಅಂಚೆ ಮತ ಪತ್ರದ ಮೂಲಕ ಮತ ಚಲಾಯಿಸಲು ಅರ್ಹರು.

ಅಂಚೆ ಮತಪತ್ರದ ಮೂಲಕ ಹಕ್ಕು ಚಲಾಯಿಸಲು ಬಯಸುವವರು ನಮೂನೆ 12 ಡಿಯಲ್ಲಿ ಅಗತ್ಯವಿರುವ ಎಲ್ಲ ವಿವರಗಳನ್ನು ನೀಡಬೇಕು. ಮತದಾನದ ದಿನಾಂಕಕ್ಕಿಂತ 5 ದಿನಗಳ ಮೊದಲು ಚುನಾವಣಾ ಅಧಿಕಾರಿಗೆ ಅರ್ಜಿ ಸಲ್ಲಿಸಬೇಕು. ಅಂಗವಿಕಲರು ನಮೂನೆ 12 ಡಿ ಜತೆಗೆ ಅಸಾಮರ್ಥ್ಯದ ಪ್ರಮಾಣಪತ್ರ ಸಲ್ಲಿಸಬೇಕು.

ಒಂದು ಮತಗಟ್ಟೆ ತಂಡವು ಇಬ್ಬರು ಅಧಿಕಾರಿಗಳನ್ನು ಒಳಗೊಂಡಿದ್ದು, ವಿಡಿಯೊಗ್ರಾಫರ್ ಹಾಗೂ ಭದ್ರತಾ ಸಿಬ್ಬಂದಿಯ ಜತೆಗೆ ಮತದಾರನ ಮನೆಗೆ ತೆರಳಿ ಅಂಚೆ ಮತದಾನ ಮಾಡಲು ವ್ಯವಸ್ಥೆ ಕಲ್ಪಿಸುತ್ತದೆ.

ಕರ್ನಾಟಕದಲ್ಲಿ ಮೊದಲ ಬಾರಿಗೆ ಮನೆಯಿಂದಲೇ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದರು.

ಬಿಜೆಪಿ ಶಾಸಕರಿಗೆ ಡಿಕೆಶಿ ಕರೆ: ಸಿಎಂ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್‌ನ ಎರಡನೇ ಪಟ್ಟಿ ಸಿದ್ಧ ಮಾಡುವಾಗ ನಮ್ಮ ಶಾಸಕರಿಗೆ ಕರೆ ಮಾಡಿದ್ದಾರೆ. ನಮ್ಮ ಶಾಸಕರನ್ನು ಸಂಪರ್ಕಿಸಿರುವುದು ಅವರ ಪರಿಸ್ಥಿತಿ ತೋರಿಸುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಕಾಂಗ್ರೆಸ್ ತೊರೆದು ನಮ್ಮ ಪಕ್ಷಕ್ಕೆ ಬಂದವರಿಗೂ ಕರೆ ಮಾಡಿದ್ದಾರೆ. ನಮ್ಮ ಪಟ್ಟಿ ಇನ್ನೂ ಅಂತಿಮವಾಗಿಲ್ಲ. ನೀವು ಬಂದರೆ ನಿಮಗೇ ಟಿಕೆಟ್ ಕೊಡುವುದಾಗಿ ಹೇಳಿದ್ದಾರೆ. ನಮ್ಮ ಜತೆ ಇರುವವರು ಬರುವುದಿಲ್ಲ ಎಂದು ಸ್ಪಷ್ಟ ಪಡಿಸಿದ್ದಾರೆ.

'ಎರಡೂ ಪಕ್ಷಗಳ ವರಿಷ್ಠರು ನನ್ನನ್ನು ಸಂಪರ್ಕಿಸಿದ್ದಾರೆ' ಎಂಬ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಅವರಿಗೆ ಯಾರು ಯಾವಾಗ ಏನು ಕೊಡುಗೆ ನೀಡುತ್ತಾರೆ ಎಂದು ಅವರಿಗೇ ಗೊತ್ತು' ಎಂದರು.

'ಡಿ.ಕೆ.ಶಿವಕುಮಾರ್ ಅವರು ಹಲವು ನಾಯಕರನ್ನು ಭೇಟಿ ಮಾಡುತ್ತಿರುವುದು ನಿಜ' ಎಂದು ತೋಟಗಾರಿಕೆ ಸಚಿವ ಮುನಿರತ್ನ ತಿಳಿಸಿದರು.

ಅನುಮಾನಾಸ್ಪದವಾಗಿ ಆನ್‌ಲೈನ್ ವಹಿವಾಟು ನಡೆಸಿದರೆ ಕ್ರಮ

₹58 ಕೋಟಿ ಮೌಲ್ಯದ ವಸ್ತುಗಳ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರಿಗೆ ಆಮಿಷವೊಡ್ಡಲು ವಿವಿಧೆಡೆ ಸಂಗ್ರಹಿಸಿದ್ದ ನಗದು, ಮದ್ಯ, ಚಿನ್ನ, ಬೆಳ್ಳಿ, ಉಚಿತ ಕೊಡುಗೆಗಳು ಸೇರಿದಂತೆ ₹58 ಕೋಟಿ ಮೌಲ್ಯದ ವಿವಿಧ ವಸ್ತುಗಳನ್ನು ಇದುವರೆಗೆ ವಶಪಡಿಸಿಕೊಳ್ಳಲಾಗಿದೆ.

ರಾಜ್ಯದಲ್ಲಿನ ಚುನಾವಣಾ ಸಿದ್ಧತೆಗಳ ಕುರಿತು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಮೀನಾ, 'ಪೊಲೀಸ್ ಇಲಾಖೆಯೊಂದೇ ₹14 ಕೋಟಿ ನಗದು ಮತ್ತು 530 ಕೆ.ಜಿ. ಡ್ರಗ್ಸ್ ಸೇರಿದಂತೆ ₹34.36 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದೆ' ಎಂದು ತಿಳಿಸಿದರು.

'ಅಬಕಾರಿ ಇಲಾಖೆಯು ₹10 ಕೋಟಿ ಮೌಲ್ಯದ ಮದ್ಯ ಮತ್ತು ಡ್ರಗ್ಸ್, ಆದಾಯ ತೆರಿಗೆ ಇಲಾಖೆಯು ₹1.16 ಕೋಟಿ ಮೌಲ್ಯದ ನಗದು, ವಾಣಿಜ್ಯ ತೆರಿಗೆ ಇಲಾಖೆಯು ₹5 ಕೋಟಿ ಮೊತ್ತದ ವಿವಿಧ ವಸ್ತುಗಳನ್ನು ವಶಪಡಿಸಿಕೊಂಡಿದೆ. ಮಾರ್ಚ್ 9ರಿಂದ 27ರವರೆಗೆ ವಿವಿಧ ಕಾಯ್ದೆಗಳ ಅಡಿಯಲ್ಲಿ 1,985 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಅಬಕಾರಿ ಕಾಯ್ದೆ ಅಡಿಯಲ್ಲೇ 4,119 ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು ವಿವರಿಸಿದರು.

'ನಗರ ಪ್ರದೇಶದಲ್ಲಿ ಮತದಾನ ಹೆಚ್ಚಿಸುವುದು ಮತ್ತು ಹಣ ಬಲ ನಿಯಂತ್ರಿಸುವುದು ಆಯೋಗಕ್ಕೆ ಇರುವ ಪ್ರಮುಖ ಸವಾಲುಗಳು. ಬೆಂಗಳೂರಿನಲ್ಲೇ 2018ರಲ್ಲಿ 2013ಕ್ಕಿಂತಲೂ ಕಡಿಮೆ ಮತದಾನವಾಗಿತ್ತು. ಈ ಬಾರಿ ಮತದಾನ ಹೆಚ್ಚಿಸಲು ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅಭ್ಯರ್ಥಿಗಳು ಮತದಾರರಿಗೆ ಆಮಿಷವೊಡ್ಡಲು ಆನ್‌ಲೈನ್ ಮೂಲಕ ಹಣ ಪಾವತಿಸುವುದನ್ನು ತಡೆಯಲು ಕ್ರಮಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಎನ್‌ಪಿಸಿಐ ಜತೆ ಆಯೋಗವು ಸಂಪರ್ಕದಲ್ಲಿದೆ. ಅನುಮಾನಾಸ್ಪದ ವಹಿವಾಟುಗಳ ಬಗ್ಗೆ ಮಾಹಿತಿ ನೀಡುವಂತೆ ಕೋರಲಾಗಿದೆ' ಎಂದು ತಿಳಿಸಿದರು.

'ಹೈದರಾಬಾದ್‌ನ ಎಲೆಕ್ಟ್ರಾನಿಕ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಯು ಕರ್ನಾಟಕಕ್ಕೆ ಹೊಸ ವಿದ್ಯುನ್ಮಾನ ಯಂತ್ರಗಳನ್ನು ಪೂರೈಸಿದೆ. ಈ ಹೊಸ ಯಂತ್ರಗಳನ್ನು ಮೊದಲ ಬಾರಿ ಬಳಸಲಾಗುತ್ತಿದೆ. ಬೇರೆ ಯಾವುದೇ ರಾಜ್ಯದಲ್ಲಿ ಈ ಯಂತ್ರಗಳನ್ನು ಬಳಸಿಲ್ಲ' ಎಂದು ಮಾಹಿತಿ ನೀಡಿದರು.

'ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಹೊಸ ಮತದಾರರು ಅರ್ಜಿ ನಮೂನೆ–6 ಅನ್ನು ಭರ್ತಿ ಮಾಡಿ ಏಪ್ರಿಲ್ 11ರ ಒಳಗೆ ಸಲ್ಲಿಸಬೇಕು. ವಲಸೆಗಾರರು ಮತದಾನದಿಂದ ತಪ್ಪಿಸಿಕೊಳ್ಳದಂತೆ ಅರಿವು ಮೂಡಿಸುವ ಕ್ರಮಗಳನ್ನು ಸಹ ಕೈಗೊಳ್ಳಲಾಗುತ್ತಿದೆ. ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಿಂದ ಹೆಚ್ಚು ಜನ ಬೇರೆ, ಬೇರೆ ಸ್ಥಳಗಳಿಗೆ ತೆರಳುತ್ತಾರೆ. ಹೀಗಾಗಿ, ಈಗಾಗಲೇ ಯಾದಗಿರಿ ಜಿಲ್ಲೆಯಿಂದ ತೆರಳುತ್ತಿರುವವರಿಗೆ ಚುನಾವಣಾ ದಿನ ಬರುವಂಗತೆ ಮನವರಿಕೆ ಮಾಡಲು ರೈಲ್ವೆ ನಿಲ್ದಾಣದಲ್ಲಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ' ಎಂದು ವಿವರಿಸಿದರು.

'ಮತದಾನದ ದಿನದಂದು ಕರ್ತವ್ಯಕ್ಕೆ ನಿಯೋಜಿಸಲಾಗುವ ಪತ್ರಕರ್ತರಿಗೆ ಇದೇ ಮೊದಲ ಬಾರಿ ಅಂಚೆ ಮೂಲಕ ಮತದಾನ ಮಾಡುವ ಅವಕಾಶ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ಸಿಎಪಿಎಫ್ 645 ಕಂಪನಿಗಳು

'ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ (ಸಿಎಪಿಎಫ್) 645 ಕಂಪನಿಗಳನ್ನು ರಾಜ್ಯಕ್ಕೆ ನಿಯೋಜಿಸಲಾಗಿದೆ. ಇದರಲ್ಲಿ ಏಪ್ರಿಲ್ 1ಕ್ಕೆ 166 ಕಂಪನಿಗಳು ಆಗಮಿಸಲಿವೆ. ಜತೆಗೆ, ಕರ್ನಾಟಕ ಮೀಸಲು ಪೊಲೀಸ್ ಪಡೆಯ 74,567 ಸಿಬ್ಬಂದಿಯನ್ನು ಸಹ ನಿಯೋಜಿಸಲಾಗುತ್ತಿದೆ' ಎಂದು ಮನೋಜ್ ಕುಮಾರ್ ಮೀನಾ ತಿಳಿಸಿದರು.

ಅತಿ ದೊಡ್ಡ ವಿಧಾನಸಭಾ ಕ್ಷೇತ್ರ	ಬೆಂಗಳೂರು ದಕ್ಷಿಣ(6.27 ಲಕ್ಷ ಮತದಾರರು)
ಅತಿ ಸಣ್ಣ ಕ್ಷೇತ್ರ	ಶೃಂಗೇರಿ(1.68 ಲಕ್ಷ ಮತದಾರರು)
ಅತಿ ಹೆಚ್ಚು ಮತಗಟ್ಟೆಗಳು	ಬೆಳಗಾವಿ(4434)
ಅತಿ ಕಡಿಮೆ ಮತಗಟ್ಟೆಗಳು	ಕೊಡಗು (542)

ಮೈಸೂರಿನ ಸೀತಾವಿಲಾಸ ರಸ್ತೆಯಲ್ಲಿ ಬುಧವಾರ ಸಂಜೆ ಸುರಿದ ಗಾಳಿ ಮಳೆಗೆ ಮರವೊಂದು ಕಾರುಗಳ ಮೇಲೆ ಉರುಳಿದೆ

ಮೈಸೂರು, ಚಾ.ನಗರದಲ್ಲಿ ಮಳೆ

ಮೈಸೂರು: ಮೈಸೂರು, ಮಂಡ್ಯ ಚಾಮರಾಜನಗರದ ವಿವಿಧೆಡೆ ಬುಧವಾರ ಬಿರುಸಿನ ಮಳೆಯಾಗಿದೆ. ಮಂಡ್ಯದಲ್ಲಿ ತುಂತುರು ಮಳೆ ಸುರಿದಿದೆ.

ಮೈಸೂರಿನಲ್ಲಿ ಮರ ಬಿದ್ದು, 2 ಕಾರು ಜಖಂಗೊಂಡಿವೆ. ಒಬ್ಬರು ಗಾಯಗೊಂಡರು. ಯಡಹಳ್ಳಿಯಲ್ಲಿ ಎರಡು ಎಕರೆಯಲ್ಲಿ ಬೆಳೆದಿದ್ದ ಕಬ್ಬು ಬಿರುಗಾಳಿಗೆ ನೆಲಕಚ್ಚಿದೆ. ಹುಣಸೂರು, ನಂಜನಗೂಡು, ತಿ.ನರಸೀಪುರ ತಾಲ್ಲೂಕಿನ ಅಲ್ಲಲ್ಲಿ ಮಳೆಯಾಗಿದೆ.

ಚಾಮರಾಜನಗರ ಜಿಲ್ಲೆಯ ವಿವಿಧ ಕಡೆಗಳಲ್ಲಿ ಗುಡುಗು– ಸಿಡಿಲಿನ ಮಳೆಯಾಗಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮರಡಿಪುರ ಸೇರಿ ವಿವಿಧೆಡೆ ಧಾರಾಕಾರ ಮಳೆ ಸುರಿಯಿತು. ಮಂಡ್ಯ ನಗರ, ಶ್ರೀರಂಗಪಟ್ಟಣ ಹಾಗೂ ಹಲಗೂರು ಭಾಗದಲ್ಲಿ ತುಂತುರು ಮಳೆ ಆಗಿದೆ.

2 ದಿನ ಮಳೆ ಸಾಧ್ಯತೆ

ಬೆಂಗಳೂರು: ಕೆಲವೆಡೆ ಮುಂದಿನ 48 ಗಂಟೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ, ಮೈಸೂರು, ಮಂಡ್ಯ, ಚಿಕ್ಕಬಳ್ಳಾಪುರ, ಚಾಮರಾಜನಗರ, ರಾಮನಗರ, ಕೋಲಾರ ಜಿಲ್ಲೆಯ ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿ, ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನಲ್ಲಿ ಒಣಹವೆ ಮುಂದುವರಿಯಲಿದೆ.

23 ವರ್ಷದ ತ್ರಿವೇಣಿ ಬಳ್ಳಾರಿ ಮೇಯರ್

ಬಳ್ಳಾರಿ: ನಗರದ 21ನೇ ಮೇಯರ್ ಆಗಿ ಕಾಂಗ್ರೆಸ್ ಪಕ್ಷದ 23 ವರ್ಷದ ತ್ರಿವೇಣಿ ಬುಧವಾರ ಆಯ್ಕೆಯಾದರು. ಉಪ ಮೇಯರ್ ಆಗಿ ಜಾನಕಮ್ಮ ಅವಿರೋಧವಾಗಿ ಚುನಾಯಿತರಾದರು.

ಅರೆ ವೈದ್ಯಕೀಯ ಕೋರ್ಸ್ ಪೂರೈಸಿರುವ ತ್ರಿವೇಣಿ ಅತ್ಯಂತ ಕಿರಿಯ ವಯಸ್ಸಿನ ಮೇಯರ್ ಆಗಿದ್ದಾರೆ. ಅಷ್ಟೇ ಅಲ್ಲ, ಇವರ ತಾಯಿ ಸುಶೀಲಾ ಬಾಯಿ ಬಳ್ಳಾರಿ. ಮೇಯರ್ ಆಗಿದ್ದರು.

ತ್ರಿವೇಣಿ ತಮ್ಮ ಎದುರಾಳಿ ಬಿಜೆಪಿಯ ನಾಗರತ್ನಮ್ಮ ಅವರನ್ನು 12 ಮತಗಳ ಅಂತರದಿಂದ ಸೋಲಿಸಿದರು. ತ್ರಿವೇಣಿ ಅವರಿಗೆ 28 ಮತಗಳು ಹಾಗೂ ನಾಗರತ್ನಮ್ಮ ಅವರಿಗೆ 16 ಮತಗಳು ಬಿದ್ದವು. ಮೇಯರ್ ಸ್ಥಾನ ಪರಿಶಿಷ್ಟ ಜಾತಿ ಹಾಗೂ ಉಪ ಮೇಯರ್ ಸ್ಥಾನ ಪರಿಶಿಷ್ಟ ಪಂಗಡದ ಮಹಿಳೆಗೆ ಮೀಸಲಾಗಿತ್ತು. ಪಾಲಿಕೆಯಲ್ಲಿ 39 ಸದಸ್ಯರಿದ್ದು ಕಾಂಗ್ರೆಸ್‌ನ 21, ಬಿಜೆಪಿಯ 13, ಕಾಂಗ್ರೆಸ್ ಬೆಂಬಲಿತ 5 ಪಕ್ಷೇತರ ಸದಸ್ಯರಿದ್ದಾರೆ.

ಉಭಯ ಸದನಗಳಲ್ಲಿ ಪ್ರತಿಭಟನೆ; ಅದಾನಿ ಸಮೂಹದ ವಿರುದ್ಧ ಜೆಪಿಸಿ ತನಿಖೆಗೆ ವಿರೋಧ ಪಕ್ಷಗಳ ಆಗ್ರಹ

ಗದ್ದಲ: ಸಂಸತ್ತಿನಲ್ಲಿ ನಡೆಯದ ಕಲಾಪ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಅನರ್ಹತೆ ಖಂಡಿಸಿ ಪ್ರತಿಪಕ್ಷಗಳು ಪ್ರತಿಭಟನೆ ನಡೆಸಿದ್ದರಿಂದ ಲೋಕಸಭೆ ಹಾಗೂ ರಾಜ್ಯಸಭೆಯ ಕಲಾಪಗಳು ಬುಧವಾರವೂ ಸುಗಮವಾಗಿ ನಡೆಯಲಿಲ್ಲ. ಗದ್ದಲದ ನಡುವೆಯೇ ಸ್ಪರ್ಧಾ (ತಿದ್ದುಪಡಿ) ಮಸೂದೆಗೆ ಲೋಕಸಭೆಯಲ್ಲಿ ಯಾವುದೇ ಚರ್ಚೆ ಇಲ್ಲದೆ ಅಂಗೀಕಾರ ಸಿಕ್ಕಿತು.

ಲೋಕಸಭೆಯಲ್ಲಿ, ಕಪ್ಪು ದಿರಿಸಿನಲ್ಲಿ ಪ್ರತಿಪಕ್ಷಗಳ ಸದಸ್ಯರು ಸ್ಪೀಕರ್ ಪೀಠದ ಎದುರು ಘೋಷಣೆಗಳನ್ನು ಕೂಗಿದರು. ಅದಾನಿ ಸಮೂಹದ ಷೇರುಗಳ ಮೌಲ್ಯ ಕುಸಿತದ ಆರೋಪವನ್ನು ಜಂಟಿ ಸಂಸದೀಯ ಸಮಿತಿ ತನಿಖೆಗೆ ಒಳಪಡಿಸಬೇಕು ಎಂದು ವಿರೋಧ ಪಕ್ಷಗಳ ಸಂಸದರು ಒತ್ತಾಯಿಸಿದರು. ಸದನವನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು. ಮಧ್ಯಾಹ್ನವೂ ಗದ್ದಲ ಮುಂದುವರಿದ ಕಾರಣ ಕಲಾಪವನ್ನು ದಿನದಮಟ್ಟಿಗೆ ಮುಂದೂಡಲಾಯಿತು.

ರಾಜ್ಯಸಭೆಯಲ್ಲೂ ಇದೇ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳ ಸದಸ್ಯರು ಘೋಷಣೆ ಕೂಗಿದರು. ಗದ್ದಲದ ನಡುವೆಯೇ ಅರಣ್ಯ ಸಂರಕ್ಷಣೆ (ತಿದ್ದುಪಡಿ) ಮಸೂದೆಯ ಜಂಟಿ ಸಂಸದೀಯ ಸಮಿತಿಗೆ ಸದಸ್ಯರನ್ನು ನೇಮಿಸಲು ಗೊತ್ತುವಳಿಯನ್ನು ಮಂಡಿಸಲು ಸಚಿವ ಭೂಪೇಂದ್ರ ಯಾದವ್ ಅವರಿಗೆ ಸಭಾಪತಿ ಜಗದೀಪ್ ಸೂಚಿಸಿದರು. ಯಾದವ್ ಅವರು ಸದಸ್ಯರ ಹೆಸರನ್ನು ಪ್ರಕಟಿಸಿದರು. ಈಬಳಿಕ ಸದನವನ್ನು ಮುಂದೂಡಲಾಯಿತು. ಗುರುವಾರ, ಶುಕ್ರವಾರ ರಜೆ ಇರುವ ಕಾರಣ, ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು.

ಮುಖ್ಯಾಂಶಗಳು
- ಎರಡನೇ ಹಂತದ ಬಜೆಟ್ ಅಧಿವೇಶನದಲ್ಲಿ ಕೋಲಾಹಲ
- ಮಾರ್ಚ್ 13ರಿಂದಲೂ ನಡೆಯದ ಪ್ರಶ್ನೋತ್ತರ ಕಲಾಪ

ರಾಜಕೀಯ ಕಾರ್ಯತಂತ್ರದ ಭಾಗ ಎಂಬುದಾಗಿ ದೀರ್ಘಕಾಲದವರೆಗೆ ಸದನದಲ್ಲಿ ಗದ್ದಲ ಸೃಷ್ಟಿಸುವುದು ಸಮರ್ಥನೀಯವಲ್ಲ. ಸಾರ್ವಜನಿಕ ಹಿತದಲ್ಲಿ ನಡೆಯುವ ಕಲಾಪ ವ್ಯರ್ಥವಾಗಬಾರದು
ಜಗದೀಪ್ ಧನಕರ್,
ರಾಜ್ಯಸಭಾ ಸಭಾಪತಿ

'ಸ್ಥಾಯಿ ಸಮಿತಿಯನ್ನು ಅಪಮೌಲ್ಯ ಮಾಡಿದ ಕೇಂದ್ರ'

'ಕೇಂದ್ರ ಸರ್ಕಾರವು 'ಅರಣ್ಯ (ಸಂರಕ್ಷಣಾ) ತಿದ್ದುಪಡಿ ಮಸೂದೆ'ಯನ್ನು ಸಂಸದೀಯ ಸ್ಥಾಯಿ ಸಮಿತಿಗೆ ನೀಡುವ ಬದಲಿಗೆ, ಜಂಟಿ ಸಮಿತಿಗೆ ನೀಡಿದೆ. ಈ ಮೂಲಕ ಸ್ಥಾಯಿ ಸಮಿತಿಯನ್ನು ಅಪಮೌಲ್ಯ ಮತ್ತು ಅವಹೇಳನ ಮಾಡಿದೆ' ಎಂದು ಕಾಂಗ್ರೆಸ್ ಸಂಸದ ಜೈರಾಮ್ ರಮೇಶ್ ಆರೋಪಿಸಿದ್ದಾರೆ. ಈ ಸಂಬಂಧ ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರಿಗೆ ಪತ್ರ ಬರೆದಿರುವ ಅವರು, ಈ ವಿಚಾರದಲ್ಲಿ ತಕ್ಷಣವೇ ಮಧ್ಯಪ್ರವೇಶಿಸಿ ಎಂದು ಆಗ್ರಹಿಸಿದ್ದಾರೆ.

'ಸದನಗಳಲ್ಲಿ ಮಂಡನೆಯಾಗುವ ಮಸೂದೆಗಳ ಪರಿಶೀಲನೆ ಅಗತ್ಯವಿದ್ದರೆ, ಅದನ್ನು ಸಂಬಂಧಿತ ಸಂಸದೀಯ ಸ್ಥಾಯಿ ಸಮಿತಿಗೆ ನೀಡಲಾಗುತ್ತದೆ. ಆದರೆ, ಸರ್ಕಾರವು ಈ ಮಸೂದೆಯನ್ನು ಜಂಟಿ ಸಮಿತಿಗೆ ನೀಡಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಂಸತ್ತಿನ ಉಭಯ ಸದನಗಳ ಸದಸ್ಯರನ್ನು ಒಳಗೊಂಡ ಎಂಟು ಸ್ಥಾಯಿ ಸಮಿತಿಗಳಿವೆ. 'ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸ್ಥಾಯಿ ಸಮಿತಿ'ಗೆ ಜೈರಾಮ್ ರಮೇಶ್ ಅಧ್ಯಕ್ಷರಾಗಿದ್ದಾರೆ.

'ನಾನು ಕಾಂಗ್ರೆಸ್ ಹಾಗೂ ಎಲ್ಲಾ ವಿರೋಧ ಪಕ್ಷಗಳ ಪರವಾಗಿ ಈ ಪತ್ರ ಬರೆಯುತ್ತಿದ್ದೇನೆ. ಸಂಸದೀಯ ಸ್ಥಾಯಿ ಸಮಿತಿಯ ಶಕ್ತಿಯನ್ನು ಸಂಪೂರ್ಣವಾಗಿ ಕುಂದಿಸುವ ಪ್ರಯತ್ನ ನಡೆಯುತ್ತಿದೆ. ಮಸೂದೆಯ ಪರಿಶೀಲನೆಗಾಗಿ ಲೋಕಸಭೆಯಲ್ಲಿ ಮೊದಲು ಜಂಟಿ ಸಂಸದೀಯ ಸಮಿತಿಗೆ ನೀಡಲಾಯಿತು. ನಂತರ ರಾಜ್ಯಸಭೆಯಲ್ಲಿ ನೀಡಲಾಯಿತು. ಈ ಮಸೂದೆಯು ನಮ್ಮ ಸ್ಥಾಯಿ ಸಮಿತಿಯ ಕಾರ್ಯವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರವು ಉದ್ದೇಶಪೂರ್ವಕವಾಗಿ ಈ ಮಸೂದೆಯ ಪರಿಶೀಲನೆ ನಡೆಸಲು ಸಂಸದೀಯ ಸ್ಥಾಯಿ ಸಮಿತಿಗೆ ನೀಡಿಲ್ಲ' ಎಂದು ರಮೇಶ್ ಅವರು ಪತ್ರದಲ್ಲಿ ಹೇಳಿದ್ದಾರೆ.

ಮೇ 10ರಂದು ಉಪಚುನಾವಣೆ

ನವದೆಹಲಿ (ಪಿಟಿಐ): 'ಮೇ 10ರಂದು ಒಂದು ಲೋಕಸಭಾ ಕ್ಷೇತ್ರ ಹಾಗೂ ನಾಲ್ಕು ರಾಜ್ಯಗಳ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆಯಲಿದೆ' ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಬುಧವಾರ ತಿಳಿಸಿದ್ದಾರೆ.

ಈ ಉಪಚುನಾವಣೆಗಳ ಮತ ಎಣಿಕೆ ಮೇ 13ರಂದು ನಡೆಯಲಿದೆ.

ಎಲ್ಲೆಲ್ಲಿ ಚುನಾವಣೆ: ಸಂಸದ ಸಂತೋಖ್ ಸಿಂಗ್ ಚೌಧರಿ ಅವರು ಕಳೆದ ಜನವರಿಯಲ್ಲಿ ಭಾರತ್ ಜೋಡೊ ಯಾತ್ರೆ ವೇಳೆ ಹೃದಯಾಘಾತದಿಂದ ನಿಧನರಾದ ಕಾರಣ ಪಂಜಾಬ್‌ನ ಜಲಂಧರ್ ಲೋಕಸಭಾ ಕ್ಷೇತ್ರ ತೆರವಾಗಿತ್ತು. ಈ ಕ್ಷೇತ್ರದಲ್ಲಿ ಈಗ ಉಪಚುನಾವಣೆ ನಡೆಯಲಿದೆ.

ಒಡಿಶಾದ ಝಾರ್ಸುಗುಡ ವಿಧಾನಸಭಾ ಕ್ಷೇತ್ರ, ಉತ್ತರ ಪ್ರದೇಶದ ಸುವಾರ್, ಛಾನ್ಬೆ ವಿಧಾನಸಭಾ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲಿದೆ.

ಮೇಘಾಲಯದಲ್ಲಿ ವಿಧಾನಸಭೆ ಚುನಾವಣೆ ಘೋಷಣೆಯಾದ ಬಳಿಕ, ಯುನೈಟೆಡ್ ಡೆಮಾಕ್ರಟಿಕ್ ಪಕ್ಷದ (ಯುಡಿಪಿ) ಅಭ್ಯರ್ಥಿಯೊಬ್ಬರು ಮೃತಪಟ್ಟ ಹಿನ್ನೆಲೆಯಲ್ಲಿ ಸೋಹಿಯಾಂಗ್ ಕ್ಷೇತ್ರದ ಚುನಾವಣೆಯನ್ನು ಮುಂದೂಡಲಾಗಿತ್ತು. ಮೇ 10ರಂದು ಈ ಕ್ಷೇತ್ರದಲ್ಲಿ ಚುನಾವಣೆ ನಡೆಯಲಿದೆ.

ವಯನಾಡ್ ಕ್ಷೇತ್ರ ಉಪಚುನಾವಣೆಗೆ ಆತುರವಿಲ್ಲ: ಆಯೋಗ

ನವದೆಹಲಿ: ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಂಡಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ಮಾನನಷ್ಟ ಮೊಕದ್ದಮೆಯಲ್ಲಿ ಮೇಲ್ಮನವಿ ಸಲ್ಲಿಸಲು ನ್ಯಾಯಾಲಯವು ಒಂದು ತಿಂಗಳ ಕಾಲಾವಕಾಶ ನೀಡಿದೆ. ಹೀಗಾಗಿ, ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆ ಘೋಷಿಸಲು ಯಾವುದೇ ಆತುರವಿಲ್ಲ ಎಂದು ಭಾರತೀಯ ಚುನಾವಣಾ ಆಯೋಗ ಬುಧವಾರ ಹೇಳಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, 'ವಿಚಾರಣಾ ನ್ಯಾಯಾಲಯವು ಮುಂದಿನ ಆದೇಶದವರೆಗೆ ನಾವು ಕಾಯುತ್ತೇವೆ. ಫೆಬ್ರುವರಿವರೆಗೆ ತೆರವಾಗಿರುವ ಸ್ಥಾನಗಳ ಆಧಾರದಲ್ಲಿ ಲೋಕಸಭೆ ಹಾಗೂ ವಿಧಾನಸಭೆಗಳ ಉಪಚುನಾವಣೆ ಘೋಷಣೆಗೆ ಆಯೋಗ ನಿರ್ಧಾರ ಕೈಗೊಂಡಿದೆ' ಎಂದು ಹೇಳಿದರು.

'ನನ್ನ ಮನೆ, ನಿಮ್ಮದೇ ಮನೆ: ರಾಹುಲ್‌ಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿಮ್ಮ ಸೂಚನೆಯಂತೆ ಸರ್ಕಾರಿ ಬಂಗಲೆ ತೆರವು ಮಾಡುತ್ತೇನೆ ಎಂದು ಲೋಕಸಭಾ ಕಾರ್ಯಾಲಯಕ್ಕೆ ಪತ್ರ ಬರೆದ ರಾಹುಲ್ ಗಾಂಧಿ ಅವರು ನಮ್ಮ ಮನೆಗೆ ಬರಲಿ ಎಂದು ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಆಹ್ವಾನ ನೀಡಿದ್ದಾರೆ. 'ನಮ್ಮ ಮನೆಗೆ ಬನ್ನಿ' ಎಂದು ಪಕ್ಷದ ಹಿರಿಯ ನಾಯಕ ದಿಗ್ವಿಜಯ ಸಿಂಗ್ ಅವರು ರಾಹುಲ್‌ಗೆ ಬುಧವಾರ ಆಹ್ವಾನ ನೀಡಿದ್ದಾರೆ. ಆದರೆ ಮಂಗಳವಾರ ಸಂಜೆಯಿಂದಲೇ ಕಾರ್ಯಕರ್ತರು ಮತ್ತು ಸಾರ್ವಜನಿಕರು ಸಾಮಾಜಿಕ ಜಾಲತಾಣಗಳಲ್ಲಿ, 'ನನ್ನ ಮನೆ, ನಿಮ್ಮದೇ ಮನೆ' ಎಂಬ ಅಭಿಯಾನ ಆರಂಭಿಸಿದ್ದಾರೆ.

ರಾಹುಲ್ ಗಾಂಧಿ ಸದಸ್ಯತ್ವ ಅನರ್ಹಗೊಳಿಸಿರುವುದನ್ನು ಖಂಡಿಸಿ ತಿರುವನಂತಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟಿಸಿದರು

ಲೋಕಸಭೆ ಕಾರ್ಯಾಲಯಕ್ಕೆ ರಾಹುಲ್ ಅವರು ಬರೆದ ಪತ್ರದ ಪ್ರತಿ ಟ್ವಿಟರ್‌ನಲ್ಲಿ ಮಂಗಳವಾರ ಲಭ್ಯವಾದ ಬೆನ್ನಲ್ಲೇ ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ಅವರು, 'ನನ್ನ ಮನೆ, ನಿಮ್ಮದೇ ಮನೆ (ಮೇರಾ ಘರ್, ಆಪ್‌ಕಾ ಘರ್)' ಎಂದು ಟ್ವೀಟ್ ಮಾಡಿದ್ದರು. ಕೆಲವೇ ಗಂಟೆಗಳಲ್ಲಿ ಈ ಟ್ವೀಟ್, '#MeraGharAapkaGhar' ಹ್ಯಾಷ್‌ಟ್ಯಾಗ್‌ನ ರೂಪ ಪಡೆಯಿತು. ಮಂಗಳವಾರ ರಾತ್ರಿ ಒಂಬತ್ತರಿಂದ ನಸುಕಿನವರೆಗೂ ಈ ಹ್ಯಾಷ್‌ಟ್ಯಾಗ್ ಟ್ವಿಟರ್‌ನಲ್ಲಿ ಮೊದಲ ಟ್ರೆಂಡ್ ಆಗಿತ್ತು. ಈ ಹ್ಯಾಷ್‌ಟ್ಯಾಗ್‌ನಲ್ಲಿ ಈವರೆಗೆ 48 ಸಾವಿರಕ್ಕೂ ಹೆಚ್ಚು ಟ್ವೀಟ್ ಮಾಡಲಾಗಿದೆ.

ವಾರಾಣಸಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಮನೆಯ ಗೋಡೆಯ ಮೇಲೆ, 'ನನ್ನ ಮನೆ, ರಾಹುಲ್ ಮನೆ' ಎಂದು ಪೋಸ್ಟರ್ ಅಂಟಿಸುವ ಅಭಿಯಾನಕ್ಕೆ ಮಂಗಳವಾರ ರಾತ್ರಿ ಚಾಲನೆ ನೀಡಿದ್ದರು. ಆ ಅಭಿಯಾನವು ಬುಧವಾರವೂ ಮುಂದುವರಿದಿತ್ತು. ಕಾಂಗ್ರೆಸ್ ಕಾರ್ಯಕರ್ತರು ಪೋಸ್ಟರ್ ಅಂಟಿಸಿ, ಚಿತ್ರ ತೆಗೆದು ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. 'ಸರ್ಕಾರಿ ಬಂಗಲೆಯನ್ನು ತೊರೆಯಲು ರಾಹುಲ್ ಅವರು ಒಪ್ಪಿಕೊಳ್ಳಬಾರದಾಗಿತ್ತು. ಆದರೆ ಅವರು ಬಂಗಲೆ ತೊರೆಯುತ್ತೇನೆ ಎಂದು ಹೇಳಿದ್ದಾರೆ. ಬಿಜೆಪಿ ಸರ್ಕಾರವು, ಅವಧಿ ಮುಗಿದಿದ್ದರೂ ತನ್ನದೇ ನಾಯಕರು ಸರ್ಕಾರಿ ಬಂಗಲೆ ತೊರೆಯದಂತೆ ನೋಡಿಕೊಂಡಿದೆ. ವಿರೋಧ ಪಕ್ಷಗಳ ನಾಯಕರನ್ನು ಮಾತ್ರ ಹೊರಗಟ್ಟುತ್ತಿದೆ' ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ವಿಪ್ ಮಾಣಿಕ್ಕಮ್ ಟ್ಯಾಗೋರ್ ಅವರು ಹೇಳಿದ್ದಾರೆ.

ಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವುದು ಎಲ್ಲರ ಹಕ್ಕು. ರಾಹುಲ್ ವಿಚಾರ ಕೋರ್ಟ್‌ಗೆ ಸಂಬಂಧಿಸಿರುವುದರಿಂದ ಪ್ರತಿಕ್ರಿಯಿಸುವುದಿಲ್ಲ
ನಿತೀಶ್ ಕುಮಾರ್,
ಬಿಹಾರ ಮುಖ್ಯಮಂತ್ರಿ

ರಾಹುಲ್ ಗಾಂಧಿ ಅವರ ಸದಸ್ಯತ್ವ ಅನರ್ಹತೆ ಪ್ರಶ್ನಿಸಿ ಸದ್ಯದಲ್ಲೇ ಮೇಲ್ಮನವಿ ಸಲ್ಲಿಸಲಾಗುವುದು. ಪಕ್ಷದ ಕಾನೂನು ಸಲಹೆಗಾರರು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ
ಮಾಣಿಕಂ ಟಾಗೋರ್,
ಲೋಕಸಭೆಯಲ್ಲಿ ಕಾಂಗ್ರೆಸ್ ಸಚೇತಕ

ರ‍್ಯಾಲಿ ಮುನ್ನಡೆಸಿದ್ದ ಪ್ರಕರಣ: ಜಿಗ್ನೇಶ್ ಮೇವಾನಿ ಖುಲಾಸೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಪೊಲೀಸರ ಅನುಮತಿ ಪಡೆಯದೇ ಸಾರ್ವಜನಿಕ ರ‍್ಯಾಲಿಯೊಂದನ್ನು ಮುನ್ನಡೆಸಿದ ಪ್ರಕರಣದಲ್ಲಿ ಗುಜರಾತ್‌ನ ಕಾಂಗ್ರೆಸ್ ಶಾಸಕ, ದಲಿತ ನಾಯಕ ಜಿಗ್ನೇಶ್ ಮೇವಾನಿ ಮತ್ತು ಇತರ ಒಂಬತ್ತು ಜನರನ್ನು ಮೆಹ್ಸಾನಾ ಸೆಷನ್ಸ್ ನ್ಯಾಯಾಲಯವು ಬುಧವಾರ ಖುಲಾಸೆಗೊಳಿಸಿತು.

ಇದಕ್ಕೂ ಮೊದಲು ಈ ಪ್ರಕರಣದ ವಿಚಾರಣೆ ನಡೆಸಿ ಆದೇಶ ನೀಡಿದ್ದ ಸ್ಥಳೀಯ ನ್ಯಾಯಾಲಯವು ಮೇವಾನಿ ಮತ್ತು ಇತರರು ದೋಷಿ ಘೋಷಿಸಿ, ಮೂರು ವರ್ಷಗಳ ಸಜೆ ವಿಧಿಸಿತ್ತು. ಈ ಆದೇಶವನ್ನು ರದ್ದುಗೊಳಿಸಿದ ಸೆಷನ್ಸ್ ನ್ಯಾಯಾಲಯವು ಈ ಪ್ರಕರಣವು ಆಧಾರರಹಿತವಾಗಿದೆ ಎಂದು ಹೇಳಿದೆ.

ಸೆಷನ್ಸ್ ನ್ಯಾಯಾಲಯದ ಆದೇಶ ಹೊರಬೀಳುತ್ತಿದ್ದಂತೆ ಟ್ವೀಟ್ ಮಾಡಿರುವ ಮೇವಾನಿ, 'ಪ್ರಜಾಪ್ರಭುತ್ವ ವ್ಯವಸ್ಥೆಯಡಿ ವಿಮರ್ಶೆ, ಚರ್ಚೆ ಮತ್ತು ವಾದಮಂಡನೆಗೆ ಇರುವ ಅವಕಾಶವನ್ನು ನ್ಯಾಯಾಲಯ ಎತ್ತಿಹಿಡಿದಿದೆ ಮತ್ತು ನಮ್ಮ ಮೇಲೆ ದಾಖಲಿಸಲಾಗಿದ್ದ ಪ್ರಕರಣವನ್ನು ಆಧಾರರಹಿತ ಎಂದು ಹೇಳಿದೆ' ಎಂದಿದ್ದಾರೆ.

2017ರ ಜುಲೈ 12ರಂದು 'ಆಜದಿ ಕೂಚ್' ಎಂಬ ರ‍್ಯಾಲಿಯನ್ನು ಮೇವಾನಿ ಮುನ್ನಡೆಸಿದ್ದರು.

ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಚೀತಾ ಮರಿಗಳು–ಟ್ವಿಟರ್ ಚಿತ್ರ

4 ಮರಿಗಳಿಗೆ ಜನ್ಮ ನೀಡಿದ ಚೀತಾ

ನವದೆಹಲಿ (ಪಿಟಿಐ): 'ಪ್ರಾಜೆಕ್ಟ್ ಚೀತಾ' ಯೋಜನೆಯಡಿ ನಮೀಬಿಯಾದಿಂದ ಭಾರತಕ್ಕೆ ತರಲಾಗಿದ್ದ ಚೀತಾಗಳಲ್ಲಿ ಒಂದು ಚೀತಾ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ನಾಲ್ಕು ಮರಿಗಳಿಗೆ ಜನ್ಮ ನೀಡಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಬುಧವಾರ ತಿಳಿಸಿದ್ದಾರೆ.

'ಅಮೃತ ಕಾಲ'ದಲ್ಲಿ ಭಾರತದ ವನ್ಯಜೀವಿ ಸಂರಕ್ಷಣಾ ಇತಿಹಾಸದಲ್ಲೇ ಇದೊಂದು ಮಹತ್ವದ ಘಟನೆ ಎಂದು ಯಾದವ್ ಬಣ್ಣಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ 2022ರ ಸೆಪ್ಟೆಂಬರ್ 17ರಂದು ಭಾರತಕ್ಕೆ ಸ್ಥಳಾಂತರಗೊಂಡ ಆಫ್ರಿಕಾ ಚಿರತೆಗಳಲ್ಲಿ ಒಂದು ಚಿರತೆಗೆ ನಾಲ್ಕು ಮರಿಗಳು ಜನಿಸಿರುವ ಮಾಹಿತಿ ಹಂಚಿಕೊಳ್ಳಲು ಸಂತೋಷವಾಗಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಮರಿಗಳ ವಿಡಿಯೊ,ಚಿತ್ರಗಳನ್ನು ಇವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ಅಮೃತ್‌ಪಾಲ್ ಸಿಂಗ್ ಪತ್ತೆಗೆ ಮುಂದುವರಿದ ತೀವ್ರ ಶೋಧ

ಹೊಶಿಯಾರ್ ಪುರ, ಪಂಜಾಬ್ (ಪಿಟಿಐ): ಸಿಖ್ ಮೂಲಭೂತವಾದಿ ಪ್ರಚಾರಕ ಅಮೃತಪಾಲ್ ಸಿಂಗ್ ಮತ್ತು ಸಹಚರರು ಅಡಗಿರುವ ಶಂಕೆಯಡಿ ಪೊಲೀಸರು ಇಲ್ಲಿನ ಮರ್ನಾಯನ್ ಗ್ರಾಮದಲ್ಲಿ ತೀವ್ರ ತಪಾಸಣೆ ನಡೆಸಿದರು.

ಪೊಲೀಸರು ಬೆನ್ನಟ್ಟಿದ್ದ ಹಿಂದೆಯೇ ಶಂಕಿತರು ಎನ್ನಲಾದವರು ಮಂಗಳವಾರ ರಾತ್ರಿ ಗ್ರಾಮದ ಬಳಿ ವಾಹನ ಬಿಟ್ಟು ತಲೆಮರೆಸಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸರು ಗ್ರಾಮದ ಪ್ರತಿ ಮನೆಯಲ್ಲಿಯೂ ತಪಾಸಣೆ ನಡೆಸಿದರು.

ಪಂಜಾಬ್ ಪೊಲೀಸ್‌ನ ಗುಪ್ತದಳ ವಿಭಾಗದ ಪೊಲೀಸರು, ಅಮೃತಪಾಲ್ ಸಿಂಗ್ ಸಹಚರರು ಇದ್ದ ಶಂಕೆಯ ಮೇಲೆ ಫಗ್ವಾರಾ ಗ್ರಾಮದಿಂದ ಕಾರೊಂದನ್ನು ಬೆನ್ನಟ್ಟಿದ್ದರು. ಕಾರಿನಲ್ಲಿ ಮೂರರಿಂದ ನಾಲ್ಕು ಜನರಿದ್ದರು ಎನ್ನಲಾಗಿದ್ದು, ಮರ್ನಾಯನ್ ಗ್ರಾಮದ ಗುರುದ್ವಾರ ಭಾಯ್ ಚಂಚಲ್ ಸಿಂಗ್ ಬಳಿ ಕಾರು ಬಿಟ್ಟು ಕಾಲ್ಕಿತ್ತಿದ್ದರು.

ಅಮೃತಪಾಲ್ ಸಿಂಗ್ ಪತ್ತೆಗೆ ಪೊಲೀಸರು ರಾಜ್ಯದಾದ್ಯಂತ ಕಟ್ಟೆಚ್ಚರ ವಹಿಸಿದ್ದಾರೆ. ಆತನ ನೇತೃತ್ವದ ವಾರಿಸ್ ಪಂಜಾಬ್ ದೇ ಸಂಘಟನೆಯ ಮೇಲೆ ಮಾರ್ಚ್ 18ರಂದು ನಡೆದ ದಾಳಿ ಬಳಿಕ ಆತ ತಲೆಮರೆಸಿಕೊಂಡಿದ್ದಾನೆ.

ಸಿಖ್ಖರು ಧರಿಸುವ ರುಮಾಲು ಇಲ್ಲದೆ, ಮಾಸ್ಕ್ ಧರಿಸಿದ್ದ ಅಮೃತಪಾಲ್ ಸಿಂಗ್ ತನ್ನ ಸಹಚರ ಪಪಲ್‌ಪ್ರೀತ್ ಸಿಂಗ್ ಜೊತೆಗಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಮಂಗಳವಾರ ಕಾಣಿಸಿಕೊಂಡಿತ್ತು. ಈ ವಿಡಿಯೊ ಕುರಿತಂತೆ ಪೊಲೀಸರು ಅಧಿಕೃತವಾಗಿ ಪ್ರತಿಕ್ರಿಯಿಸಿಲ್ಲ. ವಿಡಿಯೊದಲ್ಲಿ ಇರುವುದು ಅಮೃತಪಾಲ್ ಸಿಂಗ್ ಎಂಬುದನ್ನು ಖಚಿತಪಡಿಸಿಕೊಳ್ಳಲು ಪರಿಶೀಲನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

'ಬಂಧಿಸುವ ಉದ್ದೇಶವಿದ್ದರೆ ಪೊಲೀಸರು ಮನೆಗೆ ಬರುತ್ತಿದ್ದರು'

ಚಂಡೀಗಢ: ಪರಾರಿಯಾಗಿರುವ ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತ್‌ಪಾಲ್ ಸಿಂಗ್ ಬುಧವಾರ ಸಾಮಾಜಿಕ ಮಾಧ್ಯಮವೊಂದರ ವಿಡಿಯೊದಲ್ಲಿ ಕಾಣಿಸಿಕೊಂಡಿದ್ದು, 'ಪಂಜಾಬ್ ಸರ್ಕಾರಕ್ಕೆ ನನ್ನನ್ನು ಬಂಧಿಸುವ ಉದ್ದೇಶವಿದ್ದಿದ್ದರೆ ಪೊಲೀಸರು ನಮ್ಮ ಮನೆಗೆ ಬರುತ್ತಿದ್ದರು' ಎಂದು ಹೇಳಿದ್ದಾರೆ.

ಅಮೃತ್‌ಪಾಲ್

ತಲೆಗೆ ಕಪ್ಪುಪೇಟ (ಟರ್ಬನ್) ಧರಿಸಿ, ಹೆಗಲ ಮೇಲೆ ಶಾಲು ಹೊದ್ದು ವಿಡಿಯೊದಲ್ಲಿ ಕಾಣಿಸಿಕೊಂಡಿರುವ ಖಾಲಿಸ್ತಾನ ಬೆಂಬಲಿಗ ಅಮೃತ್‌ಪಾಲ್ ತಮ್ಮ ವಿರುದ್ಧ ಕಾರ್ಯಾಚರಣೆ ವೇಳೆ ಸಿಖ್ ಯುವಕರನ್ನು ಬಂಧಿಸಿರುವುದನ್ನು ತೀವ್ರವಾಗಿ ಟೀಕಿಸಿದರು.

'ಬಂಧಿಸಲು ಕಳುಹಿಸಲಾಗಿದ್ದ ಲಕ್ಷಗಟ್ಟಲೆ ಪೊಲೀಸರ ಪ್ರಯತ್ನದಿಂದ ಸರ್ವಶಕ್ತನು ನನ್ನನ್ನು ರಕ್ಷಿಸಿದ್ದಾನೆ' ಎಂದೂ ಹೇಳಿದ್ದಾರೆ.

ಅಮೃತ್‌ಪಾಲ್ ಸಿಂಗ್ ಶರಣಾಗಬಹುದು ಎಂಬ ವರದಿಗಳ ನಡುವೆಯೇ ಈ ವಿಡಿಯೊ ಬಹಿರಂಗವಾಗಿದೆ.

ಅಮೃತ್‌ಪಾಲ್ ಬಲೆಗೆ ಪೊಲೀಸರು ತೀವ್ರ ಶೋಧಕಾರ್ಯ ಕೈಗೊಂಡಿದ್ದರ ನಡುವೆಯೇ ಇತ್ತೀಚೆಗೆ ಜಲಂಧರ್ ಜಿಲ್ಲೆಯಲ್ಲಿ, ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಪರಾರಿಯಾಗಿದ್ದರು.

ಮಾನನಷ್ಟ ಪ್ರಕರಣ: ರಾವುತ್‌ಗೆ ₹ 1,000 ದಂಡ

ಮುಂಬೈ (ಪಿಟಿಐ): ಮೇಧಾ ಸೋಮಯ್ಯ ಎಂಬುವವರು ತಮ್ಮ ವಿರುದ್ಧ ದಾಖಲಿಸಿರುವ ಮಾನನಷ್ಟ ಮೊಕದ್ದಮೆ ಪ್ರಕರಣದ ವಿಚಾರಣೆಯನ್ನು ಮುಂದೂಡುವಂತೆ ಕೋರಿದ ಕಾರಣಕ್ಕಾಗಿ ರಾಜ್ಯಸಭಾ ಸಂಸದ ಸಂಜಯ್ ರಾವುತ್ ಅವರಿಗೆ ಇಲ್ಲಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಬುಧವಾರ ₹ 1,000 ದಂಡ ವಿಧಿಸಿದೆ.

ರಾವುತ್ ಪರ ವಕೀಲರು ಮೇಧಾ ಅವರನ್ನು ಪಾಟಿಸವಾಲಿಗೆ ಒಳಪಡಿಸಲು ದಿನಾಂಕ ನಿಗದಿಪಡಿಸಿದ್ದರು. ಆದರೆ, 'ರಾವುತ್ ಪಾಟಿಸವಾಲಿಗೆ ಸಿದ್ಧರಿಲ್ಲದ ಕಾರಣ ಈ ಪ್ರಕರಣದ ವಿಚಾರಣೆಯನ್ನು ಮುಂದೂಡಬೇಕು' ಎಂದು ವಕೀಲರು ಮನವಿ ಮಾಡಿಕೊಂಡರು.

ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಸೆವ್ರಿ) ನ್ಯಾಯಾಲಯದ ನ್ಯಾಯಾಧೀಶ ಪಿ.ಐ. ಮೊಕಾಶಿ ಅವರು ವಿಚಾರಣೆಯನ್ನು ಮುಂದೂಡಲು ಒಪ್ಪಿಕೊಂಡರು. ಆದರೆ, ರಾವುತ್ ಅವರಿಗೆ ₹ 1,000 ದಂಡ ವಿಧಿಸಿದರು.

ಪ್ರಕರಣದ ಮುಂದಿನ ವಿಚಾರಣೆಯು ಏಪ್ರಿಲ್ 10ರಂದು ನಡೆಯಲಿದೆ. ಮುಂಬೈ ಸಮೀಪದ ಮೀರಾ ಭಾಯಂದರ್ ಪ್ರದೇಶದಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಿಸಿತಾನು ಮತ್ತು ತನ್ನ ಪತಿ ₹100 ಕೋಟಿ ಹಗರಣದಲ್ಲಿ ಭಾಗಿಯಾಗಿದ್ದೇವೆ ಎಂದು ರಾವುತ್ ಆಧಾರರಹಿತ, ಮಾನಹಾನಿಕರ ಆರೋಪ ಮಾಡಿದ್ದಾರೆ ಎಂದು ಮೇಧಾ ಅರ್ಜಿ ಸಲ್ಲಿಸಿದ್ದರು.

ಮೊಹಮ್ಮದ್ ಫೈಜಲ್ ಅನರ್ಹತೆ ರದ್ದು

ನವದೆಹಲಿ: ಕ್ರಿಮಿನಲ್ ಪ್ರಕರಣವೊಂದರಲ್ಲಿ 10 ವರ್ಷಗಳ ಕಾಲ ಜೈಲುಶಿಕ್ಷೆ ವಿಧಿಸಿದ್ದ ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಕೇರಳ ಹೈಕೋರ್ಟ್ ಅಮಾನತುಗೊಳಿಸಿರುವ ಕಾರಣ, ಎನ್‌ಸಿಪಿಯ ಲಕ್ಷದ್ವೀಪದ ಸಂಸದ ಮೊಹಮ್ಮದ್ ಫೈಜಲ್ ಪಿ.ಪಿ. ಅವರನ್ನು ಸದಸ್ಯತ್ವದಿಂದ ಅನರ್ಹಗೊಳಿಸಿ ಹೊರಡಿಸಿದ್ದ ಆದೇಶವನ್ನು ಲೋಕಸಭೆ ಸಚಿವಾಲಯವು ಬುಧವಾರ ವಾಪಸ್ ಪಡೆದಿದೆ.

ದ್ವೇಷ ಭಾಷಣವು ವಿಷ ವರ್ತುಲ ಇದ್ದ ಹಾಗೆ

ಒಂದನೇ ಪುಟದಿಂದ...

'ರಾಜಕಾರಣ ಮತ್ತು ಧರ್ಮ ಪ್ರತ್ಯೇಕಗೊಂಡಾಗ ಹಾಗೂ ಜನಪ್ರತಿನಿಧಿಗಳು ರಾಜಕಾರಣದಲ್ಲಿ ಧರ್ಮ ಬೆರೆಸುವುದನ್ನು ನಿಲ್ಲಿಸಿದಾಗ ದ್ವೇಷ ಭಾಷಣದ ಸಮಸ್ಯೆ ಕೊನೆಗೊಳ್ಳಲಿದೆ' ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ನ್ಯಾಯಾಲಯದ ಕಲಾಪದಲ್ಲಿ ಭಾಗವಹಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಕೇರಳದಲ್ಲಿ ನಡೆದಿರುವ ಘಟನೆಯೊಂದಕ್ಕೆ ಸಂಬಂಧಿಸಿದ ವಿಡಿಯೊ ತುಣುಕನ್ನು ಪ್ರದರ್ಶಿಸುವಂತೆ ಮನವಿ ಮಾಡಿದರು. ಆಗ ನ್ಯಾಯಪೀಠವು, 'ರಾಜ್ಯ ಸರ್ಕಾರಗಳು ಸಮಯಕ್ಕೆ ಅನುಗುಣವಾಗಿ ಕೆಲಸ ಮಾಡದಿರುವುದರಿಂದಾಗಿ ಇದು ಮುಂದುವರಿಯುತ್ತಿದೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರಗಳು ಮೌನಕ್ಕೆ ಜಾರಿದ್ದು, ಇಂತಹ ಸರ್ಕಾರಗಳು ನಮಗೆ ಬೇಕೆ' ಎಂದು ಮೆಹ್ತಾ ಅವರನ್ನು ಪ್ರಶ್ನಿಸಿತು.

'ಕೇರಳ ಹಾಗೂ ತಮಿಳುನಾಡಿನಲ್ಲಿ ವರದಿಯಾಗಿರುವ ದ್ವೇಷ ಭಾಷಣದ ಕುರಿತು ಪರಿಶೀಲನೆ ನಡೆಸಲು ನಾವೇಕೆ ಹಿಂಜರಿಯುತ್ತಿದ್ದೇವೆ. ಹಿಂದೂಗಳು ಹಾಗೂ ಕ್ರೈಸ್ತರು ಅಂತಿಮ ಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಕೇರಳದಲ್ಲಿ ಹೇಳಲಾಗಿದೆ. ಇದು ಇತರ ಧರ್ಮಗಳನ್ನು ಗುರಿಯಾಗಿಸಿಕೊಂಡು ನೀಡಿರುವ ಹೇಳಿಕೆ ಎಂಬುದು ಸ್ಪಷ್ಟ. ಇದಕ್ಕೂ ರಾಜಕಾರಣಕ್ಕೂ ಯಾವ ಸಂಬಂಧವೂ ಇಲ್ಲ. ಇದು ಆಘಾತಕಾರಿಯಾದುದು. ಈ ನ್ಯಾಯಾಲಯದ ಆತ್ಮಸಾಕ್ಷಿಗೆ ಪೆಟ್ಟು ನೀಡುವಂತಹದ್ದು' ಎಂದು ಮೆಹ್ತಾ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ 'ಇದರ ಬಗ್ಗೆ ನಮಗೆ ಗೊತ್ತಿದೆ' ಎಂದು ತಿಳಿಸಿತು. ಆಗ ಮೆಹ್ತಾ, 'ಹಾಗಿದ್ದ ಮೇಲೆ ಈ ಕುರಿತು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಪರಿಶೀಲನೆ ನಡೆಸಬೇಕಿತ್ತಲ್ಲವೇ' ಎಂದು ಪ್ರಶ್ನಿಸಿದರು.

'ತಮಿಳುನಾಡಿನ ಡಿಎಂಕೆ ಪಕ್ಷದ ನಾಯಕರೊಬ್ಬರು 'ಸಮಾನತೆ ಬೇಕಿದ್ದರೆ ಎಲ್ಲಾ ಬ್ರಾಹ್ಮಣರನ್ನೂ ಕೊಂದು ಹಾಕಿ' ಎಂದು ಹೇಳಿಕೆ ನೀಡಿದ್ದಾರೆ. ಇದನ್ನೆಲ್ಲಾ ಬಿಟ್ಟು ಅರ್ಜಿದಾರರು ಆಯ್ದ ಕೆಲವನ್ನಷ್ಟೇ ತಮ್ಮ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ತಮಿಳುನಾಡು ಹಾಗೂ ಕೇರಳದಲ್ಲಿ ವರದಿಯಾಗಿರುವ ಪ್ರಕರಣಗಳನ್ನೂ ಅರ್ಜಿಯಲ್ಲಿ ಸೇರ್ಪಡೆ ಮಾಡಲು ಅವರಿಗೆ ಹೇಳಿ' ಎಂದು ಮೆಹ್ತಾ ನ್ಯಾಯಪೀಠಕ್ಕೆ ತಿಳಿಸಿದರು.

'ರಾಜ್ಯ ಸರ್ಕಾರಗಳು ನಿಸ್ಸಹಾಯಕವಾಗಿರುವುದಿಂದ ಇಂತಹ ಪ್ರಕರಣಗಳು ಹೆಚ್ಚುತ್ತಲೇ ಇವೆ' ಎಂದು ನ್ಯಾಯಮೂರ್ತಿ ಜೋಸೆಫ್ ಪ್ರತಿಕ್ರಿಯಿಸಿದರು. ಆಗ ಮೆಹ್ತಾ, 'ಕೇಂದ್ರ ಸರ್ಕಾರ ಇದರಿಂದ ಹೊರತಾಗಿದೆ. ಕೇಂದ್ರವು ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಿದೆ' ಎಂದರು.

'ದ್ವೇಷ ಭಾಷಣ ನಿಯಂತ್ರಿಸುವ ದಿಸೆಯಲ್ಲಿ ಮಹಾರಾಷ್ಟ್ರ ಸರ್ಕಾರವು ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಈ ವಿಚಾರವಾಗಿ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಬಾರದು' ಎಂದು ಮಹಾರಾಷ್ಟ್ರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಕೋರಿದರು. ಅವರ ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿತು.

ನ್ಯಾಯಾಲಯದ ಆದೇಶದ ಹೊರತಾಗಿಯೂ ಹಿಂದೂ ಸಂಘಟನೆಗಳ ದ್ವೇಷ ಭಾಷಣಕ್ಕೆ ಕಡಿವಾಣ ಹಾಕುವಲ್ಲಿ ವಿಫಲವಾಗಿರುವ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಸೂಚಿಸಿದ ನ್ಯಾಯಪೀಠವು ವಿಚಾರಣೆಯನ್ನು ಏಪ್ರಿಲ್ 28ಕ್ಕೆ ಮುಂದೂಡಿತು.

ನೆಹರೂ, ವಾಜಪೇಯಿ ಹೆಸರು ಉಲ್ಲೇಖ

'ನಮ್ಮಲ್ಲಿ ಪಂಡಿತ್ ಜವಾಹರಲಾಲ್ ನೆಹರೂ ಹಾಗೂ ಅಟಲ್ ಬಿಹಾರಿ ವಾಜಪೇಯಿ ಅವರಂತಹ ವಾಗ್ಮಿಗಳು ಇದ್ದರು. ಇವರ ಭಾಷಣಗಳನ್ನು ಆಲಿಸಲು ದೂರದ ಊರುಗಳಿಂದಲೂ ಜನ ಬರುತ್ತಿದ್ದರು. ಆದರೆ ಈಗ ಕೆಲಸಕ್ಕೆ ಬಾರದವರೆಲ್ಲಾ ದ್ವೇಷ ಭಾಷಣದಲ್ಲಿ ತೊಡಗಿದ್ದಾರೆ. ದೇಶ ಎತ್ತ ಸಾಗುತ್ತಿದೆ' ಎಂದು ನ್ಯಾಯಪೀಠ ಪ್ರಶ್ನಿಸಿತು.

'ದೇಶವು ದೊಡ್ಡ ಶಕ್ತಿಯಾಗಿ ರೂಪುಗೊಳ್ಳಬೇಕಾದರೆ ನಾವು ಈ ನೆಲದ ಕಾನೂನನ್ನು ಗೌರವಿಸಬೇಕು. ಪ್ರತಿಯೊಬ್ಬ ನಾಗರಿಕನನ್ನೂ ಘನತೆಯಿಂದ ಕಾಣಬೇಕು' ಎಂದು ಹೇಳಿತು. 'ಶಿಕ್ಷಣ ಹಾಗೂ ತಿಳಿವಳಿಕೆಯ ಕೊರತೆಯಿಂದಾಗಿ ಅಸಹಿಷ್ಣುತೆ ಮನೆಮಾಡುತ್ತದೆ. ನ್ಯಾಯಾಂಗ ನಿಂದನೆ ಪ್ರಕರಣಗಳು ನಿರಂತರವಾಗಿ ದಾಖಲಾಗುತ್ತಿವೆ. ಇದನ್ನೆಲ್ಲಾ ನ್ಯಾಯಾಲಯ ಹೇಗೆ ನಿಭಾಯಿಸಬೇಕು. ಇತರ ಸಮುದಾಯಗಳು ಹಾಗೂ ಆ ಸಮುದಾಯಗಳ ಜನರನ್ನು ಹೀಯಾಳಿಸುವುದಿಲ್ಲ ಎಂದು ಈ ದೇಶದ ನಾಗರಿಕರೇಕೆ ಪ್ರತಿಜ್ಞೆ ಮಾಡುವುದಿಲ್ಲ' ಎಂದೂ ನ್ಯಾಯಪೀಠ ಪ್ರಶ್ನಿಸಿತು.

ನಾಳೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭ

ಒಂದನೇ ಪುಟದಿಂದ...

10ರಂದು ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ (80 ಅಂಕಗಳು) 12ರಂದು ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು (80 ಅಂಕಗಳು), ಮಾಹಿತಿ ತಂತ್ರಜ್ಞಾನ, ರಿಟೇಲ್,ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿಷಿಯನ್ (60 ಅಂಕಗಳು), 15ರಂದು ಸಮಾಜ ವಿಜ್ಞಾನ (80 ಅಂಕಗಳು) ಪರೀಕ್ಷೆಗಳು ನಡೆಯಲಿವೆ.

ಪ್ರತಿ ವಿಷಯಗಳ ಪರೀಕ್ಷೆ ಆಯಾ ದಿನಗಳಂದು ಬೆಳಿಗ್ಗೆ 10.30ಕ್ಕೆ ಆರಂಭವಾಗಿ 1.45ಕ್ಕೆ ಮುಕ್ತಾಯವಾಗಲಿವೆ. ಏ.10ರಂದು ನಡೆಯುವ ಸಂಗೀತ ಪರೀಕ್ಷೆಗಳು ಹಾಗೂ ಪ್ರಾಯೋಗಿಕ ಪರೀಕ್ಷೆಗಳು ಮಾತ್ರ ಮಧ್ಯಾಹ್ನ 2ರಿಂದ ಸಂಜೆ 5.15ರವರೆಗೂ ನಡೆಯಲಿವೆ. ಏ.17ರಂದು ಜೆಟಿಎಸ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಹಾಗೂ ಮೌಖಿಕ ಪರೀಕ್ಷೆಗಳು ನಡೆಯಲಿವೆ.

ಪರೀಕ್ಷಾ ಸಿದ್ಧತೆ ಪೂರ್ಣ: ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸಲು ಶಿಕ್ಷಣ ಇಲಾಖೆ ಸಿದ್ಧತಾ ಕಾರ್ಯಗಳನ್ನು ಪೂರ್ಣಗೊಳಿಸಿದೆ. ಮೊಬೈಲ್‌ಫೋನ್, ಸ್ಮಾರ್ಟ್‌ವಾಚ್, ಇಯರ್‌ಫೋನ್ ಸೇರಿದಂತೆ ಎಲ್ಲ ರೀತಿಯ ಎಲೆಕ್ಟ್ರಾನಿಕ್ಸ್ ಸಾಧನಗಳನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಭದ್ರತಾ ಕಾರ್ಯ, ಪರೀಕ್ಷಾ ಕರ್ತವ್ಯದಲ್ಲಿ ತೊಡಗಿಸಿಕೊಳ್ಳುವ ಅಧಿಕಾರಿ, ಸಿಬ್ಬಂದಿಯೂ ಮೊಬೈಲ್ ಫೋನ್ ಬಳಸುವಂತಿಲ್ಲ. ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ಕ್ಯಾಮೆರಾ ಸೌಲಭ್ಯ ಇಲ್ಲದ ಮೊಬೈಲ್‌ಫೋನ್ ಬಳಸಬಹುದು. ಹಿಂದೆ ನಕಲು ಮಾಡಿದ್ದ ಪರೀಕ್ಷಾ ಕೇಂದ್ರಗಳನ್ನು ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಪರೀಕ್ಷಾ ಕೇಂದ್ರಗಳೆಂದು ಗುರುತಿಸಿದ್ದು ಹೆಚ್ಚುವರಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

ಜಾಲತಾಣಗಳಲ್ಲಿ ವದಂತಿ ಹಬ್ಬಿಸದಂತೆ, ವದಂತಿಗಳನ್ನು ಹಬ್ಬಿಸುವ ಕಿಡಿಗೇಡಿಗಳ ಮೇಲೆ ನಿಗಾ ಇರಿಸಲು ಸೈಬರ್‌ಕ್ರೈಂ ಅಧಿಕಾರಿಗಳು, ಸ್ಥಳೀಯ ಪೊಲೀಸರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ತಂಡ ರಚಿಸಲಾಗಿದೆ. ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳ ಸಾಗಣೆ, ಸಂಗ್ರಹಣೆ, ಮೌಲ್ಯಮಾಪನ ಕೇಂದ್ರಗಳ ಸುತ್ತ ಬಿಗಿ ಭದ್ರತೆ ಒದಗಿಸಲಾಗುತ್ತಿದೆ.

ಅಂಕಿ-ಅಂಶಗಳು

8.42 ಲಕ್ಷ — ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡ ವಿದ್ಯಾರ್ಥಿಗಳು

3,305 — ಒಟ್ಟು ಪರೀಕ್ಷಾ ಕೇಂದ್ರಗಳು

15,498 — ರಾಜ್ಯದ ಪ್ರೌಢಶಾಲೆಗಳು

ರಷ್ಯಾ: ಅಣ್ವಸ್ತ್ರ ಕ್ಷಿಪಣಿ ಪಡೆಗಳ ತಾಲೀಮು ಆರಂಭ

ಮಾಸ್ಕೊ/ಕೀವ್ (ಎಪಿ): ಉಕ್ರೇನ್ ಮೇಲೆ ನಡೆಸುತ್ತಿರುವ ಆಕ್ರಮಣದ ನಡುವೆಯೇ, ಅಮೆರಿಕ ಸೇರಿ ಪಶ್ಚಿಮದ ರಾಷ್ಟ್ರಗಳು ಈ ಸಂಘರ್ಷದಲ್ಲಿ ನೇರ ಭಾಗಿಯಾಗುವುದರ ವಿರುದ್ಧ ಕಠಿಣ ಎಚ್ಚರಿಕೆಯ ಸಂದೇಶ ರವಾನಿಸಲು ರಷ್ಯಾ ಬುಧವಾರ ಅಣ್ವಸ್ತ್ರ ಕ್ಷಿಪಣಿ ಪಡೆಗಳ ತಾಲೀಮು ಆರಂಭಿಸಿದೆ.

ಈ ತಾಲೀಮಿನ ಭಾಗವಾಗಿ ಸೈಬೀರಿಯಾದ ಮೂರು ಪ್ರದೇಶಗಳಲ್ಲಿ ಯಾರ್ಸ್ ಅಣ್ವಸ್ತ್ರ ಕ್ಷಿಪಣಿಗಳ ಉಡಾವಣೆಯ ಮೊಬೈಲ್ ಲಾಂಚರ್ ನಿಯೋಜಿಸಲಾಗಿದೆ. ಯಾರ್ಸ್ ಅಣ್ವಸ್ತ್ರ ಸಜ್ಜಿತ ಖಂಡಾಂತರ ಬ್ಯಾಲಿಸ್ಟಿಕ್ ಕ್ಷಿಪಣಿಯಾಗಿದ್ದು, ಇದು ಸುಮಾರು 11 ಸಾವಿರ ಕಿ.ಮೀ ದೂರದ ಗುರಿ ತಲುಪುತ್ತದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಯುದ್ಧತಂತ್ರದ ಅಣ್ವಸ್ತ್ರಗಳನ್ನು ಬೆಲಾರೂಸ್ ಮತ್ತು ರಷ್ಯಾದ ನೆರೆಯ ಮತ್ತು ಮಿತ್ರ ರಾಷ್ಟ್ರಗಳ ರಕ್ಷಣೆಗೆ ನಿಯೋಜಿಸುವ ಯೋಜನೆ ಘೋಷಿಸಿದ ಕೆಲವೇ ದಿನಗಳಲ್ಲಿ ಅಣ್ವಸ್ತ್ರ ಕ್ಷಿಪಣಿ ಪಡೆಗಳ ಬೃಹತ್ ತಾಲೀಮು ಆರಂಭವಾಗಿದೆ.

ಈ ತಾಲೀಮಿನಲ್ಲಿ 300 ಸೇನಾ ವಾಹನಗಳು ಮತ್ತು ಮೂರು ಸಾವಿರ ತುಕಡಿಗಳು ಪಾಲ್ಗೊಂಡಿದ್ದವು.

ರಷ್ಯಾ ಗೆಲುವು ಅಪಾಯಕಾರಿ: ಚೀನಾ ಅಧ್ಯಕ್ಷ ಷಿ ಜಿನ್ ಪಿಂಗ್ ಅವರು ಉಕ್ರೇನ್‌ಗೂ ಭೇಟಿ ನೀಡಲಿ. ಅವರನ್ನು ಸ್ವಾಗತಿಸಲು ಸಿದ್ಧವಿದ್ದೇವೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಬುಧವಾರ ಆಹ್ವಾನ ನೀಡಿದ್ದಾರೆ.

ಇತ್ತೀಚೆಗಷ್ಟೇ ರಷ್ಯಾಕ್ಕೆ ಭೇಟಿ ನೀಡಿ ವ್ಲಾಡಿಮಿರ್ ಪುಟಿನ್ ಅವರ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಿರುವ ಷಿ ಜಿನ್ ಪಿಂಗ್ ಅವರಿಗೆ ಝೆಲೆನ್‌ಸ್ಕಿ ಅವರು 'ದಿ ಅಸೋಸಿಯೇಟೆಡ್ ಪ್ರೆಸ್' ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಆಹ್ವಾನ ಕೊಟ್ಟಿದ್ದಾರೆ.

ಉಕ್ರೇನ್, ಸ್ವೀಕಾರಾರ್ಹವಲ್ಲದ ರಾಜಿ ಮಾಡಿಕೊಳ್ಳುವಂತೆ ಅಗತ್ಯವಿರುವ ಒಪ್ಪಂದಕ್ಕೆ ಬರುವಂತೆ ಮಾಡಲು ಪುಟಿನ್ ಅಂತರರಾಷ್ಟ್ರೀಯ ಬೆಂಬಲ ಗಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಝೆಲೆನ್‌ಸ್ಕಿ ಬುಧವಾರ ಎಚ್ಚರಿಸಿದ್ದಾರೆ.

ಎಚ್-1 ಬಿ, ಎಲ್-1 ವೀಸಾ: ಸುಧಾರಣೆಗೆ ಮಸೂದೆ

ವಾಷಿಂಗ್ಟನ್ (ಪಿಟಿಐ): ವಿದೇಶಿ ಉದ್ಯೋಗಿಗಳ ನೇಮಕಾತಿಯಲ್ಲಿ ಹೆಚ್ಚು ಪಾರದರ್ಶಕತೆ, ಎಚ್– 1ಬಿ ಮತ್ತು ಎಲ್ -1 ವೀಸಾ ಯೋಜನೆಗಳಲ್ಲಿ ಸಮಗ್ರ ಸುಧಾರಣೆಗಾಗಿ ಅಮೆರಿಕದ ಪ್ರಭಾವಿ ಸಂಸದರ ಗುಂಪೊಂದು ಸೆನೆಟ್‌ನಲ್ಲಿ ಮಸೂದೆ ಮಂಡಿಸಿದೆ.

ಪ್ರಭಾವಿ ಸೆನೆಟರ್‌ಗಳಾದ ಡಿಕ್ ಡರ್ಬಿನ್ ಮತ್ತು ಚಕ್ ಗ್ರಾಸ್ಲೆ ಅವರು ಈ ಮಸೂದೆ ಮಂಡಿಸಿದ್ದು, ಸೆನೆಟರ್‌ಗಳಾದ ಟಾಮಿ ಟ್ಯೂಬರ್‌ವಿಲ್ಲೆ, ಬರ್ನಿ ಸ್ಯಾಂಡರ್ಸ್, ಶೆರೋಡ್ ಬ್ರೌನ್ ಮತ್ತು ರಿಚರ್ಡ್ ಬ್ಲೂಮೆಂಥಾಲ್ ಅವರು ಈ ಮಸೂದೆ ಬೆಂಬಲಿಸಿದ್ದಾರೆ.

ತಾಂತ್ರಿಕ ಪರಿಣತಿ ಬಯಸುವ ವಿಶೇಷ ಉದ್ಯೋಗಗಳಿಗೆ ವಿದೇಶಿಗರನ್ನು ನೇಮಿಸಿಕೊಳ್ಳಲು ಅಮೆರಿಕದ ಕಂಪನಿಗಳಿಗೆ ವಲಸೆ ರಹಿತ ವೀಸಾ ಎಚ್ -1 ಬಿ ಅಡಿ ಅವಕಾಶವಿದೆ. ಭಾರತ ಮತ್ತು ಚೀನಾದಂತಹ ದೇಶಗಳಿಂದ ಪ್ರತಿ ವರ್ಷ ಹತ್ತಾರು ಸಾವಿರ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ತಂತ್ರಜ್ಞಾನ ಕಂಪನಿಗಳು ಎಚ್ -1 ಬಿ ವೀಸಾ ಯೋಜನೆಯನ್ನೇ ಅವಲಂಬಿಸಿವೆ.

ಎಲ್ -1 ಇತರ ರೀತಿಯ ಉದ್ಯೋಗ ವೀಸಾ ಆಗಿದ್ದು, ಅಮೆರಿಕದಲ್ಲಿ ನೌಕರಿ ಬಯಸುವ ವೃತ್ತಿಪರರಿಗೆ ಇದರಲ್ಲಿ ಅವಕಾಶವಿದೆ.

ಪಾಕ್: ಮುಖ್ಯ ನ್ಯಾಯಮೂರ್ತಿ ಅಧಿಕಾರ ಮೊಟಕು– ಮಸೂದೆ ಅಂಗೀಕಾರ

ಇಸ್ಲಾಮಾಬಾದ್ (ಪಿಟಿಐ); ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ವಿವೇಚನಾ ಅಧಿಕಾರವನ್ನು ಮೊಟಕುಗೊಳಿಸುವ ಮಸೂದೆಯನ್ನು ಪಾಕಿಸ್ತಾನ ಸಂಸತ್ ಬುಧವಾರ ಅಂಗೀಕರಿಸಿದೆ.

ದೇಶದ ಉನ್ನತ ನ್ಯಾಯಮೂರ್ತಿಗಳ ಅಧಿಕಾರ ಮೊಟಕುಗೊಳಿಸಲು ಕಾನೂನು ಜಾರಿಗೆ ತರದಿದ್ದರೆ 'ಇತಿಹಾಸ ನಮ್ಮನ್ನು ಕ್ಷಮಿಸುವುದಿಲ್ಲ' ಎಂದು ಪ್ರಧಾನಿ ಶೆಹಬಾಜ್ ಷರೀಫ್ ಮಂಗಳವಾರ ಹೇಳಿದ್ದರು. ಮಾರನೇ ದಿನವೇ ಈ ಮಸೂದೆಗೆ ಸಂಸತ್‌ನಲ್ಲಿ ಅನುಮೋದನೆ ನೀಡಲಾಗಿದೆ.

ಕಾನೂನು ಸಚಿವ ಅಜಂ ನಜೀರ್ ತರಾರ್ ಅವರು ಮಂಗಳವಾರ ರಾತ್ರಿ ಸಂಸತ್ತಿನಲ್ಲಿ 'ಸುಪ್ರೀಂ ಕೋರ್ಟ್ (ಕಾರ್ಯ ಮತ್ತು ವಿಧಾನ) ಮಸೂದೆ, 2023' ಮಂಡಿಸಿದರು.

'ಸಂಸತ್ ಈ ಮಸೂದೆಯನ್ನು ಅಂಗೀಕರಿಸಿದೆ' ಎಂದು ಕೆಳಮನೆ ಟ್ವೀಟ್ ಮಾಡಿದೆ.

ವೆಸಾ ಬಿಡುಗಡೆಗಾಗಿ ತಾಲಿಬಾನ್ ಮೇಲೆ ಹೆಚ್ಚಿದ ಒತ್ತಡ

ಇಸ್ಲಾಮಾಬಾದ್ (ಎಪಿ): ಕಾಬೂಲ್‌ನಲ್ಲಿ ಈ ವಾರ ಬಂಧನಕ್ಕೊಳಗಾಗಿರುವ 'ಪೆನ್‌ಪಾತ್' ಸಂಸ್ಥಾಪಕ ಹಾಗೂ ಹೆಣ್ಣುಮಕ್ಕಳ ಶಿಕ್ಷಣದ ಸಾಮಾಜಿಕ ಕಾರ್ಯಕರ್ತ ಮತಿವುಲ್ಲಾ ವೆಸಾ ಅವರ ಬಿಡುಗಡೆಗೆ ಒತ್ತಾಯಿಸಿ ತಾಲಿಬಾನ್ ಮೇಲೆ ಒತ್ತಡ ಹೆಚ್ಚಾಗುತ್ತಿದೆ.

'ಪೆನ್‌ಪಾತ್'ಎನ್ನುವ ಸರ್ಕಾರೇತರ ಸಂಸ್ಥೆಯ ಮೂಲಕ ಅಫ್ಗಾನಿಸ್ತಾನದಾದ್ಯಂತ ಮೊಬೈಲ್ ಶಾಲೆ ಹಾಗೂ ಗ್ರಂಥಾಲಯ ನಡೆಸುತ್ತಿರುವ ಮತಿಯುಲ್ಲಾ ಅವರನ್ನು ಸೋಮವಾರ ಕಾಬೂಲ್‌ನಲ್ಲಿ ಬಂಧಿಸಲಾಗಿದೆ.

ಯುರೋಪ್ ಪ್ರವಾಸದಿಂದ ವಾಪಸಾದ ಮತಿವುಲ್ಲಾ ಅವರನ್ನು ತಾಲಿಬಾನ್ ಭದ್ರತಾ ಪಡೆಗಳು ಬಂಧಿಸಿವೆ ಎಂದು ಸ್ಥಳೀಯ ವರದಿಗಳು ತಿಳಿಸಿವೆ. ಆದರೆ, ತಾಲಿಬಾನ್ ಅಧಿಕಾರಿಗಳು ಅವರ ಬಂಧನವನ್ನು ದೃಢಪಡಿಸಿಲ್ಲ. ಅವರ ಬಂಧನಕ್ಕೆ ಕಾರಣಗಳು ಹಾಗೂ ಅವರನ್ನು ಎಲ್ಲಿ ಇರಿಸಲಾಗಿದೆ ಎನ್ನುವ ವಿಷಯವನ್ನು ತಿಳಿಸಿಲ್ಲ.

'ತಾಲಿಬಾನ್ ಪಡೆಗಳು ಮತಿವುಲ್ಲಾ ಅವರ ಕುಟುಂಬ ವಾಸವಿರುವ ಮನೆಯನ್ನು ಸುತ್ತುವರಿದಿವೆ. ಕುಟುಂಬd ಸದಸ್ಯರನ್ನು ಥಳಿಸಲಾಗಿದೆ' ಎಂದೂ ಮತಿವುಲ್ಲಾ ಅವರ ಸಹೋದರ ಹೇಳಿದ್ದಾರೆ.

ಇಮ್ರಾನ್ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್

ಇಸ್ಲಾಮಾಬಾದ್ (ಪಿಟಿಐ): ನ್ಯಾಯಾಧೀಶೆಯೊಬ್ಬರಿಗೆ ಬೆದರಿಕೆ ಒಡ್ಡಿದ ಆರೋಪದ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಇಲ್ಲಿನ ನ್ಯಾಯಾಲಯವು ಬುಧವಾರ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದೆ.

ಕೋರ್ಟ್‌ಗೆ ಖುದ್ದು ಹಾಜರಾಗುವುದರಿಂದ ವಿನಾಯಿತಿ ಹಾಗೂ ಮಾರ್ಚ್ 30 ರಂದು ಹಾಜರಾಗಲು ಅವಕಾಶ ನೀಡುವಂತೆ ಖಾನ್ ಪರ ವಕೀಲ ಸಲ್ಲಿಸಿದ್ದ ಮನವಿಯನ್ನು ನ್ಯಾಯಾಧೀಶ ಮಲಿಕ್ ಅಮನ್ ತಿರಸ್ಕರಿಸಿದರು.

ಇಮ್ರಾನ್ ಖಾನ್ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದ ನ್ಯಾಯಾಧೀಶ ಅಮನ್, ಏ. 18ರಂದು ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಳೆದ ವರ್ಷ ಆಗಸ್ಟ್‌ನಲ್ಲಿ ನಡೆದ ರ‍್ಯಾಲಿಯೊಂದರಲ್ಲಿ ಮಾತನಾಡಿದ್ದ ಇಮ್ರಾನ್ ಖಾನ್, ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಝೆಬಾ ಚೌಧರಿ ಹಾಗೂ ಇಸ್ಲಾಮಾಬಾದ್ ಪೊಲೀಸ್ ಅಧಿಕಾರಿಗಳ ವಿರುದ್ಧ ಬೆದರಿಕೆ ಒಡ್ಡುವ ಭಾಷೆ ಬಳಸಿದ್ದರು ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ.



ಸುಭಾಷಿತ

ಸಂತೋಷವಾಗಿ ಇರುವುದು ತುಂಬಾ ಸರಳ. ಆದರೆ ಸರಳವಾಗಿ ಇರುವುದು ತುಂಬಾ ಕಷ್ಟ.

-ರವೀಂದ್ರನಾಥ ಟ್ಯಾಗೋರ್

ಗಲ್ಲು ಶಿಕ್ಷೆಗೆ ಪರ್ಯಾಯ ಮರಣದಂಡನೆಯ ರದ್ದತಿ

ಮರಣದಂಡನೆಗೆ ಗುರಿಯಾದ ಅಪರಾಧಿಯನ್ನು ಗಲ್ಲಿಗೇರಿಸಿ ಕೊಲ್ಲುವ ಬದಲು, ಅದಕ್ಕಿಂತ ಹೆಚ್ಚು ಮಾನವೀಯವಾದ ಮಾರ್ಗ ಅನುಸರಿಸಿ ಆ ಅಪರಾಧಿಯ ಪ್ರಾಣಹರಣ ಸಾಧ್ಯವೇ ಎಂಬ ಬಗ್ಗೆ ಪರಿಶೀಲಿಸಲು ಸುಪ್ರೀಂ ಕೋರ್ಟ್ ಮುಂದಾಗಿದೆ. ಕೋರ್ಟ್‌ನ ಈ ನಡೆಯು ಅಪರಾಧಿಗೆ ಶಿಕ್ಷೆಯ ರೂಪದಲ್ಲಿ ಮರಣದಂಡನೆಯನ್ನು ನೀಡುವುದರ ಕುರಿತು ಚರ್ಚೆಗೆ ದಾರಿ ಮಾಡಿಕೊಟ್ಟಿದೆ. ವಾಸ್ತವದಲ್ಲಿ ಮರಣದಂಡನೆಯೇ ಅನ್ಯಾಯದ್ದು. ಮರಣದಂಡನೆಗೆ ಗುರಿಯಾದ ಅಪರಾಧಿಯು ತನ್ನ ಜೀವನದ ಕೊನೆಯ ಕ್ಷಣಗಳಲ್ಲಿ ಎದುರಿಸುವ ಮಾನಸಿಕ ಹಾಗೂ ದೈಹಿಕ ಯಾತನೆಯನ್ನು ಪರಿಗಣಿಸಿ ಹೇಳುವುದಾದರೆ, ನೇಣು ಬಿಗಿದು ಕೊಲ್ಲುವುದಕ್ಕಿಂತ ಹೆಚ್ಚು ಮಾನವೀಯವಾದ ಪರ್ಯಾಯವನ್ನು ಅರಸುವುದು ಸ್ವಾಗತಾರ್ಹ ಹೌದು. ಆದರೆ, ಪ್ರಭುತ್ವವೊಂದರ ಪಾಲಿಗೆ ನೈತಿಕವಾಗಿ ಸರಿಯಲ್ಲದ ಮರಣದಂಡನೆಯನ್ನು ಇಲ್ಲವಾಗಿಸುವುದೇ ನಿಜವಾದ ಪರ್ಯಾಯ ವಾಗುತ್ತದೆ. ಅಪರಾಧಿಗೆ ವಿದ್ಯುತ್ ಶಾಕ್ ನೀಡಿ ಆತನನ್ನು ಕೊಲ್ಲುವುದು, ಆತನಿಗೆ ಗುಂಡು ಹೊಡೆದು ಕೊಲ್ಲುವುದು, ಸಿರಿಂಜ್ ಮೂಲಕ ವಿಷ ನೀಡಿ ಕೊಲ್ಲುವುದು ಯಾತನೆ ಇಲ್ಲದ ಮರಣದಂಡನೆ ಎಂದು ಪರಿಗಣಿಸಲು ಆಗದು ಎಂದು ಕೋರ್ಟ್ ಹೇಳಿದೆ. ಏಕೆಂದರೆ ಮರಣ ದಂಡನೆಯನ್ನು ಈ ಬಗೆಗಳಲ್ಲಿ ವಿಧಿಸುವಾಗ ಲೋಪಗಳಾಗುವ ಸಾಧ್ಯತೆ ಇರುತ್ತದೆ. ಗಲ್ಲಿಗೆ ಏರಿಸಿ ಅಪರಾಧಿಯನ್ನು ಕೊಲ್ಲುವುದು ಎಷ್ಟು ಸರಿ ಎಂಬುದನ್ನು ಸರ್ಕಾರ ಪರಿಶೀಲಿಸದೇ ಇದ್ದರೆ, ಕೋರ್ಟ್ ತಾನೇ ತಜ್ಞರ ಸಮಿತಿಯೊಂದನ್ನು ರಚಿಸುವ ಇರಾದೆ ಹೊಂದಿರುವಂತಿದೆ. ಮರಣದಂಡನೆಯನ್ನು ವಿಧಿಸಲು ಕಡಿಮೆ ಯಾತನೆಯ ಹಾಗೂ 'ಮನುಷ್ಯನ ಘನತೆಗೆ ಹೆಚ್ಚು ಅನುಗುಣವಾಗಿ ಇರುವ' ಇನ್ನೊಂದು ಆಯ್ಕೆ ಇದೆ ಎಂಬುದಕ್ಕೆ ವೈಜ್ಞಾನಿಕ ಆಧಾರ ಇರುವುದಾದರೆ, ಗಲ್ಲಿಗೇರಿಸಿ ಮರಣದಂಡನೆ ಜಾರಿಗೆ ತರುವುದು ಅಸಾಂವಿಧಾನಿಕ ಎಂದು ಘೋಷಿಸಲು ತಾನು ಸಿದ್ಧವಿರುವುದಾಗಿಯೂ ಕೋರ್ಟ್ ಹೇಳಿದೆ.

ಪ್ರಭುತ್ವವೊಂದರ ಪಾಲಿಗೆ ನೈತಿಕವಾಗಿ ಸರಿಯಲ್ಲದ ಮರಣದಂಡನೆಯನ್ನು ಇಲ್ಲವಾಗಿಸುವುದೇ ನಿಜವಾದ ಪರ್ಯಾಯವಾಗುತ್ತದೆ

ಆದರೆ ಅಪರಾಧಿಗೆ ಸಾವಿನ ಶಿಕ್ಷೆಯನ್ನು ವಿಧಿಸುವುದರಲ್ಲಿ ಇರುವ ನಿಜ ಸಮಸ್ಯೆಯು ಯಾವ ರೀತಿಯಲ್ಲಿ ಶಿಕ್ಷೆಯನ್ನು ವಿಧಿಸಲಾಗುತ್ತದೆ, ಅದು ಯಾತನಾಮಯ ಹೌದೋ ಅಲ್ಲವೋ ಎಂಬುದಲ್ಲ. ಬದಲಿಗೆ, ಇಲ್ಲಿ ನಿಜವಾಗಿ ಗಮನಿಸಬೇಕಾಗಿದ್ದು ಮಾನವನ ಘನತೆಗೆ ಸಂಬಂಧಿಸಿದ ಅಂಶಗಳನ್ನು. ಯಾವುದೇ ವ್ಯಕ್ತಿಯನ್ನು ಪ್ರಭುತ್ವವು ತಾನೇ ಮುಂದೆ ನಿಂತು ಕೊಲ್ಲುವುದು ಮಾನವನ ಘನತೆಗೆ ಚ್ಯುತಿ ತರುವ ಕೆಲಸ. ಕೊಲ್ಲುವುದು ಮಾನವೀಯ ಕೆಲಸ ಅಲ್ಲವೇ ಅಲ್ಲ. ಮರಣದಂಡನೆಯು ಇತರ ಎಲ್ಲ ಬಗೆಯ ಶಿಕ್ಷೆಗಳಿಗಿಂತ ಭಿನ್ನ ಎಂಬುದನ್ನು ಸುಪ್ರೀಂ ಕೋರ್ಟ್ ಕೂಡ ಗುರುತಿಸಿದೆ. ಹಾಗಾಗಿಯೇ, ಈ ಶಿಕ್ಷೆಯನ್ನು ಅಪರೂಪದಲ್ಲಿ ಅಪರೂಪದ ಪ್ರಕರಣಗಳಲ್ಲಿ ಮಾತ್ರ ವಿಧಿಸಬೇಕು ಎಂದು ಅದು ಹೇಳಿದೆ.

ನೇಣುಗಂಬಕ್ಕೆ ಏರಿಸಿ ಅಪರಾಧಿಯನ್ನು ಕೊಲ್ಲುವ ಪ್ರಕ್ರಿಯೆಯಲ್ಲಿ ಯಾತನೆಯು ಸಾಧ್ಯವಿರುವಷ್ಟು ಕಡಿಮೆ ಮಟ್ಟದಲ್ಲಿರಬೇಕು ಎಂದು ಕೂಡ ಕೋರ್ಟ್ ಇನ್ನೊಂದು ಪ್ರಕರಣದಲ್ಲಿ ಹೇಳಿದೆ. ಮರಣದಂಡನೆಯನ್ನು ವಿಧಿಸುವ ಪ್ರಕರಣಗಳಲ್ಲಿ ಪರಾಮರ್ಶೆಯು ಅತ್ಯಂತ ಕಠಿಣವಾಗಿ ಆಗಬೇಕು, ಇಂತಹ ಪ್ರಕರಣಗಳಲ್ಲಿ ಮೇಲ್ಮನವಿಗಳ ನಂತರದಲ್ಲಿಯೂ ಪುನರ್ ಪರಿಶೀಲನಾ ಅರ್ಜಿ ಸಲ್ಲಿಕೆಗೆ ಅವಕಾಶಗಳು ಇರಬೇಕು ಎಂದು ಕೂಡ ಕೋರ್ಟ್ ತಾಕೀತು ಮಾಡಿದೆ. ಮರಣದಂಡನೆಯನ್ನು ರದ್ದು ಮಾಡಬೇಕು ಎಂದು ಕೋರಿ ಸಲ್ಲಿಸುವ ಅರ್ಜಿಗಳ ವಿಚಾರದಲ್ಲಿ ಕೋರ್ಟ್ ಬಹಳ ಅನುಕಂಪದ ನಡೆಯನ್ನು ಇರಿಸಿದ್ದಿದೆ. ಮರಣದಂಡನೆ ವಿಚಾರದಲ್ಲಿ ಕೋರ್ಟ್ ಪಾಲಿಸಿಕೊಂಡು ಬಂದಿರುವ ನಿಲುವುಗಳ ಮುಂದುವರಿದ ಭಾಗವಾಗಿ ಈಗ ವ್ಯಕ್ತಪಡಿಸಿರುವ ಕಳಕಳಿಯನ್ನು ಗ್ರಹಿಸಬಹುದು. ಇಂತಹ ಯೋಚನೆಗಳು ಸಹಜವಾಗಿಯೇ, ಮರಣದಂಡನೆಯನ್ನು ಒಪ್ಪದೇ ಇರುವ ಹಂತವನ್ನು ತಲುಪುತ್ತವೆ. ಮರಣದಂಡನೆ ಎಂಬುದು ಬಹಳ ಕ್ರೂರವಾದ ಶಿಕ್ಷೆ. ವ್ಯಕ್ತಿಯನ್ನು ಸಾಯಿಸುವ ಶಿಕ್ಷೆಯನ್ನು ವಿಧಿಸುವುದರ ಹಿಂದೆ ಇರುವುದು ಹಗೆ ತೀರಿಸಿಕೊಳ್ಳುವ ಆಲೋಚನೆ. ಅಪರಾಧ ಹಾಗೂ ಶಿಕ್ಷೆಯ ವಿಚಾರವಾಗಿ ರೂಪುಗೊಂಡಿರುವ ಸುಧಾರಣಾವಾದಿ ಆಲೋಚನೆಗಳಿಗೆ ಇದು ಪೂರಕವಾಗಿಲ್ಲ. ಸಮಾಜ ಹಾಗೂ ಕಾನೂನಿನ ಗುರಿಯು ಅಪರಾಧಿಯಲ್ಲಿ ಸುಧಾರಣೆ ತರುವುದು ಮತ್ತು ಆತನನ್ನು ಮತ್ತೆ ಸಮಾಜದಲ್ಲಿ ಒಂದಾಗಿ ಬದುಕುವುದಕ್ಕೆ ಸೂಕ್ತ ವ್ಯಕ್ತಿಯನ್ನಾಗಿ ಮಾಡುವುದಾಗಿರಬೇಕು. ಹಲವು ದೇಶಗಳು ಮರಣದಂಡನೆಯನ್ನು ರದ್ದು ಮಾಡಿವೆ. ಹಲವು ದೇಶಗಳು ಈ ಶಿಕ್ಷೆಯನ್ನು ರದ್ದು ಮಾಡುವತ್ತ ಹೆಜ್ಜೆ ಇರಿಸಿವೆ. ಸುಪ್ರೀಂ ಕೋರ್ಟ್ ಈಗ ಆಲೋಚಿಸುತ್ತಿರುವ ರೀತಿಯು ಭಾರತದಲ್ಲಿಯೂ ಮುಂದೊಂದು ದಿನ ಮರಣದಂಡನೆ ರದ್ದಾಗುವಂತೆ ಮಾಡಬಹುದು ಎಂದು ಆಶಿಸಬಹುದು.

ದಿನದ ಟ್ವೀಟ್

ತಪ್ಪು ಮಾಡಬಾರದು

ಸಾವರ್ಕರ್ ಬಗೆಗಿನ ಚರ್ಚೆ ಈಗ ಮುಖ್ಯವಲ್ಲ. ಪ್ರಜಾತಂತ್ರವನ್ನು ಉಳಿಸುವುದು ಈಗ ಮುಖ್ಯ. ತನ್ನ ಪಾಲಿಗೆ ಅನುಕೂಲಕರ ಸನ್ನಿವೇಶ ಇರುವಾಗ ಕಾಂಗ್ರೆಸ್ ಪಕ್ಷವು ಜನರ ಗಮನವನ್ನು ಮುಖ್ಯ ವಿಷಯದಿಂದ ಇನ್ನೊಂದೆಡೆ ತಿರುಗಿಸುವ, ಹಾಗೆ ಮಾಡಲು ಬಿಜೆಪಿಗೆ ಒಂದು ಅವಕಾಶ ಕೊಡುವ, ಮಹಾರಾಷ್ಟ್ರದಲ್ಲಿ ತನ್ನ ಗಟ್ಟಿ ಮಿತ್ರಪಕ್ಷವಾದ ಶಿವಸೇನೆಯನ್ನು ದೂರವಾಗಿಸಿಕೊಳ್ಳುವ ತಪ್ಪುಗಳನ್ನು ಮಾಡಬಾರದು.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

ಕಿಡಿನುಡಿ

18-19-20 ವರ್ಷ ವಯಸ್ಸಿನ ಗಂಡು ಮಕ್ಕಳಿರುವ ಅಪ್ಪಅಮ್ಮಂದಿರೇ, ಹುಷಾರ್! ಮನೆಹಾಳ ಭ್ರಷ್ಟ ರಾಜಕಾರಣಿಗಳು, ಅವರ ಪುಂಡಪೋಕರಿ ಚೇಲಾಗಳು ಈ ಚುನಾವಣೆ ಸಮಯದಲ್ಲಿ ಈ ವಯಸ್ಸಿನ ಹುಡುಗರನ್ನು ಕರೆದುಕೊಂಡು ಹೋಗಿ 'ತೀರ್ಥದೀಕ್ಷೆ' ಕೊಡುತ್ತಾರೆ. ಅವರಿಗೆ ಚುನಾವಣಾ ಪ್ರಚಾರಕ್ಕೆ ಜನ ಬೇಕು. ಗಾಡಿಗೆ ಐನೂರು, Bodyಗೆ ಐನೂರು. ಇದು 'ತೀರ್ಥದೀಕ್ಷೆ' ಕಾಲ. ಎಚ್ಚರ.

ರವಿ ಕೃಷ್ಣಾ ರೆಡ್ಡಿ
ಅಧ್ಯಕ್ಷ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ

50 ವರ್ಷಗಳ ಹಿಂದೆ

ಶುಕ್ರವಾರ, 30-3-1973

• ಪಾಕಿಸ್ತಾನಕ್ಕೆ ಚೀನಾದ ಕ್ಷಿಪಣಿಸಜ್ಜಿತ ನೌಕೆಗಳು

ನವದೆಹಲಿ, ಮಾರ್ಚ್ 29– ಚೀನಾವು ಪಾಕಿಸ್ತಾನಕ್ಕೆ ಕ್ಷಿಪಣಿಗಳನ್ನು ಜೋಡಿಸಿರುವ ಮಿಲಿಟರಿ ನೌಕೆಗಳನ್ನು ಒದಗಿಸುವುದಾಗಿ ತಿಳಿದುಬಂದಿದೆಯೆಂದು ವಿದೇಶಾಂಗ ಖಾತೆ ಸಚಿವ ಸ್ವರಣ್‌ಸಿಂಗ್ ಅವರು ಇಂದು ಲೋಕಸಭೆಯಲ್ಲಿ ಹೇಳಿದರು.

ಅಂಥ ಎಷ್ಟು ನೌಕೆಗಳನ್ನು ಪಾಕಿಸ್ತಾನಕ್ಕೆ ನೀಡಲಾಗಿದೆ ಎಂಬುದು ಖಚಿತವಾಗಿ ಗೊತ್ತಿಲ್ಲ.

ಜನಸಂಘದ ಅಟಲ್ ಬಿಹಾರಿ ವಾಜಪೇಯಿ ಮತ್ತಿತರ ನಾಲ್ವರು ಸದಸ್ಯರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡುತ್ತಿದ್ದ ಅವರು 'ಕೊಮರ್' ಕ್ಷಿಪಣಿಗಳನ್ನು ಜೋಡಿಸಿದ ನೌಕೆಗಳನ್ನು ರಷ್ಯಾವು ಪಾಕಿಸ್ತಾನಕ್ಕೆ ಒದಗಿಸಿದೆಯೆಂಬುದನ್ನು ಸ್ಪಷ್ಟವಾಗಿ ನಿರಾಕರಿಸಿದರು.

ರಷ್ಯಾ ನೌಕೆಗಳನ್ನು ಒದಗಿಸಿರುವುದೆಂಬ ಸುದ್ದಿಗೆ ಆಧಾರ ಇಲ್ಲವೆಂದು ತಿಳಿಸಿದ ವಿದೇಶಾಂಗ ಸಚಿವರು, ಆ ಬಗ್ಗೆ ರಷ್ಯಾದ ರಾಯಭಾರ ಕಚೇರಿಯಲ್ಲಿ ಈಗಾಗಲೇ ವಿಚಾರಿಸಲಾಗಿದೆ ಎಂದರು.

• ಭಾರತದ ಜತೆ ಬಾಂಧವ್ಯ ಸುಧಾರಣೆ, ಬಾಂಗ್ಲಾದೇಶ ಮಾನ್ಯತೆಗೆ ಭುಟ್ಟೊ ಬಯಕೆ

ನವದೆಹಲಿ, ಮಾರ್ಚ್ 29– ಭಾರತ-ಪಾಕಿಸ್ತಾನ ಬಾಂಧವ್ಯದಲ್ಲಿನ ಬಿಕ್ಕಟ್ಟನ್ನು 'ಮುರಿಯಬೇಕು' ಎಂದು ಪಾಕಿಸ್ತಾನದ ಅಧ್ಯಕ್ಷ ಭುಟ್ಟೊ ಅವರು ಇಂದು ರಾತ್ರಿ ಹೇಳಿದರು.

ತಮ್ಮ ರಾಷ್ಟ್ರವನ್ನು ಉದ್ದೇಶಿಸಿ ಪ್ರಸಾರಭಾಷಣ ಮಾಡಿದ ಭುಟ್ಟೊ ಅವರು, ಉಭಯ ರಾಷ್ಟ್ರಗಳ ನಡುವಣ ಬಾಂಧವ್ಯವನ್ನು ಕಾಡುತ್ತಿರುವ ತೊಂದರೆಗಳನ್ನು 'ದಾಟಲಾಗುತ್ತದೆ' ಎಂದು ತಾವು ನಂಬಿರುವುದಾಗಿ ತಿಳಿಸಿದರು.

'ಪಾಕಿಸ್ತಾನದ ಹಿತದೃಷ್ಟಿಯಿಂದ ಪಾಕಿಸ್ತಾನದ ಹೆಸರಿನಲ್ಲಿ ಅವುಗಳನ್ನು ದಾಟಬೇಕು' ಎಂದರವರು.

ಬಾಂಗ್ಲಾದೇಶವನ್ನು ಅವರು ಪ್ರಸ್ತಾಪಿಸಿ, ಸ್ವತಃ ತಾವು ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡಲು ಇಚ್ಛಿಸುತ್ತಿದ್ದುದಾಗಿ ಅವರು ಹೇಳಿದರು. 'ಆದರೆ ಬಾಂಗ್ಲಾದೇಶಕ್ಕೆ ಮಾನ್ಯತೆ ಕೂಡದು ಎಂದು ವಿರೋಧ ಪಕ್ಷಗಳು ಹೇಳುತ್ತಿವೆ' ಎಂದರು.

• ಆಕ್ಟ್ರಾಯಿ ರದ್ದಿಗೆ ಆಗ್ರಹ

ಬೆಂಗಳೂರು, ಮಾರ್ಚ್ 29– ಆಕ್ಟ್ರಾಯಿ ಸುಂಕ ಕಂದಾಚಾರದ ಪದ್ಧತಿಯಾಗಿದ್ದು ಅದರಿಂದ ಸೋರಿಹೋಗುವ ವರಮಾನವೇ ಹೆಚ್ಚಾಗಿದೆಯೆಂದು ಇಂದು ವಿಧಾನಸಭೆಯಲ್ಲಿ ಸದಸ್ಯರು ಟೀಕಿಸಿ ಅದನ್ನು ತತ್‌ಕ್ಷಣ ರದ್ದು ಮಾಡಲು ಆಗ್ರಹಪಡಿಸಿದರು.

ಪೌರಾಡಳಿತ ಬಾಬಿನ ಬೇಡಿಕೆಗಳ ಚರ್ಚೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಸದಸ್ಯ ಶ್ರೀ ಕೆ.ಪುಟ್ಟಸ್ವಾಮಿ ಅವರು ಪುರಸಭೆಗಳನ್ನು ರದ್ದು ಮಾಡಿ ಆಡಳಿತಾಧಿಕಾರಿಗಳನ್ನು ನೇಮಿಸುವುದು ಜನತಂತ್ರ ವಿರೋಧಿ ಕ್ರಮ ಎಂದು ಕಟುವಾಗಿ ಟೀಕಿಸಿದರು.

ಮತದಾರರು ಮಲಗಿದ್ದರೆ ಭಿಕ್ಷುಕರು, ಎಚ್ಚರವಾಗಿದ್ದರೆ ಪ್ರಭುಗಳು

ಚುನಾವಣಾ ಕಾಲೇ ವಿಪರೀತ ಬುದ್ಧಿ!

ಅನುಸಂಧಾನ

ರವೀಂದ್ರ ಭಟ್ಟ

ಚುನಾವಣಾ ಕಾಲೇ ವಿಪರೀತ ಬುದ್ಧಿ. ಅದು ಬಸವರಾಜ ಬೊಮ್ಮಾಯಿ ಇರಲಿ, ಸಿದ್ದರಾಮಯ್ಯ ಇರಲಿ, ವೀರಪ್ಪ ಮೊಯಿಲಿ ಇರಲಿ ಎಲ್ಲರಿಗೂ ಅಧಿಕಾರ ಅವಧಿಯ ಕೊನೆಯ ಕಾಲದಲ್ಲಿ ಅವಸರ. ಅಧಿಕಾರದಲ್ಲಿ ಇರುವ ಸರ್ಕಾರಗಳಿಗೆ ಕೊನೆಯ ಗಳಿಗೆಯಲ್ಲಿಯೇ ಮಹತ್ವದ್ದು ನೆನಪಾಗುತ್ತದೆ. ಅವಸರವೇ ಅಪಘಾತಕ್ಕೆ ಕಾರಣ ಎನ್ನುವುದು ನಮ್ಮ ನಾಯಕರಿಗೆ ಗೊತ್ತಿದ್ದರೂ ಅವಸರ ಮಾಡಿ ಎಡವಿ ಬೀಳುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಅದೊಂದು ಚಾಳಿಯೇ ಆಗಿಬಿಟ್ಟಿದೆ.

ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಬಹಳಷ್ಟು ಅವಕಾಶಗಳಿದ್ದವು. ವಿದ್ಯಾನಿಧಿಯಂತಹ ಯೋಜನೆಗಳನ್ನು ಜಾರಿಗೊಳಿಸಿದ್ದರು. ಬಹುಜನಪ್ರಿಯ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವರ್ಚಸ್ಸು ಜೊತೆಗಿದೆ. ಚುನಾವಣಾ ಚಾಣಾಕ್ಷ ಅಮಿತ್ ಶಾ ಅವರ ಬೆಂಬಲವೂ ಇದೆ. ಸಕ್ರಿಯ ಕಾರ್ಯಕರ್ತರ ಪಡೆಯೂ ಇದೆ. ಆದರೂ ಅವರು ಅವಸರದಲ್ಲಿ ಮೀಸಲಾತಿ ಎಂಬ ಜೇನುಗೂಡಿಗೆ ಕೈಹಾಕಿಬಿಟ್ಟರು. 'ಜೇನುಗೂಡಿಗೆ ಕೈಹಾಕಿ ಕೈಕಚ್ಚಿಸಿಕೊಂಡಿದ್ದೇನೆ. ಆದರೂ ನಾನು ಸಿಹಿಯನ್ನೇ ಹಂಚಿದ್ದೇನೆ' ಎಂದು ಅವರು ಬಾಯಿಮಾತಿಗೆ ಹೇಳಿಕೊಂಡರೂ ಜೇನು ಕಚ್ಚಿದ ಉರಿ ಜೋರಾಗಿಯೇ ಇದೆ. ಜೇನು ರಟ್ಟಿನಲ್ಲಿ ಸಿಹಿ ಕಾಣೆಯಾಗಿದೆ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಎಂಬ ಜೇನುಗೂಡಿಗೆ ಕೈ ಹಾಕಿದವರೆಲ್ಲಾ ಕೈಸುಟ್ಟುಕೊಂಡಿದ್ದೇ ಹೆಚ್ಚು.

ಅವರು ಒಂದೆಡೆ, ಸದಾಶಿವ ಆಯೋಗದ ವರದಿಯನ್ನು ತಾವು ಸ್ವೀಕರಿಸಿಲ್ಲ ಎನ್ನುತ್ತಾರೆ. ಇನ್ನೊಂದೆಡೆ, ಒಳಮೀಸಲಾತಿಯನ್ನೂ ಜಾರಿ ಮಾಡುವುದಾಗಿ ಪ್ರಕಟಿಸಿದ್ದಾರೆ. ಈ ಕ್ರಮಕ್ಕೆ ಆಧಾರ ಏನು ಎನ್ನುವುದನ್ನು ಇನ್ನೂ ಸ್ಪಷ್ಟ ಮಾಡಿಲ್ಲ. ಒಕ್ಕಲಿಗರಿಗೆ, ಲಿಂಗಾಯತರಿಗೆ ತಲಾ ಶೇ 2ರಷ್ಟು ಹೆಚ್ಚುವರಿ ಮೀಸಲಾತಿ ಪ್ರಕಟಿಸಿದ್ದಾರೆ. ಇದಕ್ಕೂ ಯಾವುದೇ ಅಧ್ಯಯನದ ಬೆಂಬಲ ಇದ್ದಂತಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದ್ದ ಸರ್ಕಾರ ಒಳಮೀಸಲಾತಿಗೂ ಅನುಮೋದನೆ ನೀಡುವ ಮೂಲಕ ಹೊಸ ವಿವಾದವನ್ನು ಮೈಮೇಲೆ ಎಳೆದುಕೊಂಡಿತು. ಇಡಬ್ಲ್ಯುಎಸ್ ಮೀಸಲಾತಿಯಂತೂ ಫುಟ್ಬಾಲ್ ಅಂತಾಯಿತು.

ಇಡಬ್ಲ್ಯುಎಸ್ ವರ್ಗದ ಶೇ 10 ಮೀಸಲಾತಿಯನ್ನು ವಿಭಜಿಸಿ ಶೇ 4ರಷ್ಟನ್ನು ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೂ ಶೇ 3ರಷ್ಟನ್ನು ಒಕ್ಕಲಿಗರಿಗೂ ನೀಡುವುದಾಗಿ ಪ್ರಕಟಿಸಿತು. ಆದರೆ ಪಂಚಮಸಾಲಿಗರ ಹೋರಾಟ ನಿಲ್ಲದೇ ಇದ್ದುದರಿಂದ ಮತ್ತೆ ನಿರ್ಧಾರವನ್ನು ಬದಲಿಸಿದ ಸರ್ಕಾರ 2ಬಿ ಗುಂಪಿನಲ್ಲಿದ್ದ ಮುಸ್ಲಿಮರನ್ನು ಹೊರಕ್ಕೆ ಹಾಕಿ ಅವರಿಗೆ ನೀಡಲಾಗುತ್ತಿದ್ದ ಶೇ 4ರ ಮೀಸಲಾತಿಯನ್ನು ಮತ್ತೆ ವಿಭಜಿಸಿ ತಲಾ ಶೇ 2ರಂತೆ ಒಕ್ಕಲಿಗರು ಮತ್ತು ಲಿಂಗಾಯತರಿಗೆ ಹಂಚಲಾಯಿತು. ಹೀಗೆ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಹಂಚಿಕೆ ಮಾಡುವುದಕ್ಕೆ ಯಾವುದೇ ವೈಜ್ಞಾನಿಕ ಸಮೀಕ್ಷೆಗಳ ಆಧಾರವೇ ಇರಲಿಲ್ಲ. ಒಟ್ಟಾರೆ ಸಂತೆಗೆ ಮೂರು ಮೊಳ ನೇಯುವ ತರಾತುರಿಯೇ ಇತ್ತು. ಚುನಾವಣೆ ಸಂದರ್ಭದಲ್ಲಿ ಒಂದೆಡೆ ಲಂಬಾಣಿ, ಕೊರಚ, ಕೊರಮ ಜನಾಂಗದವರು, ಇನ್ನೊಂದೆಡೆ ಮುಸ್ಲಿಮರು ಹೋರಾಟದ ಹಾದಿ ಹಿಡಿದಿದ್ದಾರೆ. ಒಕ್ಕಲಿಗರು, ಲಿಂಗಾಯತರನ್ನು ಸಮಾಧಾನ ಮಾಡಲು ಹೋಗಿ ಇತರ ಜನಾಂಗದವರನ್ನು ಹೋರಾಟಕ್ಕೆ ಹಚ್ಚಿದ್ದೇ ಸಾಧನೆಯಾಯಿತು.

2ಬಿಯಲ್ಲಿದ್ದ ಮುಸ್ಲಿಮರನ್ನು ಇಡಬ್ಲ್ಯುಎಸ್‌ಗೆ ಸೇರಿಸಿದ ಕ್ರಮವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಹಿರಂಗವಾಗಿಯೇ ಮೆಚ್ಚಿಕೊಂಡರು. ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶವೇ ಇಲ್ಲ ಎಂದು ಹೇಳಿದರು. ಆದರೆ ಮುಸ್ಲಿಮರಿಗೆ ಮೀಸಲಾತಿ ನೀಡಿದ್ದು ಅವರು ಹಿಂದುಳಿದವರು ಎನ್ನುವ ಕಾರಣಕ್ಕಾಗಿಯೇ ವಿನಾ ಧರ್ಮದ ಆಧಾರದಲ್ಲಿ ಅಲ್ಲ ಎನ್ನುವುದನ್ನು ಅವರು ಮರೆತೇಬಿಟ್ಟರು. ಜೊತೆಗೆ ಇತರ ಧಾರ್ಮಿಕ ಅಲ್ಪಸಂಖ್ಯಾತರಾದ ಕ್ರೈಸ್ತರು, ಜೈನರು, ಸಿಖ್ಖರು ಮತ್ತು ಬೌದ್ಧರ ಬಗ್ಗೆ ಮಾತೇ ಇಲ್ಲ. ಇವೆಲ್ಲ ಏನನ್ನು ಸೂಚಿಸುತ್ತವೆ? ಒಂದು ನಿರ್ದಿಷ್ಟ ಧರ್ಮದವರ ವಿರುದ್ಧ ಸಾರಿರುವ ಯುದ್ಧದ ಮುಂದುವರಿದ ಭಾಗ ಎಂದೇ ಅನ್ನಿಸುತ್ತದೆ.

ಚುನಾವಣಾ ಕಾಲದಲ್ಲಿ ವಿಪರೀತ ಬುದ್ಧಿಯನ್ನು ಪ್ರದರ್ಶಿಸುವುದು ಬಸವರಾಜ ಬೊಮ್ಮಾಯಿ ಅವರಿಂದ ಆರಂಭವಾಗಿಲ್ಲ. ಈ ಹಿಂದೆ ಸಿದ್ದರಾಮಯ್ಯ ಅವರೂ ಇಂತಹದೇ ತಪ್ಪು ಮಾಡಿದ್ದರು. ಲಿಂಗಾಯತ ಪ್ರತ್ಯೇಕ ಧರ್ಮದ ಬಗ್ಗೆ ಅಧ್ಯಯನ ನಡೆಸಲು ನ್ಯಾ.ನಾಗಮೋಹನ ದಾಸ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. 6 ತಿಂಗಳ ಕಾಲಾವಕಾಶವನ್ನೂ ನೀಡಲಾಗಿತ್ತು. ಆದರೆ ಮೂರು ತಿಂಗಳಿನಲ್ಲಿಯೇ ವರದಿ ಪಡೆದು ಕೇಂದ್ರಕ್ಕೆ ಶಿಫಾರಸು ಮಾಡಲಾಯಿತು. ಅದು ಕೂಡ ನಡೆದಿದ್ದು ಚುನಾವಣೆ ಇನ್ನೇನು ಘೋಷಣೆಯಾಗುತ್ತದೆ ಎನ್ನುವ ಹೊತ್ತಿನಲ್ಲಿಯೆ. ಕನ್ನಡಕ್ಕೆ ಪ್ರತ್ಯೇಕ ಬಾವುಟದ ಪ್ರಸ್ತಾಪವೂ ಇದೇ ಕಾಲದಲ್ಲಿಯೇ ಹೊರಬಿತ್ತು. 2018ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸೋಲಿಗೆ ಇವೂ ಕಾರಣವಾದವು.

ಸಿದ್ದರಾಮಯ್ಯ ಕೂಡ ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ಹಲವಾರು ಭಾಗ್ಯಗಳನ್ನು ನೀಡಿದ್ದರು. ರಾಜ್ಯದಲ್ಲಿ ಆರ್ಥಿಕ ಶಿಸ್ತು ಕಾಪಾಡಿಕೊಂಡಿದ್ದರು. ಆದರೂ ಚುನಾವಣೆಯ ಹೊಸ್ತಿಲಿನಲ್ಲಿ ಎಡವಿಬಿದ್ದರು. 90ರ ದಶಕದಲ್ಲಿ ವೀರಪ್ಪ ಮೊಯಿಲಿ ಅವರು ಇಂತಹದೇ ಸಾಹಸಕ್ಕೆ ಕೈ ಹಾಕಿದ್ದರು. ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ಅನುಷ್ಠಾನಗೊಳಿಸುವುದಾಗಿ ಪ್ರಕಟಿಸಿದ್ದರು. ಇದರ ವಿರುದ್ಧ ಒಕ್ಕಲಿಗರು ತಿರುಗಿಬಿದ್ದರು. ವಿಧಾನಸೌಧದ ಮುಂದೆ ಲಕ್ಷಾಂತರ ಜನರನ್ನು ಸೇರಿಸಿ ಎಚ್.ಡಿ.ದೇವೇಗೌಡರು ಪ್ರತಿಭಟನೆ ನಡೆಸಿದರು. ಈ ಹೋರಾಟದಿಂದಾಗಿಯೇ ದೇವೇಗೌಡರು ಒಕ್ಕಲಿಗರ ಕಣ್ಮಣಿಯಾಗಿಬಿಟ್ಟರು. 1994ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ದೂಳೀಪಟವಾಯಿತು.

ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆ ರಾಜಕೀಯ ಪಕ್ಷಗಳು ನಡೆಸುವ ಕಾರ್ಯತಂತ್ರಗಳಲ್ಲಿ ಆಗುವ ಬದಲಾವಣೆಯನ್ನೂ ನಾವು ನೋಡಬಹುದು. ಹಿಂದೆಲ್ಲಾ ಚುನಾವಣೆ ಬಂತೆಂದರೆ ಶಿಲಾನ್ಯಾಸಗಳು ಹೆಚ್ಚಾಗುತ್ತಿದ್ದವು. ಉದ್ಘಾಟನೆಗಳಿಗೂ ಪೈಪೋಟಿ ಇರುತ್ತಿತ್ತು. ನಂತರ ಅದು ಜಾತಿಗಳನ್ನು ಒಡೆಯುವ, ಜಾತಿಗಳ ನಡುವೆ ಪೈಪೋಟಿ ಒಡ್ಡುವ ಹಂತಕ್ಕೆ ಬಂತು. ಈಗ ಧರ್ಮಗಳ ನಡುವೆ ಕಿಚ್ಚು ಹಚ್ಚುವ ಹಂತಕ್ಕೆ ಬಂದಿದೆ. ರಾಜಕಾರಣದಲ್ಲಿ ಧರ್ಮಕಾರಣ ಬಂದು ಬಹಳ ದಿನಗಳೇ ಆಗಿವೆ. ಅಲ್ಲೊಬ್ಬ ಇಲ್ಲೊಬ್ಬ ಅಭ್ಯರ್ಥಿ ತಮಗೆ ಮುಸ್ಲಿಂ ಮತದಾರರ ಮತಗಳು ಬೇಡವೇ ಬೇಡ ಎಂದು ಬಹಿರಂಗವಾಗಿ ಹೇಳಿಕೆ ನೀಡುತ್ತಿದ್ದರು. ಆದರೆ ಈಗ ಸರ್ಕಾರ ನಡೆಸುವ ಪಕ್ಷವೇ ಅಧಿಕೃತವಾಗಿ ತಮಗೆ ಮುಸ್ಲಿಂ ಮತ ಬೇಡ ಎಂದು ಘಂಟಾಘೋಷವಾಗಿ ಹೇಳುವಂತೆ ನಡೆದುಕೊಂಡಿದೆ.

ಇತ್ತೀಚೆಗೆ ನಮ್ಮನ್ನು ಅಗಲಿದ ಸಿದ್ಧೇಶ್ವರ ಸ್ವಾಮೀಜಿ ಅವರು ತಮ್ಮ ಉಪನ್ಯಾಸದಲ್ಲಿ ಒಂದು ಕತೆ ಹೇಳುತ್ತಿದ್ದರು. 'ಒಬ್ಬ ರಾಜನಿದ್ದನಂತೆ. ಅವನಿಗೆ ರಾತ್ರಿ ಕನಸೊಂದು ಬಿತ್ತು. ಕನಸಿನಲ್ಲಿ ಆತ ಶತ್ರು ಸೈನ್ಯದಿಂದ ಸೋತುಹೋದ. ಸಂಪೂರ್ಣ ಭಿಕ್ಷುಕನಾಗಿಬಿಟ್ಟ. ಭಿಕ್ಷೆ ಬೇಡುವ ಹಂತದಲ್ಲಿಯೇ ಅವನಿಗೆ ಎಚ್ಚರವಾಯಿತು. ಪಕ್ಕದಲ್ಲಿಯೇ ಇದ್ದ ಮಹಾರಾಣಿಗೆ, 'ನಾನು ಈಗ ಮಹಾರಾಜನಾ ಅಥವಾ ಭಿಕ್ಷುಕನಾ' ಎಂದು ಕೇಳಿದ. 'ನೀನು ಮಹಾರಾಜ' ಎಂದಳು ರಾಣಿ. 'ಕನಸಿನಲ್ಲಿ ಭಿಕ್ಷುಕನಾಗಿದ್ದು ನಾನೇ ಅಲ್ಲವಾ' ಎಂದು ಕೇಳಿದ ರಾಜ. 'ಹೌದು ನೀವೇ. ಆದರೆ ನೀವೀಗ ಮಹಾರಾಜರು' ಎಂದಳು ರಾಣಿ. 'ಇಲ್ಲ ನಾನು ಭಿಕ್ಷುಕ. ಮಹಾರಾಜನಾಗಿರುವುದೇ ಕನಸಾಗಿರಬಹುದು' ಎಂದನಂತೆ. ರಾಜನಿಗೆ ಅದೊಂದು ಮನೋರೋಗವೇ ಆಯಿತು. ಯಾರು ಸಿಕ್ಕರೂ 'ನಾನು ಮಹಾರಾಜನಾ, ಭಿಕ್ಷುಕನಾ' ಎಂದು ಕೇಳುತ್ತಿದ್ದನಂತೆ. ಮಂತ್ರಿಗಳಿಗೆ ತಲೆಕೆಟ್ಟು ಹೋಯಿತು. ಒಂದು ದಿನ ಆ ರಾಜ್ಯಕ್ಕೆ ಒಬ್ಬ ಯತಿ ಬಂದ. ಅವನಲ್ಲಿ ರಾಜ ತನ್ನ ಸಮಸ್ಯೆ ಹೇಳಿಕೊಂಡ. ಅದಕ್ಕೆ ಆ ಯತಿ 'ನೀನು ಮಲಗಿದ್ದಾಗ ರಾಜನಲ್ಲ, ಎಚ್ಚರವಾಗಿದ್ದಾಗ ಭಿಕ್ಷುಕನಲ್ಲ' ಎಂದು ಉತ್ತರಿಸಿದ.

ಈಗ ಕರ್ನಾಟಕದ ಮತದಾರರ ಕತೆಯೂ ಹೀಗೆಯೇ ಇದೆ. ಪ್ರಭುಗಳಾ ಭಿಕ್ಷುಕರಾ ಗೊತ್ತಾಗುತ್ತಿಲ್ಲ. ಪ್ರಜಾಪ್ರಭುತ್ವದ ಹಬ್ಬವೇ ಆಗಿರುವ ಚುನಾವಣೆ ಸಂದರ್ಭದಲ್ಲಿ ಮತದಾರರು ಮಲಗಿದ್ದರೆ ಅವರು ರಾಜರಾಗುವುದಿಲ್ಲ. ಎಚ್ಚರವಾಗಿದ್ದರೆ ಭಿಕ್ಷುಕರೂ ಅಲ್ಲ. ಎಚ್ಚರವಾಗಿ ಪ್ರಭುವಾಗಿರಬೇಕೋ ಮಲಗಿ ಭಿಕ್ಷುಕರಾಗಬೇಕೋ ಪ್ರಜೆಗಳೇ ನಿರ್ಧರಿಸಬೇಕು.

ಚುರುಮುರಿ



ಕಸಾಪ ಕ್ಲಾಸ್

• ಸಿ.ಎನ್.ರಾಜು

'ಅನು, ಬೇಗ ತಿಂಡಿ ಕೊಡು, ಕಸಾಪ ಕ್ಲಾಸಿಗೆ ಹೋಗಲು ತಡವಾಗುತ್ತೆ...' ಎಂದ ಗಿರಿ.

'ಹೌದೂರಿ, ಬೆಲ್ ಹೊಡೆಯುವ ಕಾಲು ಗಂಟೆ ಮೊದಲೇ ತರಗತಿಯಲ್ಲಿರಬೇಕು, ತಡವಾಗಿ ಹೋದರೆ ಟೀಚರ್ ಕ್ಲಾಸಿಗೆ ಸೇರಿಸಲ್ಲ' ಎನ್ನುತ್ತಾ ಅನು ತಿಂಡಿ ತಂದುಕೊಟ್ಟಳು.

'ನೀನು ಹೇಳಿದಂತೆ ನೀಟಾಗಿ ಶೇವ್ ಮಾಡಿಕೊಂಡು, ಕ್ರಾಪ್ ತೆಗೆದು ತಲೆ ಬಾಚಿಕೊಂಡಿದ್ದೇನೆ. ಸಾಂಪ್ರದಾಯಿಕ ಉಡುಪು ಧರಿಸಿದ್ದೇನೆ'.

'ವೆರಿಗುಡ್, ಕಸಾಪ ಕ್ಲಾಸಿಗೆ ವಿಕಾರವಾಗಿ ಗಡ್ಡ ಬೆಳೆಸಿಕೊಂಡು, ತಲೆ ಕೆದರಿಕೊಂಡು ಹೋಗಬಾರದು. ಶಿಸ್ತು, ಸಭ್ಯತೆ ಪಾಲಿಸಬೇಕು. ಕ್ಲಾಸಿನಲ್ಲಿ ಗಲಾಟೆ ಮಾಡಬೇಡಿ, ಟೀಚರ್ ತುಂಬಾ ಸ್ಟ್ರಿಕ್ಟ್, ಕ್ಲಾಸಿನಿಂದ ಆಚೆ ಕಳಿಸಿಬಿಡ್ತಾರೆ'. ಗಿರಿ ತಲೆಯಾಡಿಸಿದ.

'ಕ್ಲಾಸಿನಲ್ಲಿ ಏರಿದ ದನಿಯಲ್ಲಿ ಮಾತನಾಡುವಂತಿಲ್ಲ, ಟೀಚರ್ ಏರಿದ ದನಿಯಲ್ಲಿ ಮಾತನಾಡಿದರೂ ನೀವು ತಾಳ್ಮೆ ಕಳೆದುಕೊಳ್ಳದೆ ಸಹಿಸಿಕೊಳ್ಳಬೇಕು. ಅನಗತ್ಯ ಪಾಂಡಿತ್ಯ ಪ್ರದರ್ಶಿಸಲು ಹೋಗಬೇಡಿ, ಸಿಲೆಬಸ್ ವ್ಯಾಪ್ತಿ ಮೀರಿದ ಯಾವುದೇ ವಿಚಾರ ಮಾತನಾಡಬೇಡಿ. ಏನಾದರೂ ಹೇಳುವುದಿದ್ದರೆ ಮೊದಲೇ ಚೀಟಿ ಬರೆದುಕೊಟ್ಟು ಟೀಚರ್ ಅನುಮತಿ ಪಡೆಯಬೇಕು, ಅವರು ಅನುಮತಿ ಕೊಡದಿದ್ದರೆ ತೆಪ್ಪಗಿರಬೇಕು. ಗೊತ್ತಾಯ್ತೇನ್ರೀ?...' ಗಿರಿ ಮತ್ತೊಮ್ಮೆ ತಲೆಯಾಡಿಸಿದ.

'ಟೀಚರ್‌ಗೆ ಒಬಿಡಿಯಂಟಾಗಿ ನಡೆದುಕೊಂಡು ಅವರಿಗೆ, ಸಂಸ್ಥೆಗೆ ಒಳ್ಳೆ ಹೆಸರು ತರಬೇಕು. ಕ್ಲಾಸಿನಲ್ಲಿ ನಡೆಯುವ ಯಾವುದೇ ವಿಚಾರಗಳನ್ನು ಮಾಧ್ಯಮದವರ ಮುಂದೆ, ಸಾಮಾಜಿಕ ಮಾಧ್ಯಮದಲ್ಲಿ ಪ್ರಸ್ತಾಪಿಸಬಾರದು'.

'ಕ್ಲಾಸಿನ ಕಟ್ಟುಪಾಡುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇನೆ... ಅಸೆಂಬ್ಲಿ, ಪಾರ್ಲಿಮೆಂಟಿನಲ್ಲೂ ಇದೇ ರೀತಿಯ ಶಿಸ್ತು, ಸಭ್ಯತೆಯ ನಿಯಮ ಪಾಲನೆಯಾದರೆ ನಮ್ಮ ರಾಜ್ಯ ಮಾದರಿ ರಾಜ್ಯವಾಗಿ ಪ್ರಜೆಗಳು ಕ್ಷೇಮದಿಂದಿರುತ್ತಾರೆ...' ಎನ್ನುತ್ತಾ ಗಿರಿ ಹೊರಟ.

'ರೀ, ಕ್ಲಾಸಿನಲ್ಲಿ ನೆಟ್ಟಗೆ ಮಾತನಾಡಿ, ಉಚ್ಚಾರಣೆ ಸ್ಪಷ್ಟವಾಗಿರಲಿ, ಸರಳ, ಸಭ್ಯ, ಸಹನೀಯ ಪದಗಳನ್ನು ಬಳಸಿ. ಕೆರಳಿಸುವ, ನರಳಿಸುವ ಮಾತುಗಳನ್ನಾಡಬೇಡಿ...' ಎಂದು ಅನು ಮತ್ತೊಮ್ಮೆ ಎಚ್ಚರಿಸಿದಳು.

ಸಂಗತ

ಇನ್‌ಪುಟ್ ತೆರಿಗೆ: ಗೊಂದಲದ ಕಡೆಗೆ?

ಈ ತೆರಿಗೆ ಸೌಲಭ್ಯ ಇರುವುದು ನಾವು ಮಾಡುವ ವ್ಯಾಪಾರ ವಹಿವಾಟು, ಸೇವೆಗೆ ಮಾತ್ರ. ಅದನ್ನು ಸ್ವಂತಕ್ಕೆ ಬಳಸಿಕೊಂಡರೆ ಬಡ್ಡಿ ಮತ್ತು ದಂಡದ ಸಮೇತ ಪಾವತಿಸಬೇಕಾಗುತ್ತದೆ

• ವಿನೋದಾ ಪ್ರಭಾಕರ್

ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಎಂಬುದು 'ಒಂದು ದೇಶ ಒಂದು ತೆರಿಗೆ' ಎಂಬ ಘೋಷವಾಕ್ಯದೊಂದಿಗೆ 2017ರ ಜುಲೈ 1ರಂದು ಜಾರಿಯಾದ ಪರೋಕ್ಷ ತೆರಿಗೆ ಪದ್ಧತಿ. ಅದು ಇಂದಿನವರೆಗೂ ಶ್ರೀಸಾಮಾನ್ಯನಿಗೆ ಸಂಪೂರ್ಣವಾಗಿ ಅರ್ಥವಾಗಿಲ್ಲ ಎಂಬುದು ಸರಳ ಸತ್ಯ. ಸರಕು ಮತ್ತು ಸೇವಾ ತೆರಿಗೆ ಜಾರಿಗೆ ಬಂದು ಐದೂವರೆ ವರ್ಷಗಳಾಗಿದ್ದರೂ ಇದುವರೆಗೆ 49 ಜಿಎಸ್‌ಟಿ ಮಂಡಳಿ ಸಭೆಗಳು ನಡೆದಿದ್ದರೂ ಜನರಲ್ಲಿ ಈ ತೆರಿಗೆ ಪದ್ಧತಿಯ ಬಗ್ಗೆ ಅನೇಕ ಗೊಂದಲಗಳಿವೆ.

ದೇಶದಲ್ಲಿ ಇಂದಿಗೂ ತೆರಿಗೆ ಎಂದರೆ ಮಾರುದೂರ ಹೋಗುವವರೇ ಹೆಚ್ಚು. ಕಾರಣ, ತೆರಿಗೆ ವಿಷಯದ ಬಗ್ಗೆ ನಮಗಿರುವ ಪೂರ್ವಗ್ರಹ, ಭಯ, ಇದು ನಮಗೆ ಅರ್ಥವಾಗುವ ವಿಷಯವಲ್ಲ ಎನ್ನುವ ಮನೋಭಾವ. ನಾವೂ ಪರೋಕ್ಷ ತೆರಿಗೆಯ ಮೂಲಕ ದೇಶದ ಅಭಿವೃದ್ಧಿಯಲ್ಲಿ ಪಾಲುದಾರರು ಎನ್ನುವ ಸತ್ಯ ಕೂಡ ಅನೇಕ ಮಂದಿಗೆ ತಿಳಿದಿರುವುದಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ನೇರ ಮತ್ತು ಪರೋಕ್ಷ ತೆರಿಗೆಯನ್ನು ಒಂದೇ ತಕ್ಕಡಿಯಲ್ಲಿ ಹಾಕಿ ತೂಗಿಬಿಡುವ ಮಂದಿಯೂ ಬಹಳಷ್ಟಿದ್ದಾರೆ.

ಒಂದು ವಿಷಯವನ್ನು ನಾವು ಸ್ಪಷ್ಟವಾಗಿ ತಿಳಿಯಬೇಕು. ಅದೆಂದರೆ, ನಾವು ಕೊಳ್ಳುವ ಐದು ರೂಪಾಯಿಯ ಚಾಕೊಲೇಟ್‌ನಿಂದ ಹಿಡಿದು ವಿಮಾನ ಖರೀದಿ ಮಾಡುವ ತನಕ, ನಾವು ಪಡೆಯುವ ಸೇವೆಯಿಂದ ಮೊದಲ್ಗೊಂಡು ಗುಂಡು ಪಿನ್ನಿನವರೆಗೆ ಪ್ರತಿಯೊಂದರಲ್ಲೂ ನಾವು ಜಿಎಸ್‌ಟಿ ಎನ್ನುವ ಪರೋಕ್ಷ ತೆರಿಗೆ ಕಟ್ಟುತ್ತಿರುತ್ತೇವೆ. ಹಾಗಾಗಿ ಎಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ತೆರಿಗೆ ಪಾವತಿದಾರರೇ.

ಇದರ ನಡುವೆ ಒಂದು ಸುಳ್ಳು ಸಂದೇಶ ಜಿಎಸ್‌ಟಿ ಜಾರಿಯಾದಂದಿನಿಂದ ಇಂದಿನವರೆಗೂ ವ್ಯಾಪಕವಾಗಿ ಹರಿದಾಡುತ್ತಿದೆ. ಅದೇನೆಂದರೆ, ನೀವು ಕೊಳ್ಳುವ ಪ್ರತೀ ವಸ್ತು ಮತ್ತು ಪಡೆಯುವ ಸೇವೆಗೆ ಅನುಗುಣವಾಗಿ ಶೇಕಡಾವಾರು ತೆರಿಗೆ ಪಾವತಿ ಮಾಡುವಾಗ ಕೆಲವು ಕಡೆ 'ಈ ಜಿಎಸ್‌ಟಿಯನ್ನು ನೀವು ವಾಪಸ್ ತೆಗೆದುಕೊಳ್ಳಬಹುದು, ನಿಮಗೆ ರೀಫಂಡ್ ಬರುತ್ತದೆ' ಎನ್ನುವ ಸುಳ್ಳು ಸಲಹೆಗಳನ್ನು ಜನರ ನಡುವೆ ಹರಿಯಬಿಡಲಾಗುತ್ತದೆ. ಇದು ಎಷ್ಟು ಅಪಾಯಕಾರಿ ಎಂದರೆ, ಈ ರೀತಿ ಸಂಬಂಧಪಡದೇ ಇರುವ ಜಿಎಸ್‌ಟಿ ಇನ್‌ಪುಟ್ ಸೌಲಭ್ಯ ಪಡೆದುಕೊಂಡ ಅದೆಷ್ಟೋ ಮಂದಿ ಜಿಎಸ್‌ಟಿ ನೋಂದಣಿದಾರರು ಬಡ್ಡಿ ಮತ್ತು ದಂಡದ ಸಮೇತ ಆದಾಯ ತೆರಿಗೆ ಇಲಾಖೆಗೆ ಮುಂದೊಂದು ದಿನ ಪಾವತಿಸಬೇಕಾಗುತ್ತದೆ.

ಅಸಲಿಗೆ ಜಿಎಸ್‌ಟಿ ಇನ್‌ಪುಟ್ ಎಂದರೇನು? ಒಬ್ಬ ವ್ಯಕ್ತಿ ಜಿಎಸ್‌ಟಿ ನೋಂದಣಿ ಪಡೆದುಕೊಂಡ ಮೇಲೆ ಯಾವುದೇ ವಸ್ತುವನ್ನು ಕೊಂಡರೆ ಅಥವಾ ಸೇವೆ ಪಡೆದುಕೊಂಡರೆ, ಅದರ ಮೇಲೆ ಹಾಕಲಾಗುವ ತೆರಿಗೆಯು ಮಾರಾಟಗಾರನಿಗೆ ಔಟ್‌ಪುಟ್ ತೆರಿಗೆಯಾದರೆ, ಕೊಂಡುಕೊಂಡ ವ್ಯಕ್ತಿಗೆ ಅದು ಹೂಡುವಳಿ (ಇನ್‌ಪುಟ್) ತೆರಿಗೆಯಾಗುತ್ತದೆ. ಹೀಗೆ ಕೊಂಡುಕೊಂಡ ವ್ಯಕ್ತಿ ಅದೇ ವಸ್ತುವನ್ನು ಬೇರೆಯವರಿಗೆ ಮಾರಾಟ ಮಾಡಿದಾಗ ಆತ ಅದಾಗಲೇ ಕಟ್ಟಿರುವ ತೆರಿಗೆಯನ್ನು ಇಲ್ಲಿ ಹೊಂದಾಣಿಕೆ ಮಾಡಬಹುದು ಮತ್ತು ಆತ ಮತ್ತೊಮ್ಮೆ ಆ ವಸ್ತುವಿನ ಬೆಲೆಯ ಮೇಲೆ ಜಿಎಸ್‌ಟಿ ಪಾವತಿಸುವ ಅವಶ್ಯಕತೆ ಇರುವುದಿಲ್ಲ. ಆತನ ಲಾಭದ ಮೇಲೆ ಮಾತ್ರ ತೆರಿಗೆ ಕಟ್ಟಬೇಕಾಗುತ್ತದೆ. ಒಟ್ಟಾರೆ, ಜಿಎಸ್‌ಟಿ ಪಾವತಿಸುವವರು ಯಾರು ಎನ್ನುವ ಸರಳ ಪ್ರಶ್ನೆಗೆ ಉತ್ತರ ಕಟ್ಟಕಡೆಯ ಗ್ರಾಹಕ ಎನ್ನುವುದೇ ಸತ್ಯ. ಹೀಗಿರುವಾಗ, ಈ ಇನ್‌ಪುಟ್ ತೆರಿಗೆ ಸೌಲಭ್ಯವು ಬರೀ ನಾವು ಮಾಡುವ ವ್ಯಾಪಾರ ವಹಿವಾಟಿಗೆ, ಸೇವೆಗೆ ಸಂಬಂಧಿಸಿದ್ದು ಮಾತ್ರ. ಅದನ್ನು ನಾವು ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುವಾಗ ಬಳಸಿಕೊಳ್ಳಬಹುದು. ಮನೆ ಬಳಕೆಗೆ ಅಥವಾ ಸ್ವಂತಕ್ಕಾಗಿ ಖರೀದಿಸಿದ ವಸ್ತುವಿಗೆ ಜಿಎಸ್‌ಟಿ ನಂಬರ್ ಕೊಟ್ಟು, ಸಂಸ್ಥೆಯ ಹೆಸರಿಗೆ ಬಿಲ್ಲನ್ನು ತೆಗೆದುಕೊಳ್ಳಲು ಬರುವುದಿಲ್ಲ. ಆದರೆ, ಈ ಕುರಿತು ತಿಳಿದೋ ತಿಳಿಯದೆಯೋ ಹೂಡುವಳಿ ತೆರಿಗೆ ಸೌಲಭ್ಯ ಉಪಯೋಗಿಸಿಕೊಂಡಿರುವ ಹಲವಾರು ಉದಾಹರಣೆಗಳಿವೆ.



ಇಲಾಖೆಯ ಗಮನಕ್ಕೆ ಈ ವಿಷಯ ಬಂದು ಅದು ನಿಮಗೆ ನೋಟಿಸ್ ಜಾರಿ ಮಾಡುವ ವೇಳೆಗಾಗಲೇ ನೀವು ಇನ್‌ಪುಟ್ ಸೌಲಭ್ಯ ಪಡೆದುಕೊಂಡು ವರ್ಷಗಳೇ ಕಳೆದುಹೋಗಿರುತ್ತವೆ ಮತ್ತು ನೀವು ಅನಿವಾರ್ಯವಾಗಿ ಹೂಡುವಳಿ ತೆರಿಗೆಯನ್ನು ಬಡ್ಡಿ ಮತ್ತು ದಂಡದ ಸಮೇತ ಇಲಾಖೆಗೆ ಪಾವತಿಸಬೇಕಾಗುತ್ತದೆ. ವರ್ಷಗಳು ಕಳೆದಷ್ಟೂ ಬಡ್ಡಿ ಮತ್ತು ದಂಡದ ಮೊತ್ತ ಏರುತ್ತಲೇ ಇರುತ್ತದೆ.

ಇಂತಹ ಪ್ರಕರಣಗಳಲ್ಲಿ ಯಾವ ರೀತಿಯ ಕ್ರಮಗಳನ್ನು ಜರುಗಿಸಬಹುದು? ವ್ಯವಹಾರಕ್ಕೆ ಸಂಬಂಧಿಸದ ಹೂಡುವಳಿ ತೆರಿಗೆ ಅಥವಾ ಇನ್‌ಪುಟ್ ತೆರಿಗೆ ಉಪಯೋಗಿಸುವುದರಿಂದ ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ ಸೆಕ್ಷನ್ 61ರ ಪ್ರಕಾರ ರಿಟರ್ನ್ಸ್ ಪರಿಶೀಲನೆ, ಸೆಕ್ಷನ್ 65ರ ಪ್ರಕಾರ ಲೆಕ್ಕ ಪರಿಶೋಧನೆಗೆ ಕ್ರಮ, ಸೆಕ್ಷನ್ 73ರ ಪ್ರಕಾರ ನ್ಯಾಯ ನಿರ್ಣಯ ಮತ್ತು ದುರುದ್ದೇಶಪೂರ್ವಕ ಎಂಬುದು ಸಾಬೀತಾದರೆ ಸೆಕ್ಷನ್ 74ರ ಅಡಿಯಲ್ಲಿ ಬಡ್ಡಿ ಮಾಸಿಕ ಶೇ 1.5ರಂತೆ, ದಂಡದ ಜೊತೆಗೆ ಹೂಡುವಳಿ ತೆರಿಗೆ ಕಟ್ಟಲು ಇಲಾಖೆ ಕ್ರಮ ಜರುಗಿಸಬಹುದು.

ಹೀಗಾಗಿ, ನಿಮ್ಮ ಬಳಿ ಜಿಎಸ್‌ಟಿ ಸಂಖ್ಯೆ ಇದೆ ಅಂದಾಕ್ಷಣ ಅದನ್ನು ವೈಯಕ್ತಿಕ ಬಳಕೆಗೆ, ಮನೆಗೆ ಸಾಮಾನು ಸರಂಜಾಮು ಕೊಳ್ಳುವಾಗ ಕೊಡುವಂತಿಲ್ಲ. ವ್ಯವಹಾರಕ್ಕೆ ಸಂಬಂಧಿಸಿದ ಖರೀದಿಗಳಿಗೆ ಮಾತ್ರ ನೀವು ಅದನ್ನು ಉಪಯೋಗಿಸಬೇಕು ಎನ್ನುವ ಸರಳ ಸತ್ಯ ನಿಮಗೆ ತಿಳಿದಿರಲಿ. ಇಲ್ಲವಾದರೆ ಮುಂದೊಂದು ದಿನ ದಂಡ ಮತ್ತು ಬಡ್ಡಿಯ ಸಮೇತ ಕಟ್ಟಬೇಕಾದುದು ಅನಿವಾರ್ಯವಾದೀತು, ಎಚ್ಚರ...!

ಲೇಖಕಿ: ತೆರಿಗೆ ವಕೀಲೆ

ವಾಚಕರ ವಾಣಿ

ವಿ.ವಿ. ಕ್ಷೇಮ ಸಮಾಚಾರಕ್ಕೂ ಸಿಗಲಿ ಒತ್ತು

'ರಾಜ್ಯ ಸರ್ಕಾರವು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡಿದ್ದು, ವಿಶ್ವವಿದ್ಯಾಲಯಗಳ ಸ್ಥಾಪನೆ ದೇಶಕ್ಕೇ ಮಾದರಿಯಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿರುವುದು (ಪ್ರ.ವಾ., ಮಾರ್ಚ್ 29) ಸ್ವಲ್ಪಮಟ್ಟಿಗೆ ಉತ್ಪ್ರೇಕ್ಷೆ ಅನ್ನಿಸುತ್ತದೆ. ಏಕೆಂದರೆ ಕೆಲ ವರ್ಷಗಳಿಂದ ನಮ್ಮ ಕನ್ನಡ ವಿಶ್ವವಿದ್ಯಾಲಯವು ಹಗರಣಗಳಿಂದ ಸುದ್ದಿಯಾದದ್ದೇ ಹೆಚ್ಚು. ವಿದ್ಯಾರ್ಥಿವೇತನ, ಅಲ್ಲಿಯ ಪ್ರಾಧ್ಯಾಪಕರಿಗೆ ತಿಂಗಳ ವೇತನದ ಸಲುವಾಗಿ ಹೋರಾಟ ನಡೆದು ಇಡೀ ವಿಶ್ವವಿದ್ಯಾಲಯದ ಪರಿಸರವೇ ಕಲುಷಿತಗೊಂಡಿತು. ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲೂ ಬೇರೆ ಬೇರೆ ಸಮಸ್ಯೆಗಳು ತಲೆದೋರಿದವು. ಹೀಗಾಗಿ ಸರ್ಕಾರವು ವಿಶ್ವವಿದ್ಯಾಲಯ ಸ್ಥಾಪನೆಗೆ ಮಾತ್ರ ಒತ್ತು ಕೊಡದೆ ನಂತರ ಅಲ್ಲಿಯ ಕ್ಷೇಮ ಸಮಾಚಾರಕ್ಕೂ ಒತ್ತು ಕೊಡಬೇಕು. ಅದು ದೇಶಕ್ಕೆ ಮಾದರಿಯಾಗಬೇಕು. ಇನ್ನು ಆರೋಗ್ಯ ಕ್ಷೇತ್ರದ ಅನಾರೋಗ್ಯದ ಬಗ್ಗೆ ಹೇಳುವುದೇ ಬೇಡ, ಅಲ್ಲವೇ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಜಾಣ–ಜಾಣೆಯರಾಗಿ

ಘೋಷಣೆಯಾಗಿದೆ
ಚುನಾವಣೆ,
ಶುರುವಿನ್ನು
ನಾಯಕರ ಚಿತಾವಣೆ,
ಹಾಕದೆ ಆಣೆ
ಮುಟ್ಟದೆ ಎಂಟಾಣೆ
ಸ್ವಾಭಿಮಾನದಿಂದ
ಮತಹಾಕಿ ಆಗಬೇಕು
ಜಾಣ- ಜಾಣೆ!

ಎಲ್.ಎನ್.ಪ್ರಸಾದ್
ತುರುವೇಕೆರೆ

ರೈಲು ಓಡಾಟ: ಅಸಮಂಜಸ ನಿರ್ಧಾರ

ಭಾರತೀಯ ರೈಲ್ವೆಯ ಅಸಮಂಜಸ ನಿರ್ಧಾರದಿಂದ ಕೆಲವೊಮ್ಮೆ ಎಡವಟ್ಟುಗಳು ಉಂಟಾಗುತ್ತವೆ. ಒಂದೆಡೆ, ಸದಾ ಪ್ರಯಾಣಿಕರಿಂದ ತುಂಬಿರುತ್ತಿದ್ದ ಸೋಲಾಪುರ-ಗುಂತಕಲ್-ಕಲಬುರಗಿ ರೈಲನ್ನು ಪುನರಾರಂಭಿಸದೆ ರದ್ದುಪಡಿಸಿದೆ. ಇನ್ನೊಂದೆಡೆ, ಪ್ರಯಾಣಿಕರ ಸಾಂದ್ರತೆ ಅಷ್ಟೇನೂ ಇರದಿದ್ದರೂ ಬೀದರ್-ಕಲಬುರಗಿ ನಡುವೆ ಇನ್ನೊಂದು ಜೋಡಿ ಡೆಮು ರೈಲನ್ನು ಇದೇ 4ರಿಂದ ಆರಂಭಿಸಿದೆ. ಈ ರೈಲಿನ ಸೇವೆಗಾಗಿ ಭಾರತೀಯ ರೈಲ್ವೆಯನ್ನು ಅಭಿನಂದಿಸೋಣ. ಆದರೆ, ರದ್ದಾಗಿರುವ ಸೋಲಾಪುರ-ಗುಂತಕಲ್-ಕಲಬುರಗಿ ಡೆಮು ರೈಲನ್ನು ಪುನಃ ಆರಂಭಿಸಿ, ಸಂಕಷ್ಟದಲ್ಲಿರುವ ಕಲಬುರಗಿ- ರಾಯಚೂರು ನಡುವಣ ಸಣ್ಣ ನಿಲ್ದಾಣಗಳಿಗೆ ಕಾಯಕಲ್ಪ ಒದಗಿಸುವ ಮತ್ತು ಕಲಬುರಗಿಯ ಜನತೆ ರಾಯಚೂರು, ಮಂತ್ರಾಲಯಕ್ಕೆ ಹೋಗಿ, ಅದೇ ದಿನ ಮರಳಿ ಬರುವ ಸೌಲಭ್ಯ ಒದಗಿಸುವ ಕೃಪೆಯನ್ನು ಕೇಂದ್ರ ರೈಲ್ವೆ ವಲಯ ಮಾಡಲಿ ಎಂಬುದು ಜನರ ಹಕ್ಕೊತ್ತಾಯವಾಗಿದೆ.

ತಾಂತ್ರಿಕವಾಗಿ ಸಮಸ್ಯೆ ಇದ್ದಲ್ಲಿ, ಕಲಬುರಗಿ- ರಾಯಚೂರು ನಡುವೆ ಈ ಡೆಮು ರೈಲನ್ನು ಓಡಾಡಿಸಲಿ. ಈ ಕುರಿತು ಏನೆಲ್ಲಾ ಟ್ವೀಟ್ ಮಾಡಿದರೂ ಕೇಂದ್ರದ ರೈಲ್ವೆ ಸಚಿವರು ಸ್ಪಂದಿಸುತ್ತಿಲ್ಲ. ಇನ್ನಾದರೂ ಅವರು ಸ್ಪಂದಿಸುವಂತೆ ಆಗಲಿ.

ವೆಂಕಟೇಶ್ ಮುದಗಲ್, ಕಲಬುರಗಿ

ಯುದ್ಧವಲ್ಲ, ಇದು ಸಂಭ್ರಮ!

ಇದೀಗ ಕರ್ನಾಟಕ ವಿಧಾನಸಭಾ ಚುನಾವಣೆಗೆ ದಿನಾಂಕ ನಿಗದಿಯಾಗಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಒಂದು ಪ್ರಕ್ರಿಯೆ. ರಾಜ್ಯದ ಪ್ರತೀ ಪ್ರಜೆ ಖುಷಿಯಿಂದ ತನ್ನ ಹಕ್ಕನ್ನು ಚಲಾಯಿಸುವ ಮೂಲಕ ಅದು ಮತದಾರರ ಹಬ್ಬವಾಗಬೇಕು. ಯುದ್ಧ ಎಂದು ಈ ಚುನಾವಣೆಯನ್ನು ಕರೆಯುವುದು ಅಷ್ಟೊಂದು ಸಮಂಜಸವೆನಿಸದು.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಜಾತ್ರೆ ಒಳ– ಹೊರಗಿನ 'ಸತ್ಯ'ದರ್ಶನ

ಕುಣಿಗಲ್ ತಾಲ್ಲೂಕಿನ ಉಜ್ಜನಿ ಚೌಡೇಶ್ವರಿ ದೇವಿ ಜಾತ್ರೆ ಸಮಯದಲ್ಲಿ ದಲಿತರು ಜನಿವಾರ ಧಾರಣೆ ಮಾಡಿದ ಸುದ್ದಿ ಪ್ರಕಟವಾಗಿದೆ (ಪ್ರ.ವಾ., ಮಾರ್ಚ್ 26). ಕೆಲವು ದಶಕಗಳಿಂದ ಇದೇ ಬಗೆಯ ಸುದ್ದಿಗಳು ಆಗಾಗ್ಗೆ ಪ್ರಕಟವಾಗುತ್ತಿದ್ದು, ಈ ಬಗ್ಗೆ ಜನರಲ್ಲಿ ಗೊಂದಲ ಮೂಡಿಸುತ್ತವೆ. ಒಬ್ಬ ಅಧ್ಯಯನಕಾರನಾಗಿ ಈ ಕುರಿತ ವಾಸ್ತವ ಸಂಗತಿಗಳನ್ನು ಸಾರ್ವಜನಿಕರ ಮುಂದಿಡುವುದು ಅಗತ್ಯ ಎಂದು ಭಾವಿಸಿದ್ದೇನೆ. ಸಂಪ್ರದಾಯವನ್ನು ಸ್ಥಿರೀಕರಿಸುವಂತೆ ದಲಿತರಿಗೆ ವೈದಿಕರು ಜನಿವಾರ ಹಾಕಿ ಮಂತ್ರ ಹೇಳುವುದನ್ನೇ 'ಸೌಹಾರ್ದ' ಎನ್ನುವುದು ಸರಿಯೇ? 'ಆ ಗ್ರಾಮದವರು ಜಾತಿ–ಧರ್ಮದ ಹಂಗಿಲ್ಲದೆ ಬದುಕಿದ್ದಾರೆ' ಎಂಬುದನ್ನು ಎಷ್ಟರಮಟ್ಟಿಗೆ ಒಪ್ಪಬಹುದು.

ಜಾತ್ರೆ ಮುಗಿಯುತ್ತಿದ್ದಂತೆ ಅವರೆಲ್ಲಾ ಜನಿವಾರ ತೆಗೆದುಹಾಕಿ ಮತ್ತೆ ತಮ್ಮ ಹಟ್ಟಿಯ ಮನೆಗಳಿಗೇ ಹೋಗುತ್ತಾರೆ. ಆ ಮೂಲಕ ತಲೆತಲಾಂತರದ ಜಾತಿ ನಿರ್ಬಂಧದಿಂದ ನಲುಗುತ್ತಾರೆ ಹಾಗೂ ಅದೇ ಕಸುಬುಗಳನ್ನೇ ಮುಂದುವರಿಸುತ್ತಾರೆ. ಜನಿವಾರ ಹಾಕಿದಾಕ್ಷಣ ಇವರಾರೂ ಗ್ರಾಮದೇವತೆಯ ಮೂಲ ಗುಡಿಯಲ್ಲಿ ಪೂಜೆ ಮಾಡುವಂತಿಲ್ಲ. ವಿಶೇಷವಾಗಿ ಈ ದಲಿತ ಪೂಜಾರಿಗಳು ತಮ್ಮ 'ಹರೆ' ವಾದ್ಯವನ್ನೇ ದೇವರೆಂದು ಪೂಜಿಸುತ್ತಾರೆ ಹಾಗೂ ಈ ಪೂಜಾರಿಯು ಆ ಹರೆಯೊಂದಿಗೆ ಗ್ರಾಮದೇವತೆಯ ಗುಡಿಯೊಳಗೆ ನುಗ್ಗಲು ಪ್ರಯತ್ನಿಸುವುದನ್ನೂ ಆಚರಣಾತ್ಮಕವಾಗಿಯೇ ತಡೆಯಲಾಗುತ್ತದೆ.

ಪರಿಷೆಗಳಲ್ಲಿ ಊರಿನ ಪ್ರತಿಯೊಂದು ಜಾತಿಯವರಿಗೂ ಒಂದೊಂದು ಕಾರ್ಯ ನಿಗದಿಯಾಗಿರುವುದರಲ್ಲಿ ಆಡಳಿತಾತ್ಮಕ ವ್ಯವಹಾರ ನಿರ್ವಹಣೆಯ ಸೂಕ್ಷ್ಮ ಇರುವುದನ್ನು ಗಮನಿಸಬೇಕು. ಜಾತ್ರೆ ನಿರ್ವಿಘ್ನವಾಗಿ ನಡೆಯಲೆಂದು ಎಲ್ಲಾ ಜಾತಿ, ಕುಲಕಸುಬಿನವರನ್ನೂ ದೇವರ ಸೇವೆ ಹೆಸರಲ್ಲಿ ಒಳಗೊಳ್ಳುವಂತೆ ಮಾಡಲಾಗುತ್ತದೆ. ಆ ಕೆಲಸಗಳು ಉಚಿತವಾಗಿ ಆಗಲಿ ಎಂಬ ಉದ್ದೇಶವೂ ಇದರ ಹಿಂದೆ ಇದ್ದಂತಿದೆ. ಸೇವೆ ಹೆಸರಿನಲ್ಲಿ ಇದನ್ನು 'ಬಿಟ್ಟಿ ಮಾಡುವುದು' ಎಂದೂ ಕೆಲವೆಡೆ ಕರೆಯುವುದುಂಟು. ಭಕ್ತರ ಸಂಖ್ಯೆ ಹೆಚ್ಚಾಗಲೆಂದೇ ಪ್ರತೀ ಜಾತ್ರೆಯಲ್ಲಿ ಇಂತಹ ವಿಶೇಷ ಬಗೆಯ ಆಚರಣೆ, ನಂಬಿಕೆಗಳನ್ನು ಅಳವಡಿಸಲಾಗಿರುತ್ತದೆ ಎಂಬುದನ್ನು ಗಮನಿಸಿದರೆ, ಜಾತ್ರೆಗಳ ಒಳ– ಹೊರಗಿನ 'ಸತ್ಯ'ದರ್ಶನ ಆದೀತು.

ಡಾ. ಟಿ.ಗೋವಿಂದರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೂರು ತಿಂಗಳಲ್ಲಿ 4 ಲಕ್ಷ ಉದ್ಯೋಗ ನಷ್ಟ

ಪ್ರಜಾವಾಣಿ ವಾರ್ತೆ

ಉದ್ಯೋಗ ಕಡಿತ 2023ರಲ್ಲೂ ಮುಂದುವರಿದಿದೆ. ವರ್ಷದ ಮೊದಲ ಮೂರು ತಿಂಗಳು ಪೂರ್ಣಗೊಳ್ಳುವ ಮೊದಲೇ, ವಿಶ್ವದಾದ್ಯಂತ 4.14 ಲಕ್ಷ ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಇದರಲ್ಲಿ ಐ.ಟಿ ವಲಯದಲ್ಲಿ ಕೆಲಸ ಕಳೆದುಕೊಂಡವರ ಸಂಖ್ಯೆ 1.55 ಲಕ್ಷಕ್ಕೂ ಹೆಚ್ಚು. ಇನ್ನೂ ಹಲವು ತಿಂಗಳು ಇದೇ ಪರಿಸ್ಥಿತಿ ಮುಂದುವರಿಯಲಿದೆ ಎಂದು ಅಂದಾಜಿಸಲಾಗಿದೆ. '2023ರ ಉಳಿದ ತಿಂಗಳುಗಳು ಮತ್ತು 2024ರಲ್ಲೂ ಉದ್ಯೋಗ ಕಡಿತ ದೊಡ್ಡಮಟ್ಟದಲ್ಲಿಯೇ ಇರಲಿದೆ' ಎಂದು ಫೋರ್ಬ್ಸ್ ಅಂದಾಜಿಸಿದೆ.

ಟೆಕ್ ಮತ್ತು ಸ್ಟಾರ್ಟ್‌ಅಪ್ ವಲಯದಲ್ಲಿ ಆಗುವ ನೇಮಕಾತಿ ಮತ್ತು ಉದ್ಯೋಗ ಕಡಿತದ ದತ್ತಾಂಶಗಳನ್ನು ಅಮೆರಿಕದ ಟೆಕ್ ಕಂಪನಿ ಲೇಆಫ್.ಎಫ್‌ಐಇ ನಿರ್ವಹಿಸುತ್ತದೆ. ಲೇಆಫ್.ಎಫ್‌ಐಇ ದತ್ತಾಂಶಗಳ ಪ್ರಕಾರ 2023ರ ಜನವರಿ 1ರಿಂದ ಮಾರ್ಚ್ 26ರವರೆಗೆ ವಿಶ್ವದಾದ್ಯಂತ 553 ಕಂಪನಿಗಳು ತಮ್ಮ ಉದ್ಯೋಗಿಗಳ ಸಂಖ್ಯೆಯಲ್ಲಿ ಕಡಿತ ಮಾಡಿವೆ.

ಈ 553 ಕಂಪನಿಗಳು ಒಟ್ಟು 1,55,462 ಉದ್ಯೋಗಗಳನ್ನು ಕಡಿತ ಮಾಡಿವೆ. ಇದರಲ್ಲಿ ಅಮೆರಿಕದಲ್ಲಿ ಕಾರ್ಯನಿರ್ವಹಿಸುವ ಅಥವಾ ಕೇಂದ್ರ ಕಚೇರಿ ಹೊಂದಿರುವ ಕಂಪನಿಗಳ ಸಂಖ್ಯೆಯೇ ಹೆಚ್ಚು. ಮತ್ತು ಹೀಗೆ ಈ ಅವಧಿಯಲ್ಲಿ ಉದ್ಯೋಗ ಕಳೆದುಕೊಂಡವರಲ್ಲಿ ಅಮೆರಿಕನ್ನರ ಸಂಖ್ಯೆಯೇ 70 ಸಾವಿರ ದಾಟುತ್ತದೆ. ಜಾಗತಿಕ ಐಟಿ ಕಂಪನಿಗಳಲ್ಲಿ ಉದ್ಯೋಗ ಕಳೆದುಕೊಂಡವರಲ್ಲಿ ಭಾರತೀಯರ ಸಂಖ್ಯೆಯೂ ದೊಡ್ಡದಿದೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ. ಭಾರತದಲ್ಲಿ ಈ ಅವಧಿಯಲ್ಲಿ 30 ಸಾವಿರಕ್ಕೂ ಹೆಚ್ಚು ಮಂದಿ ಕೆಲಸ ಕಳೆದುಕೊಂಡಿದ್ದಾರೆ ಎಂದು ದತ್ತಾಂಶಗಳು ಹೇಳುತ್ತವೆ.

ವಿಶ್ವದ ಬಹುತೇಕ ದೇಶಗಳಲ್ಲಿ ಆರ್ಥಿಕ ಹಿಂಜರಿತವಿದೆ. ಪರಿಣಾಮವಾಗಿ ಆರ್ಥಿಕತೆಯ ಎಲ್ಲಾ ವಲಯಗಳಲ್ಲೂ ಉದ್ಯೋಗ ಕಡಿತವಾಗುತ್ತಿದೆ. ಆದರೆ ಉದ್ಯೋಗ ಕಡಿತದಲ್ಲಿ ಟೆಕ್ ಕಂಪನಿಗಳ ಪಾಲು ದೊಡ್ಡದಿದೆ. ಅಮೆಜಾನ್, ಟ್ವಿಟರ್, ಗೂಗಲ್ ಮತ್ತು ಮೆಟಾದಂತಹ ಟೆಕ್ ದೈತ್ಯ ಕಂಪನಿಗಳು ಹತ್ತಾರು ಸಾವಿರ ಸಂಖ್ಯೆಯಲ್ಲಿ ಉದ್ಯೋಗವನ್ನು ಕಡಿತ ಮಾಡಿವೆ. ಹೀಗಾಗಿ ಇಂತಹ ದೊಡ್ಡ ಮಟ್ಟದ ಉದ್ಯೋಗ ಕಡಿತಗಳು ಹೆಚ್ಚು ಸದ್ದು ಮಾಡುತ್ತವೆ. ಆದರೆ, ಸಣ್ಣ ಸಣ್ಣ ಸಂಖ್ಯೆಯಲ್ಲಿ ಆಗುವ ಉದ್ಯೋಗ ಕಡಿತವು ಗಮನಕ್ಕೆ ಬರುವುದೇ ಇಲ್ಲ. ಈ ವರ್ಷದ ಮೊದಲ ಮೂರು ತಿಂಗಳಲ್ಲಿ ವಿಶ್ವದಾದ್ಯಂತ ಒಟ್ಟು 1,948 ಕಂಪನಿಗಳು ಉದ್ಯೋಗವನ್ನು ಕಡಿತ ಮಾಡಿವೆ. ಈ ಕಂಪನಿಗಳು ಕಡಿತ ಮಾಡಿದ ಉದ್ಯೋಗಗಳ ಸಂಖ್ಯೆ 4.14 ಲಕ್ಷ ಎಂಬುದು ಲೇಆಫ್.ಎಫ್‌ಐಇ ಕೊಡುವ ಲೆಕ್ಕಾಚಾರ.

ಉದ್ಯೋಗ ಕಡಿತ ಇನ್ನೂ ಮುಂದುವರಿಯಲಿದೆ ಎಂಬುದನ್ನು ಈಗಾಗಲೇ ಕೆಲವು ಕಂಪನಿಗಳ ಪ್ರಕಟಣೆಗಳು ಸೂಚಿಸಿವೆ. ಟೆಕ್ ದೈತ್ಯ ಆ್ಯಕ್ಸೆಂಚರ್ ಮುಂದಿನ ಆರು ತಿಂಗಳಲ್ಲಿ ಒಟ್ಟು 19,000 ಉದ್ಯೋಗಗಳನ್ನು ಕಡಿತ ಮಾಡುವುದಾಗಿ ಈಚೆಗೆ ಹೇಳಿದೆ. ಕಂಪನಿಯ ಒಟ್ಟು ಉದ್ಯೋಗಿಗಳಲ್ಲಿ ಶೇ 40ರಷ್ಟು ಉದ್ಯೋಗಿಗಳು ಭಾರತೀಯರೇ ಆಗಿದ್ದಾರೆ. ಕಂಪನಿಯ ಉದ್ಯೋಗ ಕಡಿತ ಕಾರ್ಯಯೋಜನೆಯ ಪ್ರಕಾರ 7,000 ಭಾರತೀಯರನ್ನು ಮುಂದಿನ ತಿಂಗಳುಗಳಲ್ಲಿ ಕೆಲಸದಿಂದ ತೆಗೆದುಹಾಕಲಾಗುತ್ತದೆ ಎಂದು ಲೈವ್ ಮಿಂಟ್ ವರದಿ ಮಾಡಿದೆ.

ಕಾರಣಗಳು

ಉದ್ಯೋಗ ಕಡಿತ ಘೋಷಿಸಿದ ಕೆಲವು ದೈತ್ಯ ಕಂಪನಿಗಳು, ಆ ಕ್ರಮ ತೆಗೆದುಕೊಳ್ಳಲು ಕಾರಣಗಳನ್ನೂ ನೀಡಿವೆ. ಬಹುತೇಕ ಕಂಪನಿಗಳು ವಹಿವಾಟು ಇಳಿಕೆಯಾಗುತ್ತಿರುವುದು ಅಥವಾ ಬೆಳವಣಿಗೆಯಾಗದೇ ಇರುವುದೇ ಪ್ರಮುಖ ಕಾರಣ ಎಂದು ಹೇಳಿವೆ. ಜತೆಗೆ ವೆಚ್ಚ ಕಡಿತದ ಕ್ರಮವಾಗಿ ಉದ್ಯೋಗವನ್ನು ಕಡಿತ ಮಾಡುತ್ತಿದ್ದೇವೆ ಎಂದು ಹೇಳಿವೆ. ಟೆಕ್ ಕಂಪನಿಗಳಲ್ಲಿ ದೊಡ್ಡ ಸಂಬಳದ ಅತ್ಯುನ್ನತ ಹುದ್ದೆಗಳಲ್ಲೇ ಉದ್ಯೋಗ ಕಡಿತದ ಪ್ರಮಾಣ ಹೆಚ್ಚು.

ಟೆಕ್ ವಲಯದಲ್ಲಿ ಆರಂಭವಾದ ಉದ್ಯೋಗ ಕಡಿತವು ಈಗ ಆರೋಗ್ಯ ಸೇವೆ, ಬ್ಯಾಂಕಿಂಗ್, ಶಿಕ್ಷಣ ಕ್ಷೇತ್ರಕ್ಕೂ ಕಾಲಿರಿಸಿದೆ. ಬಹುತೇಕ ಉದ್ಯೋಗಗಳು ಸೇವಾ ವಲಯದಲ್ಲೇ ಕಡಿತವಾಗಿವೆ. ಮನೋರಂಜನಾ ಕ್ಷೇತ್ರದಲ್ಲೂ ಉದ್ಯೋಗ ಕಡಿತ ಆರಂಭವಾಗಿದೆ. ಡಿಸ್ನಿ 7,000 ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಿದೆ. ಮುಂದಿನ ದಿನಗಳಲ್ಲಿ ಇದು ಬೇರೆ ಕ್ಷೇತ್ರಗಳಿಗೂ ವಿಸ್ತರಿಸಲಿದ ಎಂದು ಫೋರ್ಬ್ಸ್ ಅಂದಾಜಿಸಿದೆ.

ಉದ್ಯೋಗ ಕಡಿತಕ್ಕೆ ಟೆಕ್ ದೈತ್ಯರ ಮುನ್ನುಡಿ

19,000
ಐಟಿ ಕ್ಷೇತ್ರದ ಪ್ರಮುಖ ಕಂಪನಿ ಆ್ಯಕ್ಸೆಂಚರ್ 19 ಸಾವಿರ ಉದ್ಯೋಗಿಗಳನ್ನು (ಶೇ 2.5) ತೆಗೆದುಹಾಕುವ ನಿರ್ಧಾರವನ್ನು ಮಾ.23ರಂದು ಪ್ರಕಟಿಸಿತ್ತು

12,000
ಸರ್ಚ್ ಎಂಜಿನ್ ದೈತ್ಯ, ಗೂಗಲ್ ಸಹ ತನ್ನ 12 ಸಾವಿರ ಸಿಬ್ಬಂದಿಯನ್ನು ಕಡಿತಗೊಳಿಸಲು ಜನವರಿ 20ರಂದು ನಿರ್ಧರಿಸಿತ್ತು. ಒಟ್ಟು ಸಿಬ್ಬಂದಿಯ ಶೇ 6ರಷ್ಟು ಮಂದಿ ಕೆಲಸ ಕಳೆದುಕೊಳ್ಳಲಿದ್ದಾರೆ

10,000
ಫೇಸ್‌ಬುಕ್‌ನ ಮಾತೃಸಂಸ್ಥೆ ಮೆಟಾ, ಮತ್ತೆ 10,000 ಉದ್ಯೋಗಿಗಳ ಉದ್ಯೋಗ ಕಡಿತಗೊಳಿಸಿದೆ. ನಾಲ್ಕು ತಿಂಗಳ ಹಿಂದೆಯಷ್ಟೇ 11 ಸಾವಿರ ನೌಕರರನ್ನು ಸಂಸ್ಥೆ ತೆಗೆದುಹಾಕಿತ್ತು

10,000
ಪರ್ಸನಲ್ ಕಂಪ್ಯೂಟರ್ ಬೇಡಿಕೆ ಕುಸಿತ, ಆದಾಯ ಕುಸಿತ ಮೊದಲಾದ ಕಾರಣದಿಂದ, ಹತ್ತು ಸಾವಿರ ಸಿಬ್ಬಂದಿ ಕಡಿತ ಮಾಡುವುದಾಗಿ ಮೈಕ್ರೊಸಾಫ್ಟ್ ಜನವರಿಯಲ್ಲಿ ಪ್ರಕಟಿಸಿತ್ತು

8,500
ಅಮೆರಿಕದಲ್ಲಿ ತನ್ನ 5ಜಿ ಉಪಕರಣ ಮಾರಾಟ ನಿರೀಕ್ಷಿಸಿದಷ್ಟು ಆಗದ ಕಾರಣ, ಎರಿಕ್‌ಸನ್ ಕಂಪನಿ 8,500 ಜನರನ್ನು ಕೆಲಸದಿಂದ ತೆಗೆದುಹಾಕಿತ್ತು

9,000
ಪ್ರಮುಖ ಇ–ಕಾಮರ್ಸ್ ಕಂಪನಿ ಅಮೆಜಾನ್ ಇದೇ ಏಪ್ರಿಲ್ ಒಳಗೆ ಮತ್ತೆ 9 ಸಾವಿರ ಉದ್ಯೋಗಿಗಳನ್ನು ತೆಗೆದುಹಾಕುವ ನಿರ್ಧಾರವನ್ನು ಮಾ.20ರಂದು ಪ್ರಕಟಿಸಿತ್ತು.

8,000
ಸ್ಯಾನ್‌ಫ್ರಾನ್ಸಿಸ್ಕೊ ಮೂಲದ ಸೇಲ್ಸ್‌ಫೋರ್ಸ್ ಕಂಪನಿಯು ಸಂಸ್ಥೆಯ 8,000 ಜನರ ಉದ್ಯೋಗಕ್ಕೆ ಕತ್ತರಿ ಹಾಕಿದೆ

7,000
ಉದ್ಯೋಗಿಗಳನ್ನು ಕಡಿತಗೊಳಿಸುವ ನಿರ್ಧಾರವನ್ನು ಡಿಸ್ನಿ ಮಾ.27ರಂದು ಪ್ರಕಟಿಸಿದೆ

- ವಿಮಾನ ತಯಾರಕ ಸಂಸ್ಥೆಯ ಬೋಯಿಂಗ್ ತನ್ನ 2,000 ಸಾವಿರ ಉದ್ಯೋಗಿಗಳನ್ನು ಕಡಿತ ಮಾಡಲು ಸಜ್ಜಾಗಿದೆ
- ಕಾರು ತಯಾರಕ ಸಂಸ್ಥೆ ಫೋರ್ಡ್ ಮೋಟರ್ಸ್, ಯುರೋಪ್‌ನಲ್ಲಿರುವ ತನ್ನ 3,800 ಸಿಬ್ಬಂದಿ ಕಡಿತಕ್ಕೆ ಮುಂದಾಗಿದೆ
- ಪ್ರಮುಖ ಐಟಿ ಕಂಪನಿ ಐಬಿಎಂ, ಜಗತ್ತಿನಾದ್ಯಂತ ಕೆಲಸ ಮಾಡುತ್ತಿರುವ ತನ್ನ ಶೇ 1.5ರಷ್ಟು (3,900) ನೌಕರರನ್ನು ಸದ್ಯದಲ್ಲೇ ಕಳೆದುಕೊಳ್ಳಲಿದೆ
- ಇದೇ ವರ್ಷ 3 ಸಾವಿರ ಸಿಬ್ಬಂದಿ ಸೇರಿದಂತೆ 2025ರೊಳಗೆ 6 ಸಾವಿರ ಸಿಬ್ಬಂದಿಯನ್ನು ಕಡಿತ ಮಾಡಲು ಫಿಲಿಪ್ಸ್ ಮುಂದಾಗಿದೆ
- ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್ ಕ್ಷೇತ್ರದ ಗೋಲ್ಡ್‌ಮನ್ ಸ್ಯಾಚ್ 3,200 ನೌಕರರನ್ನು ತೆಗೆದುಹಾಕಲು ನಿರ್ಧರಿಸಿದೆ
- ಸರಕು ಸಾಗಣೆ ಕ್ಷೇತ್ರದ ಫೆಡೆಕ್ಸ್ ಈ ವರ್ಷದ ಆರಂಭದಲ್ಲಿ ಶೇ 10ರಷ್ಟು ನೌಕರರ ಉದ್ಯೋಗವನ್ನು ಬಲಿಕೊಟ್ಟಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಒಟ್ಟು 12 ಸಾವಿರ ಜನರು ಸಂಸ್ಥೆಯ ಉದ್ಯೋಗ ಕಳೆದುಕೊಂಡಿದ್ದಾರೆ
- ಕೈಗಾರಿಕಾ ಉತ್ಪನ್ನಗಳ ತಯಾರಿಕಾ ಸಂಸ್ಥೆ 3ಎಂ, ಜಾಗತಿಕವಾಗಿ 2,500 ಸಿಬ್ಬಂದಿಯ ಉದ್ಯೋಗವನ್ನು ಕಡಿತ ಮಾಡಿದೆ
- 2023ರ ಎರಡನೇ ತ್ರೈಮಾಸಿಕದ ವೇಳೆಗೆ ಶೇ 18ರಷ್ಟು ಉದ್ಯೋಗಿಗಳನ್ನು ಕಡಿತಗೊಳಿಸುವ ಪ್ರಕ್ರಿಯೆ ಪೂರ್ಣಗೊಳಿಸಲು ಲುಸಿಡ್ ಮಾ.28ರಂದು ತೀರ್ಮಾನ
- ಮೈಕ್ರೊಸಾಫ್ಟ್ ಒಡೆತನದ ಗಿಟ್‌ಹಬ್, ಭಾರತದಲ್ಲಿರುವ ತನ್ನ ಎಲ್ಲ 142 ಉದ್ಯೋಗಿಗಳನ್ನು ಮನೆಗೆ ಕಳುಹಿಸುವ ನಿರ್ಧಾರವನ್ನು ಮಾ.28ರಂದು ಪ್ರಕಟಿಸಿದೆ. ಈ ಬಗ್ಗೆ ಫೆಬ್ರುವರಿಯಲ್ಲೇ ಕಂಪನಿ ಸುಳಿವು ನೀಡಿತ್ತು
- ಉದ್ಯಮಿ ಇಲಾನ್ ಮಸ್ಕ್ ಅವರು ಸಾಮಾಜಿಕ ಜಾಲತಾಣ ಸಂಸ್ಥೆ ಟ್ವಿಟರ್ ಅನ್ನು 2022ರ ಅಕ್ಟೋಬರ್‌ನಲ್ಲಿ ಖರೀದಿಸುವ ವೇಳೆ ಸಂಸ್ಥೆಯಲ್ಲಿ ಸುಮಾರು 7,500 ಜನ ಕೆಲಸ ಮಾಡುತ್ತಿದ್ದರು. ನೌಕರರ ಸಂಖ್ಯೆ ಈಗ 2000ಕ್ಕೆ ಇಳಿದಿದೆ. ಇತ್ತೀಚೆಗೆ ಅಂದರೆ ಇದೇ ಫೆಬ್ರುವರಿಯಲ್ಲಿ ಶೇ 10ರಷ್ಟು ಜನರಿಗೆ ಮತ್ತೆ ಮನೆ ದಾರಿ ತೋರಿಸಲಾಗಿತ್ತು
- ಯಾಹೂ ಸಂಸ್ಥೆಯು ಈ ವರ್ಷಾಂತ್ಯಕ್ಕೆ 1,600 ಉದ್ಯೋಗಿಗಳನ್ನು ತೆಗೆದುಹಾಕಲಿದೆ. ಜಾಹೀರಾತು ತಂತ್ರಜ್ಞಾನ ತಂಡಕ್ಕೆ ಹೊಸ ರೂಪ ನೀಡುವ ಮಾತನ್ನಾಡಿದೆ
- ಕ್ಲೌಡ್ ಆಧಾರಿತ ವಿಡಿಯೊ ಕಾನ್ಫರೆನ್ಸ್ ಸೇವೆ ಒದಗಿಸುತ್ತಿರುವ ಝೂಮ್, ಶೇ 15ರಷ್ಟು ಸಿಬ್ಬಂದಿ ಕಡಿತಕ್ಕೆ ನಿರ್ಧರಿಸಿದೆ
- ಕಂಪ್ಯೂಟರ್ ಮಾರಾಟ ಕುಸಿದಿರುವ ಕಾರಣ ನೀಡಿ, ತನ್ನ ಶೇ 2.5ರಷ್ಟು ಸಿಬ್ಬಂದಿಯನ್ನು (6,650) ಕಡಿತಗೊಳಿಸಲು ಡೆಲ್ ಕಂಪನಿ ಮುಂದಾಗಿದೆ
- ಡಿಜಿಟಲ್ ವಾಲೆಟ್ ಸೇವೆ ನೀಡುತ್ತಿರುವ ಪೇಪಾಲ್ ಕಂಪನಿಯ ಸಿಬ್ಬಂದಿ ಕಡಿತ ನಿರ್ಧಾರವು ಸುಮಾರು ಎರಡು ಸಾವಿರ ನೌಕರರ ಮೇಲೆ ಪರಿಣಾಮ ಬೀರಿದೆ
- ಕಳೆದ ವರ್ಷ ಆದಾಯದಲ್ಲಿ ಶೇ 11ರಷ್ಟು ಹೆಚ್ಚಳ ಕಂಡುಬಂದಿದ್ದರೂ, ಜರ್ಮನಿ ಮೂಲದ ಸಾಫ್ಟ್‌ವೇರ್ ಕಂಪನಿ ಸ್ಯಾಪ್ 2,800 ಉದ್ಯೋಗ ಕಡಿತ ಮಾಡಲು ಜನವರಿಯಲ್ಲಿ ತೀರ್ಮಾನಿಸಿತ್ತು

ಐ.ಟಿ ಕ್ಷೇತ್ರದಲ್ಲೇ ಹೆಚ್ಚು ನಷ್ಟ

ಭಾರತ: ಸ್ಟಾರ್ಟ್‌ಅಪ್‌ಗಳಲ್ಲೇ ಹೆಚ್ಚು ನಷ್ಟ

ಐಟಿ ದೈತ್ಯ ಕಂಪನಿಗಳ ಉದ್ಯೋಗ ಕಡಿತ ಕ್ರಮದಿಂದ ಕೆಲಸ ಕಳೆದುಕೊಂಡ ಭಾರತೀಯರ ಸಂಖ್ಯೆ ದೊಡ್ಡದು ಇದ್ದರೂ, ಅದಕ್ಕಿಂತ ಹೆಚ್ಚು ಭಾರತೀಯರು ಸ್ಟಾರ್ಟ್ ಅಪ್ ವಲಯದಲ್ಲಿ ಕೆಲಸ ಕಳೆದುಕೊಂಡಿದ್ದಾರೆ. 2023ರ ಜನವರಿ 1ರಿಂದ ಮಾರ್ಚ್ 24ರವರೆಗೆ ಭಾರತದ ಒಟ್ಟು 37 ಸ್ಟಾರ್ಟ್‌ಅಪ್‌ಗಳು ಉದ್ಯೋಗ ಕಡಿತವನ್ನು ಘೋಷಿಸಿವೆ. ಇವಿಷ್ಟೇ ಕಂಪನಿಗಳು ಒಟ್ಟು 5,808 ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಿವೆ. ಇವುಗಳಲ್ಲಿ ಕೆಲವು ಕಂಪನಿಗಳು ಉದ್ಯೋಗಿಗಳ ಸಂಖ್ಯೆಯನ್ನಷ್ಟೇ ಕಡಿಮೆ ಮಾಡಿದ್ದರೆ, ಕೆಲವು ಕಂಪನಿಗಳು ಮುಚ್ಚಿಹೋಗಿವೆ.

2022ರ ಜುಲೈನಿಂದ ಈವರೆಗೆ ಭಾರತದ ಒಟ್ಟು 89 ಸ್ಟಾರ್ಟ್‌ಅಪ್‌ಗಳು ಮತ್ತು ಯೂನಿಕಾರ್ನ್‌ಗಳು ಉದ್ಯೋಗ ಕಡಿತ ಕ್ರಮಗಳನ್ನು ಘೋಷಿಸಿವೆ. ಈ ಕ್ರಮದಿಂದ 23,195 ಜನರು ಕೆಲಸ ಕಳೆದುಕೊಂಡಿದ್ದಾರೆ. ಉದ್ಯೋಗ ಕಡಿತ ಮಾಡಿದ ಕಂಪನಿಗಳಲ್ಲಿ ಓಲಾ, ಬೈಜೂಸ್, ಸ್ವಿಗ್ಗಿ, ಗೋ ಮೆಕ್ಯಾನಿಕ್, ಎಂಫಿನ್, ಕಾರ್ಸ್24ನಂತಹ ಬೇರೆ ಬೇರೆ ವಲಯಗಳಿಗೆ ಸೇರಿದ ಕಂಪನಿಗಳೂ ಇವೆ. ಸಿಲಿಕಾನ್ ವ್ಯಾಲಿ ಬ್ಯಾಂಕ್‌ನ ಪತನದ ಕಾರಣದಿಂದ ಭಾರತದ ಮತ್ತು ಭಾರತೀಯರ ಸ್ಟಾರ್ಟ್‌ಅಪ್‌ಗಳಿಗೆ ಹೂಡಿಕೆ ಸ್ಥಗಿತವಾಗಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಮತ್ತಷ್ಟು ಸ್ಟಾರ್ಟ್‌ಅಪ್‌ಗಳು ಉದ್ಯೋಗ ಕಡಿತ ಮಾಡುವ ಅಥವಾ ಸಂಪೂರ್ಣವಾಗಿ ಸ್ಥಗಿತವಾಗುವ ಅಪಾಯವನ್ನು ಎದುರಿಸುತ್ತಿವೆ.

ಆಧಾರ: ಫೋರ್ಬ್ಸ್ ವರದಿಗಳು, ಲೇಆಫ್.ಎಫ್‌ಐಇ ಉದ್ಯೋಗ ಕಡಿತ ವರದಿ–ಡ್ಯಾಶ್‌ಬೋರ್ಡ್, ಪಿಟಿಐ, ರಾಯಿಟರ್ಸ್

ಶ್ರೇಯಸ್ ಹೊಸ ಚಿತ್ರಕ್ಕೆ ಪ್ರಿಯಾಂಕಾ...

ನಿರ್ಮಾಪಕ ಕೆ. ಮಂಜು ಅವರ ಪುತ್ರ ಶ್ರೇಯಸ್ ಕೆ. ಮಂಜು ಹೊಸ ಸಿನಿಮಾ ಘೋಷಿಸಿದ್ದಾರೆ. ಕಾಲೇಜಿನ ಪ್ರೀತಿಯ ಸುತ್ತ ಸುತ್ತುವ ಈ ಚಿತ್ರಕ್ಕೆ ಪ್ರಿಯಾಂಕಾ ಕುಮಾರ್ ನಾಯಕಿಯಾಗಿ ಆಯ್ಕೆಗೊಂಡಿದ್ದಾರೆ. ಅಭಿಷೇಕ್ ಅಂಬರೀಷ್ ನಟನೆಯ ಬ್ಯಾಡ್ ಮ್ಯಾನರ್ಸ್ ಹಾಗೂ ಎ.ಪಿ. ಅರ್ಜುನ್ ಹಾಗೂ ವಿರಾಟ್ ಕಾಂಬೋದ ಅದ್ದೂರಿ ಲವರ್ ಸಿನಿಮಾದಲ್ಲಿ ನಾಯಕಿಯಾಗಿ ಬಣ್ಣ ಹಚ್ಚಿರುವ ಪ್ರಿಯಾಂಕಾ ಅವರಿಗೆ ಇದು ಮೂರನೇ ಚಿತ್ರವಿದು.

ಕೆಲವು ಚಿತ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದ ಮಧು ಗೌಡ ಗಂಗೂರು ಈ ಚಿತ್ರದ ನಿರ್ದೇಶಕರು. ಆರ್. ಸಂತೋಷ್ ಕುಮಾರ್ ನಿರ್ಮಾಪಕರು. ಅರ್ಜುನ್ ಜನ್ಯ ಸಂಗೀತ, ಗಗನ್ ಗೌಡ ಛಾಯಾಗ್ರಹಣ, ರವಿವರ್ಮಾ ಸಾಹಸ ಚಿತ್ರಕ್ಕಿದೆ.

ಏಪ್ರಿಲ್ ತಿಂಗಳಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಬೆಂಗಳೂರು, ಕೊಡಗು, ಚಿಕ್ಕಮಗಳೂರು, ಕೇರಳದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ವಿ.ಮನೋಹರ್ ನಿರ್ದೇಶನದಲ್ಲಿ 'ದರ್ಬಾರ್'

ಜಾಹ್ನವಿ, ಸತೀಶ್

ಸಂಗೀತ ನಿರ್ದೇಶಕ ವಿ.ಮನೋಹರ್ 23 ವರ್ಷಗಳ ನಂತರ ನಿರ್ದೇಶನಕ್ಕಿಳಿದಿದ್ದಾರೆ. ಚಿತ್ರದ ಹೆಸರು 'ದರ್ಬಾರ್'. ಸತೀಶ್ ಕಥೆ ಬರೆದು ನಿರ್ಮಾಣದ ಜೊತೆಗೆ ನಾಯಕನಾಗಿಯೂ ನಟಿಸಿದ್ದಾರೆ. ಈ ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ.

ಈ ಸಿನಿಮಾ ಬಗ್ಗೆ ಮನೋಹರ್ ಹೇಳಿದ್ದಿಷ್ಟು, 'ನಾನು 'ಇಂದ್ರಧನುಷ್' ಚಿತ್ರ ಮಾಡಿದ ನಂತರ ಏನೇನೋ ಆಯಿತು. ಬಳಿಕ ನಾನೂ ಧಾರಾವಾಹಿ, ಸಂಗೀತ ನಿರ್ದೇಶನ ಎಂದೆಲ್ಲಾ ತೊಡಗಿಸಿಕೊಂಡೆ. ಸಿನಿಮಾ ಶುರು ಮಾಡಲು ಬಂದವರು ನಂತರ ಮುಂದುವರಿಯುತ್ತಲೇ ಇರಲಿಲ್ಲ. ಈ ಮೊದಲು ನಾನು ರಾಜಕೀಯದ ಬಗ್ಗೆ ತಿಳಿದುಕೊಂಡಿದ್ದೆ. ಇದೇ ಕಂಟೆಂಟ್ ಇಟ್ಟುಕೊಂಡು ಸಿನಿಮಾ ಮಾಡಬೇಕು ಎಂದುಕೊಂಡಿದ್ದೆ. ಸತೀಶ್ ಅವರು ನನ್ನ ಸ್ನೇಹಿತರು. ಇತ್ತೀಚೆಗೆ ಸಿಕ್ಕಾಗ ಅವರು ಈ ಕಥೆ ಹೇಳಿದರು. ಇಂದಿನ ರಾಜಕೀಯವನ್ನು ವ್ಯಂಗ್ಯವಾಗಿ ಹೇಳುವ ಸಬ್ಜೆಕ್ಟ್ ಇದು' ಎಂದಿದ್ದಾರೆ.

ನಾಯಕಿ ಜಾಹ್ನವಿ ಅವರಿಗೆ ಇದು ಮೊದಲ ಚಿತ್ರ. ನಾಯಕಿ ಮನೋವಿಜ್ಞಾನ ವಿದ್ಯಾರ್ಥಿನಿ. ರಜಾಕಾಲದಲ್ಲಿ ಊರಿಗೆ ಬಂದಾಗ ನಾಯಕನ ಪರಿಚಯವಾಗಿ ಅವನಿಗೆ ಪೂರಕವಾಗಿ ಕೆಲಸ ಮಾಡುತ್ತಾಳೆ. ಮುಂದೇನು ಅನ್ನುವುದನ್ನು ಚಿತ್ರ ಹೇಳಲಿದೆಯಂತೆ.

ಹಿರಿಯ ಕಲಾವಿದರಾದ ಎಂ.ಎನ್.ಲಕ್ಷ್ಮೀದೇವಿ, ಅಶೋಕ್, ಸಾಧು ಕೋಕಿಲ, ನವೀನ್ ಡಿ. ಪಡೀಲ್, ಹುಲಿ ಕಾರ್ತಿಕ್ ಅಭಿನಯಿಸಿದ್ದಾರೆ. ಚಿತ್ರದಲ್ಲಿ 3 ಹಾಡುಗಳಿವೆ. ಶೀರ್ಷಿಕೆ ಗೀತೆಯನ್ನು ಚಂದನ್ ಶೆಟ್ಟಿ ಹಾಡಿದ್ದಾರೆ. ರಾಜಕೀಯ ವಿಡಂಬನೆಯ ಹಾಡನ್ನು ಉಪೇಂದ್ರ ಹಾಡಿದ್ದಾರೆ. ಇನ್ನು ಡ್ಯುಯೆಟ್ ಹಾಡಿಗೆ ಜಯಂತ್ ಕಾಯ್ಕಿಣಿ ಸಾಹಿತ್ಯ ಬರೆದಿದ್ದಾರೆ. ದರ್ಬಾರ್ ಪ್ರೊಡಕ್ಷನ್ಸ್ ಮೂಲಕ ಬಿ.ಎನ್. ಶಿಲ್ಪಾ ಅವರು ನಿರ್ಮಾಣ ಮಾಡಿದ್ದಾರೆ. ಮಾಸ್ ಮಾದ, ವಿನೋದ್ ಸಾರಥ್ಯದ 3 ಸಾಹಸ ದೃಶ್ಯಗಳು ಚಿತ್ರದಲ್ಲಿವೆ. ಮಂಡ್ಯ, ಮದ್ದೂರು ಹಾಗೂ ಕೋಲಾರ ಸಮೀಪದ ಮಾಲೂರಿನಲ್ಲಿ ಚಿತ್ರೀಕರಣ ನಡೆದಿದೆ. ಏಪ್ರಿಲ್‌ನಲ್ಲಿ ಈ ಚಿತ್ರ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಎಡೆಬಿಡದ ಚೈತನ್ಯದ ರಕ್ಷೆ

ನವನವ ಪ್ರಶ್ನೆಗಳು, ನವನವ ಪರೀಕ್ಷೆಗಳು |
ದಿವಸಾಬ್ದಯುಗ ಚಕ್ರ ತಿರು ತಿರುಗಿದಂತೆ ||
ಪ್ರವಹಿಪ್ಪುವದರಂತೆ ಪೌರುಷ ಹಿತಪ್ರಜ್ಞೆ |
ಅವಿರತದ ಚೈತನ್ಯ – ಮಂಕುತಿಮ್ಮ || 852 ||

ಪದ-ಅರ್ಥ: ದಿವಸಾಬ್ದಯುಗ = ದಿವಸ + ಅ-ಬ್ದ(ವರ್ಷ) + ಯುಗ, ಪ್ರವಹಿಪ್ಪುವದರಂತೆ- = ಪ್ರವಹಿಪವು(ಹರಿಯುವವು) + ಅದರಂತೆ- ,ಅವಿರತದ = ಬಿಡುವಿಲ್ಲದ.

ವಾಚ್ಯಾರ್ಥ: ದಿವಸ, ವರ್ಷ, ಯುಗಗಳು ಚಕ್ರದಂತೆ ತಿರುಗಿದಾಗ ಹೊಸಹೊಸ ಪ್ರಶ್ನೆಗಳು, ಹೊಸಹೊಸ ಪರೀಕ್ಷೆಗಳು ಎದುರಾಗುತ್ತವೆ. ಅಂತೆಯೇ ವ್ಯಕ್ತಿಯ ಪೌರುಷ, ಹಿತದ ಪ್ರಜ್ಞೆ ಬದಲಾಗುತ್ತಿರುವುದು ಬಿಡುವಿಲ್ಲದೆ ಸ್ಫುರಿಸುವ ಚೈತನ್ಯದ ಗುಣ.

ವಿವರಣೆ: ಮಾನವ ಇತಿಹಾಸವನ್ನು ತಿರುಗಿ ನೋಡಿದರೆ ಪರಮಾದ್ಭುತವೊಂದು ಎದ್ದು ಕಾಣುತ್ತದೆ. ಅದೆಂದರೆ ಮಾನವನೆಂಬ ಜೀವಿ ಭೂಮಿಯ ಮೇಲೆ ಬಂದಾಗಿನಿಂದ ಇಲ್ಲಿಯವರೆಗೆ ಕಾಲದ ಪ್ರಭಾವದಿಂದ ಬದಲಾವಣೆಗಳು ನಡೆಯುತ್ತಲೇ ಇದ್ದರೂ, ಅವು ಮಾನವನ ಅಸ್ತಿತ್ವಕ್ಕೇ ತೊಂದರೆಯಾಗಬಹುದೆಂದು ಕಂಡರೂ, ಅನೇಕ ಮಹಾಪ್ರಳಯದಂತಹ ಸ್ಥಿತಿಗಳು ಬಂದೊದಗಿದರೂ, ಮನುಷ್ಯ ಉಳಿದೇ ಇದ್ದಾನೆ. ಅವನು ಮುಂದಕ್ಕೆ ಮುಖವನ್ನು ಆಸೆಯತ್ತ ಚಾಚಿದ್ದಾನೆ. ಮೊದಲು ಹಸಿವು, ರಕ್ಷಣೆಯ ಭಯ, ನಂತರ ಪ್ರಾಣಿಗಳನ್ನು ವ್ಯವಸಾಯಕ್ಕಾಗಿ ಪಳಗಿಸಿಕೊಳ್ಳುವ ಶ್ರಮ, ರೋಗರುಜಿನಗಳಿಂದ, ಪ್ರಕೃತಿಯ ವಿಕೋಪಗಳಿಂದ ಪಾರಾಗುವ ಸಂಕಟ. ಇದಾದ ನಂತರ ಒಂದು ಸಾಮಾಜಿಕ ನೆಲೆ ನಿರ್ಮಾಣವಾದ ಮೇಲೆ ಅವನಲ್ಲಿ ಆಲೋಚನೆಯ ಕ್ಷೇತ್ರ ವಿಸ್ತಾರವಾಗತೊಡಗಿತು. ತಾನು ಪಡೆದ ಜ್ಞಾನವನ್ನು ಜೀವನದಲ್ಲಿ ಅಳವಡಿಸತೊಡಗಿದ. ಮನೆ, ವಸ್ತ್ರ, ವಾಹನಗಳು ಬಂದವು. ಅದರೊಂದಿಗೇ ವಿಶೇಷವಾದ, ಆಸೆ, ದುರಾಸೆಗಳು ಹುಟ್ಟಿಕೊಂಡವು. ಹೀಗೆ ಮನುಷ್ಯ ಅನ್ನಮಯಕೋಶದಿಂದ ಬೆಳೆಯುತ್ತ ಪ್ರಾಣಮಯ ಕೋಶ, ಮನೋಮಯ ಕೋಶಗಳನ್ನು ದಾಟಿ ವಿಜ್ಞಾನಮಯ ಕೋಶವನ್ನು ಪ್ರವೇಶಿಸುವವರೆಗೆ ಅವನು ಎದುರಿಸಿದ ಸಮಸ್ಯೆಗಳು, ಪರೀಕ್ಷೆಗಳು ಹಲವಾರು. ಹೆಜ್ಜೆಹೆಜ್ಜೆಗೆ, ಪ್ರತಿಯೊಂದು ಹಂತದಲ್ಲೂ ಅವನನ್ನು ಇವು ಹಿಂಡಿ ಎಳೆದವು. ಕೆಲವರು ಮಾತ್ರ ಕೊನೆಯ ಸಚ್ಚಿದಾನಂದಕೋಶವನ್ನು ತಲುಪಿದರು. ಹೀಗೆ ಪ. ದಿನ, ವರ್ಷ, ಯುಗಗಳು ಉರುಳಿದಂತೆ ಮನುಷ್ಯ ಎದುರಿಸಿದ ಪ್ರಶ್ನೆಗಳು, ಸಮಸ್ಯೆಗಳು ಅನೇಕ ಮತ್ತು ವಿಭಿನ್ನ, ಆದರೆ ಆಶ್ಚರ್ಯವೆಂದರೆ ಇವೆಲ್ಲ ಅಗ್ನಿಪರೀಕ್ಷೆಗಳ ನಂತರವೂ ಮನುಷ್ಯ ಎದೆಗುಂದಲಿಲ್ಲ, ಮಾನವ ಸರಪಳಿ ಕತ್ತರಿಸಿ ನಿರ್ನಾಮವಾಗಲಿಲ್ಲ, ಬದಲಾಗಿ ಹೆಚ್ಚು ಪ್ರಬಲವಾಗಿ, ಶಕ್ತಿಯುತವಾಗಿ ಬೆಳೆದು ನಿಂತಿತು. ಇದಕ್ಕೆ ಕಾರಣವನ್ನು ಕಗ್ಗ ನೀಡುತ್ತದೆ. ಕಣ್ಣಿಗೆ ಕಾಣದಂತೆ ಇರುವ ಬ್ರಹ್ಮಸತ್ವ ಸದಾಕಾಲ ಪ್ರವಹಿಸುತ್ತ ಮನುಷ್ಯನಲ್ಲಿ ಪೌರುಷ, ಹಿತಪ್ರಜ್ಞೆಯನ್ನು ಬೆಳೆಸುತ್ತಲೇ ಇದೆ. ಚೈತನ್ಯದ ಪ್ರವಾಹ ಯಾವಾಗಲೂ ತಡೆಯಿಲ್ಲದಂತೆ ಇರುವುದು. ಹೀಗಾಗಿ ಎಂತಹ ಸಮಸ್ಯೆ, ಪರೀಕ್ಷೆ ಬಂದರೂ ಈ ಚೈತನ್ಯ ಅದು ನಂದಿಹೋಗದಂತೆ ಕಾಪಾಡುತ್ತಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮಾರ್ಚ್ 30, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ನವಮಿ ಗಂ. 23-31, ನಕ್ಷತ್ರ: ಪುನರ್ವಸು ಗಂ. 22-59 ಯೋಗ: ಅತಿಗಂಡ, ಗಂ. 25-02, ಕರಣ: ಬಾಲವ ಗಂ. 10-18, ಮೀನ ಮಾಸದ 15ನೇ ದಿನ.
ರಾಹುಕಾಲ : ಮಧ್ಯಾಹ್ನ 01-30 –03-00 ಸೂರ್ಯೋದಯ : 06-31 ಸೂರ್ಯಾಸ್ತ : 06-39. ಮುಸ್ಲಿಂ ದಿನಾಂಕ : 07 ರಂಜಾನ್
ದಿನ ವಿಶೇಷ : ರಾಮ ನವಮಿ
ಅದೃಷ್ಟ ಸಂಖ್ಯೆ : 7, 2

ಮೇಷ: ತಾಯಿಯ ಬ್ಯಾಂಕ್ ಹಾಗೂ ಕಚೇರಿ ಕೆಲಸಗಳು ನಿಮ್ಮ ಜವಾಬ್ದಾರಿಗೆ ಬರುವುದರಿಂದ ತಿರುಗಾಟ ಮಾಡಬೇಕಾಗುವುದು. ಕೆಲವು ವಿಷಯಗಳು ಸರಿಯಾದ ಸಮಯಕ್ಕೆ ಮರೆತು ಹೋಗಿ ತೊಳಲಾಟಕ್ಕೆ ಒಳಗಾಗಬೇಕಾದೀತು.

ವೃಷಭ: ಪ್ರತಿಯೊಬ್ಬರ ಬೇಕು ಬೇಡಗಳನ್ನು ಅರಿತು ತುಂಬು ಕುಟುಂಬವನ್ನು ನಿಭಾಯಿಸುತ್ತಿರುವವರನ್ನು ಅತಿಥಿಗಳು ಮುಕ್ತ ಕಂಠದಿಂದ ಶ್ಲಾಘಿಸುತ್ತಾರೆ. ವಿದ್ಯಾಭ್ಯಾಸದ ಸಮಯದಲ್ಲಿ ಏಕಾಗ್ರತೆ ಮುಖ್ಯವಾಗುತ್ತದೆ.

ಮಿಥುನ: ಬರಹಗಾರರಾಗಬೇಕು ಎಂಬ ಪಥದಲ್ಲಿ ಸಾಗುತ್ತಿರುವವರಿಗೆ ಪ್ರಸಿದ್ಧ ಬರಹಗಾರರ ಬರಹಗಳನ್ನು ಓದಿ ನಿಮ್ಮ ಬರವಣಿಗೆಗೆ ಒಂದು ರೂಪುರೇಷೆ ದೊರೆಯುತ್ತದೆ. ಎಷ್ಟೇ ತಾಳ್ಮೆ ಹೊಂದಿದ್ದರೂ ಕಡಿಮೆ ಆಗಬಹುದು.

ಕರ್ಕಾಟಕ: ಈ ಬಾರಿಯು ನಿಮ್ಮ ಉತ್ತಮ ಕಾರ್ಯಕ್ರಮ ನಿರ್ವಹಣೆಗೆ ಉತ್ತಮ ಪ್ರತಿಕ್ರಿಯೆಗಳು ಬರುತ್ತವೆ. ಯಾವುದೇ ಕೆಲಸಗಳಿದ್ದರೂ ಮನೆಯ ಜವಾಬ್ದಾರಿ ನಿರ್ವಹಣೆ ಮರೆಯುವುದು ಸೂಕ್ತವಲ್ಲ.

ಸಿಂಹ: ಅತ್ಯಂತ ಜಟಿಲ ಸಮಸ್ಯೆಗೆ ಬೇರೆಯವರಿಗೆ ಸುಲಲಿತ ಪರಿಹಾರ ಸೂಚಿಸುವ ನೀವು ನಿಮ್ಮದೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಎಡವುತ್ತೀರಿ. ವಾಹನದ ಖರೀದಿಗೆ ಸೂಕ್ತ ಸಮಯ.

ಕನ್ಯಾ: ಸಂಪೂರ್ಣ ಸಾವಯವ ವ್ಯವಸಾಯ ಮಾಡಿ ತಾಜಾ ತರಕಾರಿ ಹಾಗೂ ಹಣ್ಣುಗಳ ಮಾರಾಟಗಾರರಿಗೆ ಲಾಭ ಅಧಿಕವಾಗಲಿದೆ. ಪೂರ್ಣ ಮನಸ್ಸಿನಿಂದ ಮಾಡಿದ ಕಾರ್ಯಗಳು ಉತ್ತಮ ಫಲ ನೀಡುತ್ತವೆ.

ತುಲಾ: ಗಣಕಯಂತ್ರದ ತಯಾರಕರು ಹಾಗೂ ಸರಿ ಪಡಿಸುವ ವ್ಯಕ್ತಿಗಳಿಗೆ ಉತ್ತಮ ದಿನವಾಗಲಿದೆ. ಪ್ರಾಮಾಣಿಕವಾಗಿ ಸಂಪಾದನೆ ಮಾಡುತ್ತಿರುವ ನಿಮಗೆ ಶತ್ರುಗಳ ಭಯ ಬೇಡವೆ ಬೇಡ. ಕಲಹಗಳಲ್ಲಿ ಮೌನವಾಗಿರಿ.

ವೃಶ್ಚಿಕ: ಉದ್ಯೋಗದ ವಿಷಯದಲ್ಲಿ ಉತ್ತಮ ಅವಕಾಶಗಳು ನಿರ್ಲಕ್ಷ್ಯದಿಂದ ಕೈತಪ್ಪುವ ಸಂದರ್ಭಗಳು ಎದುರಾಗಬಹುದು. ತಂದೆ ತಾಯಿಯರ ಸಂತೋಷ ಸಂತಸಕ್ಕೆ ಕಾರಣವಾಗಲಿದೆ.

ಧನು: ಶೈಕ್ಷಣಿಕ ಹಾಗೂ ಸಾಂಸಾರಿಕ ಪರೀಕ್ಷೆಗಳೆರಡರಲ್ಲೂ ಉತ್ತಮ ಫಲಿತಾಂಶವನ್ನು ಪಡೆಯಲು ಪ್ರಯತ್ನ ಈಗಿನದ್ದಕ್ಕಿಂತ ಹೆಚ್ಚು ಅಗತ್ಯವಿದೆ. ಸಂತೋಷದ ಗಳಿಗೆಯಲ್ಲಿ ಯಾರಿಗೂ ಭರವಸೆಗಳನ್ನು ನೀಡದಿರಿ.

ಮಕರ: ಸಣ್ಣ ಸಣ್ಣ ಸಮಸ್ಯೆಗಳನ್ನು ದೊಡ್ಡ ಸಮಸ್ಯೆಯನ್ನಾಗಿ ಮಾಡಿಕೊಂಡು ಪರಿಹಾರವನ್ನು ಕ್ಲಿಷ್ಟಕರವನ್ನಾಗಿ ಮಾಡಿಕೊಳ್ಳದಿರಿ. ಎಷ್ಟೇ ದೊಡ್ಡ ಹುದ್ದೆಯಲ್ಲಿದ್ದರು ಸಹ ನಿಮ್ಮ ಊರು ಮನೆಯವರ ವಿಶ್ವಾಸ ಉಳಿಸಿಕೊಳ್ಳಿ.

ಕುಂಭ: ಕುಟುಂಬದವರ ಜೊತೆ ಕಳೆಯುವ ಪ್ರತಿ ಕ್ಷಣ ನೆನಪಿಟ್ಟುಕೊಳ್ಳಬೇಕಾದಂತಹ ಸನ್ನಿವೇಶಗಳಾಗಿರುತ್ತದೆ. ಸಹೋದರ ಸಹೋದರಿಯರ ಜೀವನದ ಮುಖ್ಯ ಘಟನೆಗಳನ್ನು ಮತ್ತೊಮ್ಮೆ ಸ್ಮರಿಸುವಿರಿ.

ಮೀನ: ಸಜ್ಜನರ ಹಾಗು ದುರ್ಜನರ ಸಹವಾಸಗಳು ಅವವೇ ಫಲಗಳನ್ನು ಕೊಡುವುದು ಅನುಭವಕ್ಕೆ ಸರಿಯಾಗಿ ಬರುತ್ತದೆ. ಮನೆಯ ದುರಸ್ತಿ ಕಾರ್ಯಗಳು ಅಥವಾ ನೂತನ ಮನೆ ನಿರ್ಮಾಣವನ್ನು ಬೇಗ ಮುಗಿಸಿ.

ಪದಬಂಧ 5273

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜಮೀನ್ದಾರನ ಹೊಟ್ಟೆ (3)
6.ಉತ್ತರ ನೀಡುತ್ತಿದ್ದವನಿಗೆ ಈ ಹೊಣೆಗಾರಿಕೆ! (5)
7.ನರಿಯಲ್ಲಿ ಸಿಕ್ಕೀತೇ ಉತ್ತಮ ಜಾತಿಯ ಜೇನುತುಪ್ಪ? (3)
10.ಸಾಯುವಾಗ ಆಡಿದ ಕೊನೆಯ ಮಾತು (5)
14.ಸಂಗಾತಿ ಹೇಳಿದ ವಿಷಯ (3)
16.ಈತ ದಾರಿ ತೋರುವವನು (5)
17.ವನದ ಬಗ್ಗೆ ಬರೆದ ಪದ್ಯ (3)

ಮೇಲಿಂದ ಕೆಳಕ್ಕೆ
1.ಎಡಬಿಡದಿರುವ ಹನಿಯ ಮಳೆ (4)
2.ದ್ರವ ಒಸರುವ ಜಿಹ್ವೆ (3)
3.ಹಳೆ ಸಾಮಾನುಗಳನ್ನು ಮಾರುವ ಸ್ಥಳ (3)
4.ಬಾಣ ಬಿದ್ದಿರುವ ಸಮುದ್ರ (3)
5.ಹಣದಲ್ಲಿ ಕಾಣುತ್ತಿರುವ ದೊಡ್ಡ ತಟ್ಟೆ (4)
8.ಕಾರಣ ಸಹಿತವಾದುದು (4)
9.ಹಾಲು ಮಾರುವವನು (4)
11.ಒಪ್ಪವಾಗಿ ಮರ್ಯಾದೆಯಿಟ್ಟುಕೊಂಡಿರುವ ಶಂಕೆ (4)
12.ಈತ ಬುದ್ಧಿಯೇ ಇಲ್ಲದವ (4)
13.ಧಣಿಯನ್ನು ನೋಡಲು ಸೇರಿರುವ ಗುಂಪು (3)
14.ಕೈ ಕೊನೆಗಿದ್ದಾಗಿನ ಮಿಶ್ರಣ (3)
15.ಎಳ್ಳಿನಿಂದಿರಿಸಿಕೊಂಡಿರುವ ಹಣೆ ಬೊಟ್ಟು (3)



5272ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಕಲನ 2.ಪ್ರಮುಖ 4.ಕಣಕ 6.ಉದರ 7.ನವೀಕರಿಸು 10.ಕಲ್ಯಾಣ 11.ತರಂಗ 13.ಗರುಡ 14.ಕಲಾವಿದ

ಮೇಲಿಂದ ಕೆಳಕ್ಕೆ:
1.ಸಂದೂಕ 2.ಪ್ರಸ್ತಾರ 3.ಖಡ್ಗಧಾರೆ 5.ಕದನ 6.ಉಪಕರಣ 8.ಸುಕೃತ 9.ಉಪ್ಪಲಿಗ 10.ಕನ್ನಡ 12.ಗದ್ಗದ

ಸುಡೊಕು 5659

	2			3		4		6
4		1	5		2		8	
				4			5	1
	9				4	6		
6		2		8				5
		4	2			3		
				2				9
	1	3	8		5			
9	4		6		3	8		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5658 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಷೇರುಪೇಟೆ ವಹಿವಾಟು

346



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,951
ಇಂದಿನ ಅಂತ್ಯ	17,080
▲	129
ದಿನದ ಗರಿಷ್ಠ	17,126

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14500
ಎಸಿ	₹7700
ಆರ್‌ಪಿ	₹10250
ಆರ್‌ಸಿ	₹5160

ಶ್ರೀರಾಮ: ಆದರ್ಶ ರಾಜ

• ಎಸ್. ಸೂರ್ಯಪ್ರಕಾಶ ಪಂಡಿತ್

ಶ್ರೀರಾಮ ನವಮಿ

ಕರ್ನಾಟಕದಲ್ಲಿ ಇದೀಗ ಚುನಾವಣೆ ಘೋಷಣೆಯಾಗಿದೆ. ಇದರ ಸಂಗಡವೇ ಶ್ರೀರಾಮನವಮಿಯ ಆಚರಣೆಯೂ ಬಂದಿದೆ. ಚುನಾವಣೆಗೂ ರಾಮಾಯಣಕ್ಕೂ ಏನು ಸಂಬಂಧ? ನೇರವಾದ ಸಂಬಂಧವೇ ಇದೆಯೆನ್ನಿ!

ಚುನಾವಣೆಯ ಉದ್ದೇಶ ಏನು? ನಮ್ಮ ನಾಯಕನನ್ನು ಆರಿಸಿಕೊಳ್ಳುವುದು; ಪ್ರಭುತ್ವವನ್ನು ಸ್ಥಾಪಿಸಿಕೊಳ್ಳುವುದು; ಸರಳವಾಗಿ ಹೇಳುವುದಾದರೆ, ನಮ್ಮ 'ರಾಜ'ನನ್ನು ನಾವೇ ಗೆಲ್ಲಿಸಿಕೊಳ್ಳುವುದು. ಶ್ರೀರಾಮನೂ ಕೂಡ 'ರಾಜ'ನೇ ಹೌದು. ರಾಮನ ಕಥೆಯಾದ ರಾಮಾಯಣದ ಉದ್ದಕ್ಕೂ ನಾವು ಕಾಣುವುದು ಒಬ್ಬ ಆದರ್ಶ ರಾಜ ಹೇಗಿರಬೇಕು – ಎಂದೇ ಹೌದು.

ಚುನಾವಣೆ ಎಂಬುದು ಪ್ರಜಾಪ್ರಭುತ್ವದ ಅದ್ಭುತ ಪರಿಕಲ್ಪನೆ; ಪ್ರಜೆಗಳ ಆಯ್ಕೆಗೇ ಇಲ್ಲಿ ಮನ್ನಣೆ. ಆದರೆ, ರಾಮಾಯಣ ಕಾಲದ ಪ್ರಭುತ್ವ ಎಂದರೆ ಅದು ರಾಜಪ್ರಭುತ್ವ; ಅಲ್ಲಿ ಪ್ರಜೆಗಳ ಆಯ್ಕೆಗಿಂತಲೂ ವಂಶ, ಹಕ್ಕು – ಇಂಥವು ಮುಖ್ಯವಾಗುತ್ತವೆ. ಹೀಗಿದ್ದರೂ ರಾಮನ ಒಟ್ಟು ಆಡಳಿತವು ಜನಾಭಿಪ್ರಾಯದಿಂದಲೇ ರೂಪಿತವಾಗುತ್ತಿತ್ತು ಎನ್ನುವುದು ಗಮನಾರ್ಹ. ಒಬ್ಬ ಆದರ್ಶ ರಾಜ ಮತ್ತು ಆದರ್ಶ ಪ್ರಜೆ ಹೇಗಿರಬೇಕು ಎಂಬುದಕ್ಕೆ ಸುಂದರ ನಿದರ್ಶನವೇ ರಾಮನ ವ್ಯಕ್ತಿತ್ವ.

ರಾಜನಾದವನು ಹೇಗಿರಬೇಕು – ಎಂಬುದನ್ನೇ ನಾವು ರಾಮನ ನಡೆ-ನುಡಿಗಳಲ್ಲಿ ಕಾಣುವುದು. ರಾಜನಾದವನು ತನ್ನ ವೈಯಕ್ತಿಕ ಬಾಂಧವ್ಯಗಳನ್ನೂ ಬಾಧ್ಯತೆಗಳನ್ನೂ ನಿರ್ವಹಿಸುವಾಗ ಒದಗುವ ಧಾರ್ಮಿಕ ತಿಕ್ಕಾಟವನ್ನು ರಾಮಾಯಣವು ಅಪೂರ್ವವಾಗಿ ಕಾಣಿಸಿದೆ. ಇಂದಿಗೂ ನಾವು ರಾಮನನ್ನು ವಿಮರ್ಶಿಸುವುದು ಅವನ ಜೀವನದಲ್ಲಿ ಒದಗಿದ ಇಂಥ ತಿಕ್ಕಾಟ ಸಂದರ್ಭಗಳಲ್ಲಿನ ಅವನ ನಿಲುವುಗಳನ್ನೇ ಹೌದಲ್ಲವೆ?

'ಪಿತಾ ಹಿ ಸರ್ವಭೂತಾನಾಂ ರಾಜಾ ಭವತಿ ಧರ್ಮತಃ'. ಎಂದರೆ, ಧರ್ಮದ ದೃಷ್ಟಿಯಲ್ಲಿ ರಾಜನು ಪ್ರಜೆಗಳಿಗೆಲ್ಲ ತಂದೆಯಾಗುತ್ತಾನೆ. ಇದು ರಾಮಾಯಣದಲ್ಲಿ ಬರುವ ಒಂದು ಮಾತು. ರಾಜ ಮತ್ತು ಪ್ರಜೆಗಳ ಸಂಬಂಧ ತಂದೆ-ಮಕ್ಕಳ ನಂಟನಂತೆ ಇರಬೇಕು ಎಂಬುದು ಇದರ ತಾತ್ಪರ್ಯ. ಆದರೆ, ಇದು ಕರ್ತವ್ಯಬದ್ಧ ನಂಟೇ ಹೊರತು ಸ್ವಾರ್ಥಪ್ರೇರಿತ ಅಂಟಲ್ಲ. 'ರಾಜನ ನಡತೆ ಹೇಗಿರುತ್ತದೆಯೋ ಹಾಗೆಯೇ ಪ್ರಜೆಗಳೂ ನಡೆದುಕೊಳ್ಳುತ್ತಾರೆ' ಎಂಬ ಸೂತ್ರದ ಎಚ್ಚರಿಕೆಯನ್ನು ಪಾಲಿಸಿದವನು ಶ್ರೀರಾಮ. ವಾಲ್ಮೀಕಿಗಳು ಅವನನ್ನು ಧರ್ಮದ ಮೂರ್ತರೂಪ ಎಂದು ಕಂಡರಿಸಿದ್ದಾರೆ. ಅವನು ಎಂದಿಗೂ ಧರ್ಮವನ್ನು ಮೀರಿ ನಡೆದವನಲ್ಲ; ರಾಜನಾಗಿಯೂ ಪ್ರಜೆಯಾಗಿಯೂ ಮಗನಾಗಿಯೂ ಸ್ನೇಹಿತನಾಗಿಯೂ ಸ್ವಾಮಿಯಾಗಿಯೂ ಪತಿಯಾಗಿಯೂ ಅವನು ಧರ್ಮಮಾರ್ಗದಲ್ಲೇ ನಡೆದವನು ಎಂದು ವಾಲ್ಮೀಕಿಗಳು ಕಾಣಿಸಿದ್ದಾರೆ. ರಾಮನು ರಾಜನಾಗಲಿ ಎಂದು ಇಡೀ ರಾಜ್ಯವೇ ಬಯಸುತ್ತಿದ್ದಿತಂತೆ. ಏಕೆಂದರೆ ಅವನು ಧರ್ಮಾತ್ಮ; ಎಲ್ಲರಿಗೂ ಪ್ರಿಯನಾದವನು; ಎಲ್ಲರ ಒಳಿತನ್ನೂ ಕಾಪಾಡುವವನು ಎಂದು. ಇದಕ್ಕೆ ಉದಾಹರಣೆಯಾಗಿ ವಾಲ್ಮೀಕಿಗಳು ಹೇಳುವ ಮಾತೊಂದು ತುಂಬ ಮಾರ್ಮಿಕವಾಗಿದೆ: 'ರಾಮನಿಗೆ ಒಳಿತಾಗಲಿ ಎಂದು ರಾಜ್ಯದಲ್ಲಿಯ ತರುಣಿಯರು, ಮುದುಕಿಯರು ಸೇರಿದಂತೆ ಎಲ್ಲ ಸ್ತ್ರೀಯರೂ ಪ್ರಾತಃಕಾಲ ಮತ್ತು ಸಾಯಂಕಾಲ ಭಕ್ತಿಯಿಂದ ದೇವತೆಗಳನ್ನು ಪ್ರಾರ್ಥಿಸಿಕೊಳ್ಳುತ್ತಿದ್ದರಂತೆ'. ಇನ್ನೂ ಒಂದು ಮಾತನ್ನು ವಾಲ್ಮೀಕಿಗಳು ಹೇಳುತ್ತಾರೆ: ಶ್ರೀರಾಮನನ್ನು ಪ್ರಜೆಗಳು ತಮ್ಮ ಉಸಿರು ಎಂಬುದಾಗಿಯೇ ಪ್ರೀತಿಸುತ್ತಿದ್ದರಂತೆ. ಎಂದರೆ, ರಾಮನು ರಾಜನಾಗಬೇಕೆಂದು ದಶರಥನು ನಿರ್ಧರಿಸಿದ್ದರೂ ಅದು ಪ್ರಜೆಗಳಿಗೆ ಇಷ್ಟವಾದ ಆಯ್ಕೆಯೇ ಆಗಿತ್ತು ಎಂಬುದನ್ನು ಮರೆಯುವಂತಿಲ್ಲ. ಹೀಗಾಗಿಯೇ ರಾಮನು ಪ್ರಜೆಗಳ ಸುಖಕ್ಕೆ ಹೆಚ್ಚಿನ ಗಮನವನ್ನೂ ಅವರ ಮಾತುಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನೂ ಕೊಟ್ಟದ್ದು.

ರಾಮಾಯಣದ ಉದ್ದಕ್ಕೂ ಶ್ರೀರಾಮನನ್ನು ವಾಲ್ಮೀಕಿಗಳು ಹಲವು ವಿಶೇಷಣಗಳಿಂದ ಕೊಂಡಾಡುತ್ತಾರೆ; ಅವುಗಳಲ್ಲಿ ಒಂದು: 'ಸತ್ಯಪರಾಕ್ರಮಃ'. ರಾಮ ಅಪ್ರತಿಮ ವೀರ; ಈ ಮಹಾವೀರನ ಆಯುಧವಾದರೂ ಏನು? ಸತ್ಯವೇ ಅವನ ಆಯುಧ!

ಇದು ಚುನಾವಣೆಯ ಸಮಯ. ರಾಜಕಾರಣಿಗಳೂ ಮತದಾರರೂ ಶ್ರೀರಾಮನು ಎತ್ತಿಹಿಡಿದ ಆ ಸತ್ಯವನ್ನು ತಾವೂ ಕಂಡುಕೊಳ್ಳುತ್ತಾರೆ ಎಂದು ನಾವು ಆಶಿಸಬಹುದೆ? ❖

ನಟ ಮಾಧವನ್ ಜೋಸ್ ಅಲುಕ್ಕಾಸ್ ರಾಯಭಾರಿ

ಪ್ರಜಾವಾಣಿ ವಾರ್ತೆ



ಆರ್. ಮಾಧವನ್

ಬೆಂಗಳೂರು: ನಟ ಆರ್. ಮಾಧವನ್ ಅವರು ಚಿನ್ನಾಭರಣ ಮಾರಾಟ ಕಂಪನಿ ಜೋಸ್ ಅಲುಕ್ಕಾಸ್‌ನ ಬ್ರ್ಯಾಂಡ್ ರಾಯಭಾರಿಯಾಗಿ ಕೆಲಸ ಮಾಡಲು ಒಪ್ಪಂದಕ್ಕೆ ಸಹಿ ಮಾಡಿದ್ದಾರೆ.

ಮಾಧವನ್ ಅವರಲ್ಲದೆ, ನಟಿ ಕೀರ್ತಿ ಸುರೇಶ್ ಅವರು ಈ ಕಂಪನಿಯ ಬ್ರ್ಯಾಂಡ್ ರಾಯಭಾರಿಯಾಗಿ ಮುಂದುವರಿಯಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜೋಸ್ ಅಲುಕ್ಕಾಸ್ ಕಂಪನಿಯು ತನ್ನ ಮಾರುಕಟ್ಟೆಯನ್ನು ದೇಶದ ಎಲ್ಲೆಡೆ ದೊಡ್ಡ ಮಟ್ಟದಲ್ಲಿ ವಿಸ್ತರಿಸುವ ಉದ್ದೇಶ ಹೊಂದಿದೆ ಎಂದು ಅಧ್ಯಕ್ಷ ಜೋಸ್ ಅಲುಕ್ಕಾ ಹೇಳಿದ್ದಾರೆ.

ಭಾರತಕ್ಕೆ ತೈಲ ರಫ್ತು ಹೆಚ್ಚಿಸಲು ರೊಸ್ನೆಫ್ಟ್ ಒಪ್ಪಂದ

ಮಾಸ್ಕೊ (ಎಎಫ್‌ಪಿ): ರಷ್ಯಾದ ರೊಸ್ನೆಫ್ಟ್ ಕಂಪನಿಯು ತಾನು ಭಾರತಕ್ಕೆ ರಫ್ತು ಮಾಡುವ ಕಚ್ಚಾ ತೈಲದ ಪ್ರಮಾಣವನ್ನು ಹೆಚ್ಚಿಸಲು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಜೊತೆ ಒಪ್ಪಂದ ಮಾಡಿಕೊಂಡಿರುವುದಾಗಿ ಬುಧವಾರ ತಿಳಿಸಿದೆ.

ರೊಸ್ನೆಫ್ಟ್ ಸಿಇಒ ಇಗಾರ್ ಸೆಷಿನ್ ಅವರು ಭಾರತಕ್ಕೆ ಭೇಟಿ ನೀಡಿ, ಐಒಸಿ ಜೊತೆ ಒಪ್ಪಂದ ಮಾಡಿಕೊಂಡಿದ್ದಾರೆ. ಆದರೆ, ಭಾರತಕ್ಕೆ ರಫ್ತು ಮಾಡಲಿರುವ ಕಚ್ಚಾ ತೈಲದ ಪ್ರಮಾಣ ಹಾಗೂ ಅದರ ಬೆಲೆಯನ್ನು ರೊಸ್ನೆಫ್ಟ್ ಬಹಿರಂಗಪಡಿಸಿಲ್ಲ.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹139
ಗುಡ್ ಲಾಟ್	₹131

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಕೋಕ	26399-31800	ಬಿಳಿಗೋಟು	25109-31100
ಕೋಕ	12500-25000	ಹೊಸಚಾಲಿ	32699-35099	ಚಾಲಿ	33208-35631
ಹೊಸತು	22500-40000	ಕೆಂಪುಗೋಟು	30112-31699	ಕೆಂಪುಗೋಟು	26199-34309
ಹಳತು	48000-54500	ರಾಶಿ	42309-44099	ರಾಶಿ	42298-46699
ಸಿದ್ದಾಪುರ		ತಟ್ಟಿಬೆಟ್ಟೆ	36909-42809	ಪುತ್ತೂರು	
ಬಿಳಿಗೋಟು	26679-31699	ಶಿರಸಿ		ಕೋಕ	11000-26000
ಚಾಲಿ	33299-34899	ಬೆಟ್ಟೆ	33200-42299	ಹೊಸತು	32000-38300

30 ದಿನಗಳಲ್ಲಿ ದಂಡ ಪಾವತಿಸಲು ಗೂಗಲ್‌ಗೆ ಎನ್‌ಸಿಎಲ್‌ಎಟಿ ಸೂಚನೆ

ಸಿಸಿಐ ಆದೇಶ ಭಾಗಶಃ ಊರ್ಜಿತ

ನವದೆಹಲಿ (ಪಿಟಿಐ/ರಾಯಿಟರ್ಸ್): ಆ್ಯಂಡ್ರಾಯ್ಡ್ ಮೊಬೈಲ್ ಸಾಧನಗಳ ಪ್ರಕರಣದಲ್ಲಿ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ನೀಡಿದ್ದ ಆದೇಶವನ್ನು ಭಾಗಶಃ ಎತ್ತಿಹಿಡಿದಿರುವ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು (ಎನ್‌ಸಿಎಲ್‌ಎಟಿ), ₹ 1,338 ಕೋಟಿ ದಂಡವನ್ನು 30 ದಿನಗಳಲ್ಲಿ ಪಾವತಿಸುವಂತೆ ಗೂಗಲ್ ಕಂಪನಿಗೆ ಸೂಚಿಸಿದೆ.

ಆದರೆ, ಗೂಗಲ್ ಕಂಪನಿಯು ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯ ಸ್ಮಾರ್ಟ್‌ಫೋನ್‌ಗಳಲ್ಲಿ ತಾನು ಮೊದಲೇ ಇನ್‌ಸ್ಟಾಲ್ ಮಾಡಿರುವ ಆ್ಯಪ್‌ಗಳನ್ನು ತೆಗೆದುಹಾಕುವ ಅವಕಾಶವನ್ನು ಗ್ರಾಹಕರಿಗೆ ಕೊಡಬೇಕು ಎಂದು ಸಿಸಿಐ ನೀಡಿದ್ದ ಸೂಚನೆಯನ್ನು ಎನ್‌ಸಿಎಲ್‌ಎಟಿ ರದ್ದುಮಾಡಿದೆ.

ಎನ್‌ಸಿಎಲ್‌ಎಟಿ ನೀಡಿರುವ ಆದೇಶವನ್ನು ಪರಿಶೀಲಿಸುತ್ತಿರುವುದಾಗಿ ಗೂಗಲ್ ಹೇಳಿದೆ. ಗೂಗಲ್ ಕಂಪನಿಯು ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳ ವಿಚಾರದಲ್ಲಿ ಸ್ಪರ್ಧಾತ್ಮಕತೆಯ ವಿರೋಧಿಯಾಗಿ ನಡೆದುಕೊಳ್ಳುತ್ತಿದೆ ಎಂದು ಸಿಸಿಐ ಹೇಳಿತ್ತು. ಈ ಆದೇಶವನ್ನು ಎನ್‌ಸಿಎಲ್‌ಎಟಿಯಲ್ಲಿ ಪ್ರಶ್ನಿಸಲಾಗಿತ್ತು.

ತಾನು ಮೊದಲೇ ಇನ್‌ಸ್ಟಾಲ್ ಮಾಡಿಕೊಡುವ ಗೂಗಲ್ ಮ್ಯಾಪ್ಸ್, ಯೂಟ್ಯೂಬ್, ಜಿಮೇಲ್‌ನಂತಹ ಆ್ಯಪ್‌ಗಳನ್ನು ತೆಗೆದುಹಾಕಲು ಗೂಗಲ್ ಕಂಪನಿಯು ಗ್ರಾಹಕರಿಗೆ ಅವಕಾಶ ಕೊಡಬೇಕು ಎಂದು ಸಿಸಿಐ ನೀಡಿದ್ದ ನಿರ್ದೇಶನವನ್ನು ಎನ್‌ಸಿಎಲ್‌ಎಟಿ ರದ್ದುಮಾಡಿದೆ. ಅಲ್ಲದೆ, ಗೂಗಲ್ ಕಂಪನಿಯು ತನ್ನ ಪ್ಲೇಸ್ಟೋರ್‌ನಲ್ಲಿ ಇತರ ಕಂಪನಿಗಳ ಆ್ಯಪ್ ಸ್ಟೋರ್‌ಗೆ ಅವಕಾಶ ಕೊಡಬೇಕಾಗಿಲ್ಲ ಎಂದು ಕೂಡ ಎನ್‌ಸಿಎಲ್‌ಎಟಿ ಹೇಳಿದೆ.

ಯಾವುದೇ ಆ್ಯಪ್ ಸ್ಟೋರ್ ಬಳಸದೆ, ಬೇರೆಡೆಗಳಿಂದ ಆ್ಯಪ್ ಡೌನ್‌ಲೋಡ್ ಮಾಡುವುದರ ಮೇಲೆ ನಿರ್ಬಂಧ ವಿಧಿಸಲು ಗೂಗಲ್‌ಗೆ ಅವಕಾಶ ಇರುತ್ತದೆ.

ಈ ನಿರ್ದೇಶನಗಳು ಸಿಂಧು

ಸಿಸಿಐ ನೀಡಿದ್ದ ಹತ್ತು ನಿರ್ದೇಶನಗಳ ಪೈಕಿ ಆರನ್ನು ಎನ್‌ಸಿಎಲ್‌ಎಟಿ ಎತ್ತಿಹಿಡಿದಿದೆ. ಎನ್‌ಸಿಎಲ್‌ಎಟಿ ಎತ್ತಿಹಿಡಿದಿರುವ ಪ್ರಮುಖ ನಿರ್ದೇಶನಗಳು ಇಲ್ಲಿವೆ:

- ಮೊಬೈಲ್ ಸಾಧನವನ್ನು ಆರಂಭದಲ್ಲಿ ಬಳಕೆಗೆ ಸಿದ್ಧಮಾಡಿಕೊಳ್ಳುವಾಗ (ಸೆಟಪ್) ಗ್ರಾಹಕರಿಗೆ ತಮ್ಮ ಸರ್ಚ್ ಎಂಜಿನ್ ಯಾವುದಾಗಿರಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಇರಬೇಕು
- ಸ್ಮಾರ್ಟ್‌ಫೋನ್ ತಯಾರಕರಿಗೆ ಇಂಥದ್ದೇ ಆ್ಯಪ್‌ಗಳನ್ನು ಮೊದಲೇ ಇನ್‌ಸ್ಟಾಲ್ ಮಾಡುವಂತೆ ತಾಕೀತು ಮಾಡುವಂತಿಲ್ಲ.

ಷೇರು ದಲ್ಲಾಳಿಗಳ ವಂಚನೆ ತಡೆಗೆ ಕ್ರಮ: ಸೆಬಿ

ನಿರ್ದೇಶಕರ ನೇಮಕ: ಷೇರುದಾರರ ಒಪ್ಪಿಗೆ ಕಡ್ಡಾಯ

ನವದೆಹಲಿ/ಮುಂಬೈ (ರಾಯಿಟರ್ಸ್/ಪಿಟಿಐ): ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳಲ್ಲಿ ಷೇರುದಾರರು ಮತ್ತು ಸಾಲದಾತರಿಗೆ ಹೆಚ್ಚಿನ ಅಧಿಕಾರ ನೀಡುವ ಉದ್ದೇಶದಿಂದ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಕೆಲವೊಂದು ಬದಲಾವಣೆಗಳನ್ನು ತರಲು ಮುಂದಾಗಿದೆ.

ಕಂಪನಿಗಳ ಆಡಳಿತ ಮಂಡಳಿಯಲ್ಲಿ ಶಾಶ್ವತವಾಗಿ ಸ್ಥಾನ ಹೊಂದುವ ಪರಿಪಾಠ ಕೊನೆಗೊಳಿಸಲು ಸೆಬಿ ನಿರ್ಧರಿಸಿದೆ. ನಿರ್ದೇಶಕರ ಆಯ್ಕೆಯು ಪ್ರತಿ ಐದು ವರ್ಷಗಳಿಗೆ ಒಮ್ಮೆ ಮತದಾನದ ಮೂಲಕ ನಡೆಯಲಿದೆ. ಯಾವುದೇ ನಿರ್ದೇಶಕರನ್ನು ನೇಮಕ ಮಾಡಲು ಷೇರುದಾರರ ಒಪ್ಪಿಗೆ ಪಡೆಯುವುದು ಕಡ್ಡಾಯವಾಗಲಿದೆ ಎಂದು ಸೆಬಿ ಪ್ರಕಟಣೆಯಲ್ಲಿ ತಿಳಿಸಿದೆ. ಈ ಬದಲಾವಣೆಗಳು ಯಾವಾಗ ಜಾರಿಗೆ ಬರಲಿವೆ ಎನ್ನುವ ಕುರಿತು ಸೆಬಿ ಮಾಹಿತಿ ನೀಡಿಲ್ಲ. ಆದರೆ, ಹೊಸ ನಿಯಮಗಳು 2024ರ ಏಪ್ರಿಲ್‌ನಿಂದ ಜಾರಿಗೆ ಬರಲಿವೆ ಎಂದು ಸೆಬಿ ಫೆಬ್ರುವರಿಯಲ್ಲಿ ಬಿಡುಗಡೆ ಮಾಡಿದ್ದ ಸಮಾಲೋಚನಾ ಟಿಪ್ಪಣಿಯಲ್ಲಿ ಹೇಳಿತ್ತು.

ನಿರ್ದೇಶಕರು, ಅನುಸರಣೆ ಅಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಮುಖ್ಯ ಹಣಕಾಸು ಅಧಿಕಾರಿಯಂತಹ ಪ್ರಮುಖ ಹುದ್ದೆಗಳನ್ನು ಖಾಲಿಯಾದ ಮೂರು ತಿಂಗಳ ಒಳಗಾಗಿ ಭರ್ತಿ ಮಾಡುವಂತೆ ಸೆಬಿ ಹೇಳಿದೆ. ನೋಂದಾಯಿತ ಕಂಪನಿಗಳು ಷೇರುದಾರರಿಗೆ ನೀಡುವಯಾವುದೇ ವಿಶೇಷ ಹಕ್ಕುಗಳಿಗೆ ಕಾಲಕಾಲಕ್ಕೆ ಷೇರುದಾರರ ಒಪ್ಪಿಗೆ ಅಗತ್ಯ ಎಂದು ಹೇಳಿದೆ.

ಷೇರು ದಲ್ಲಾಳಿಗಳ ವಂಚನೆ ತಡೆಗೆ ಕ್ರಮ: ಷೇರು ದಲ್ಲಾಳಿಗಳು ನಡೆಸುವ ವಂಚನೆ ಪತ್ತೆ ಮಾಡಲು ಮತ್ತು ತಡೆಯಲು ವ್ಯವಸ್ಥೆಯೊಂದನ್ನು ರೂಪಿಸುವುದಾಗಿ ಸೆಬಿ ಹೇಳಿದೆ.

ವಿದೇಶಿ ಹೂಡಿಕೆ; ಸೆನ್ಸೆಕ್ಸ್ ಗಳಿಕೆ

ಮುಂಬೈ (ಪಿಟಿಐ): ಜಾಗತಿಕ ಷೇರುಪೇಟೆಗಳಲ್ಲಿನ ಸ್ಥಿರ ವಹಿವಾಟು ಮತ್ತು ವಿದೇಶಿ ಬಂಡವಾಳ ಒಳಹರಿವಿನಿಂದಾಗಿ ದೇಶದ ಷೇರುಪೇಟೆಗಳು ಬುಧವಾರ ಗಳಿಕೆ ಕಂಡುಕೊಂಡವು.

ಸೇವೆಗಳು, ರಿಯಲ್ ಎಸ್ಟೇಟ್, ಸರಕುಗಳು ಮತ್ತು ಆಟೊ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿ ಮಾಡಿದರು. ಇದು ಸಹ ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 346 ಅಂಶ ಏರಿಕೆ ಕಂಡರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 129 ಅಂಶ ಹೆಚ್ಚಾಯಿತು.

ಸೆನ್ಸೆಕ್ಸ್‌ನಲ್ಲಿ ಎಚ್‌ಸಿಎಲ್ ಟೆಕ್ನಾಲಜೀಸ್, ಟಾಟಾ ಮೋಟರ್ಸ್, ಹಿಂದುಸ್ತಾನ್ ಯುನಿಲಿವರ್, ಎನ್‌ಟಿಪಿಸಿ, ಇಂಡಸ್‌ಇಂಡ್ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಬಜಾಜ್ ಫೈನಾನ್ಸ್ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಗಳ ಷೇರು ಬೆಲೆ ಹೆಚ್ಚಾಯಿತು.

ಇನ್ನೊಂದೆಡೆ, ಭಾರ್ತಿ ಏರ್‌ಟೆಲ್, ರಿಲಯನ್ಸ್ ಇಂಡಸ್ಟ್ರೀಸ್, ಐಸಿಐಸಿಐ ಬ್ಯಾಂಕ್ ಮತ್ತು ಏಷ್ಯನ್ ಪೇಂಟ್ಸ್ ಷೇರುಗಳ ಮೌಲ್ಯ ಇಳಿಕೆ ಕಂಡಿತು.

ಸರ್ಕಾರಿ ಬಾಂಡ್‌ಗಳ ಅವಧಿಯು ಗುರುವಾರ ಮುಕ್ತಾಯ ಆಗಲಿದೆ. ಹೀಗಾಗಿ ಷೇರುಪೇಟೆಗಳಲ್ಲಿ ಬುಧವಾರ ಅತಿಯಾದ ಏರಿಳಿತ ಕಂಡುಬಂದರೂ ಸೂಚ್ಯಂಕಗಳು ಶೇ 1ರವರೆಗೂ ಏರಿಕೆ ಕಾಣುವಂತಾಯಿತು ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯು ಸಂಪೂರ್ಣವಾಗಿ ಚೇತರಿಕೆ ಕಂಡುಕೊಳ್ಳುವವರೆಗೆ ಮತ್ತು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಏರಿಕೆಗೆ ತಡೆ ನೀಡುವ ನಿರ್ಧಾರ ತೆಗೆದುಕೊಳ್ಳುವವರೆಗೂ ಷೇರುಪೇಟೆಗಳಲ್ಲಿ ಈ ರೀತಿಯ ಅಸ್ಥಿರತೆ ಮುಂದುವರಿಯುವ ನಿರೀಕ್ಷೆ ಮಾಡಲಾಗಿದೆಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.38ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 78.95 ಡಾಲರ್‌ಗೆ ತಲುಪಿತು.

'ಯುಪಿಐಗೆ ಶುಲ್ಕ ಇಲ್ಲ'

ನವದೆಹಲಿ (ಪಿಟಿಐ): ಯುಪಿಐ ಮೂಲಕ ಒಂದು ಬ್ಯಾಂಕ್ ಖಾತೆಯಿಂದ ಇನ್ನೊಂದು ಬ್ಯಾಂಕ್ ಖಾತೆಗೆ ಮಾಡುವ ಪಾವತಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ ಎಂದು ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಬುಧವಾರ ಸ್ಪಷ್ಟಪಡಿಸಿದೆ.

ಆದರೆ, ಪ್ರಿಪೇಯ್ಡ್ ಪಾವತಿ ವ್ಯವಸ್ಥೆ (ಪಿಪಿಐ) ಬಳಸಿ ಯುಪಿಐ ಮೂಲಕ ಮಾಡುವ ಪಾವತಿಗಳಿಗೆ ವರ್ತಕರಿಗೆ ಮಾತ್ರವೇ ವಿನಿಮಯ ಶುಲ್ಕ ವಿಧಿಸಲಾಗುವುದು. ಗ್ರಾಹಕರಿಗೆ ಯಾವುದೇ ಶುಲ್ಕ ಇರುವುದಿಲ್ಲ ಎಂದು ನಿಗಮವು ಪ್ರಕಟಣೆಯಲ್ಲಿ ತಿಳಿಸಿದೆ. ಪಿಪಿಐ ಬಳಸಿ ಯುಪಿಐ ಮೂಲಕ ₹ 2 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ವಹಿವಾಟು ನಡೆಸಿದರೆ ಶೇಕಡ 1.1ರಷ್ಟು ಶುಲ್ಕ ತೆರಬೇಕಾಗುತ್ತದೆ ಎಂದು ಹೇಳಿದೆ. ಪಿಪಿಐ ಅಲ್ಲದೆ, ಗ್ರಾಹಕರು ಯುಪಿಐ ವ್ಯವಸ್ಥೆಯನ್ನು ಬಳಸಿ ತಮ್ಮ ಬ್ಯಾಂಕ್ ಖಾತೆ, ರುಪೇ ಕ್ರೆಡಿಟ್ ಕಾರ್ಡ್ ಮೂಲಕ ಪಾವತಿ ಮಾಡಬಹುದು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹422-615
ದ್ವಿತಳಿ (ಬಿ.ವಿ)	₹430-680

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)

ಕನಿಷ್ಠ	₹8500
ಗರಿಷ್ಠ	₹10500
ಮಾದರಿ	₹9500

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

14ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಎನ್. ಲಕ್ಷ್ಮಮ್ಮನವರು
ಕೆ. ನಾರಾಯಣಪುರ, ಎಂ. ನಂಜಪ್ಪನವರ ವೃತ್ತ, ಬೆಂಗಳೂರು-77
ನೀವು ನಮ್ಮನ್ನಗಲಿ ಇಂದಿಗೆ 14 ವರ್ಷಗಳು. ನಿಮ್ಮ ತಾಳ್ಮೆ, ತ್ಯಾಗ, ಪ್ರೀತಿ, ಮಾರ್ಗದರ್ಶನಗಳೇ ನಮಗೆ ದಾರಿದೀಪ. ನಿಮ್ಮನ್ನು ಸದಾ ಸ್ಮರಿಸುವ..
ದುಃಖತಪ್ತರು: ಮಗ-ಸೊಸೆ, ಮೊಮ್ಮಕ್ಕಳು ಮತ್ತು ಎಂ. ನಂಜಪ್ಪನವರ ಕುಟುಂಬವರ್ಗದವರು

ವೈಕುಂಠ ಸಮಾರಾಧನೆ

ಶ್ರೀ ಕೆ.ಪಿ.ಮುನಿರೆಡ್ಡಿ
ಇವರು ದಿನಾಂಕ 20.03.2023 (ಸೋಮವಾರ) ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ 30.03.2023 ರಂದು ಗುರುವಾರ ಬೆಳಗ್ಗೆ 11.00 ಗಂಟೆಗೆ ಮೃತರ ಸ್ವಗೃಹ ನಂ 8, 5ನೇ ಬ್ಲಾಕ್ ಕೋರಮಂಗಲ, ಬಜಾಜ್ ಶೋರೂಮ್ ಹತ್ತಿರ, ಬೆಂಗಳೂರು-95. ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು

10ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಕ್ಷ್ಮೀದೇವಿ
ನಿಧನ : 30.03.2013
ನೀವು ನಮ್ಮನ್ನಗಲಿ ಹತ್ತು ವರ್ಷ ತುಂಬಿದೆ. ನಿಮ್ಮ ಸವಿನೆನಪು ಸದಾ ಹಸಿರಾಗಿ ನಮ್ಮ ಮನದಲ್ಲಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಇಂತಿ ಪತಿ - ವಿ. ಕೃಷ್ಣಪ್ಪ
ಮಕ್ಕಳು ಹಾಗೂ ಮೊಮ್ಮಕ್ಕಳು
ಕುಟುಂಬವರ್ಗ ಹಾಗೂ ಬಂಧು-ಮಿತ್ರರು
ತ್ಯಾಗರಾಜನಗರ, ಬೆಂ-28.
9341373739, 9900444777
ದಿನಾಂಕ 30.03.2023

ಚಿರಸ್ಮರಣೆ



ಶ್ರೀ ಹೆಚ್.ಎಂ.ಹುಚ್ಚೇಗೌಡರು
ನಿಧನ: 30-03-1999
ನೀವು ನಮ್ಮನ್ನು ಅಗಲಿ ಇಪ್ಪತ್ತನಾಲ್ಕು ವರ್ಷವಾಯಿತು, ನಿಮ್ಮ ಸವಿನೆನಪು ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ, ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಧರ್ಮಪತ್ನಿ: ಕಮಲಮ್ಮ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

In Remembrance on his 25th Death Anniversary



S.P. Muniyappa, B.E., M.E.,
(Rtd. Executive Engineer)
D.O.D.: 30/3/1998
"May the winds of Heaven flow softly and whisper in your ear, how much we love and miss you and wish that you were here"
Deeply mourned by Family, Relatives, Friends & Staff
Ph: 98440 44145 / 9620401757

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

General

WORK FROM HOME. CONTACT: 8010891968, 8197534032, 9035713189

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

TRAVEL CORNER

INDIAN RAILWAYS - SOUTH STAR RAIL
ಸಮ್ಮರ್ ಸ್ಪೆಷಲ್ ಕಾಶ್ಮೀರ ಕಣಿವೆ ವಿಶೇಷ
ದೆಹಲಿ- ಆಗ್ರಾ ಜೈಪುರ ಅಮೃತ್ ಸರ್ ಶ್ರೀನಗರ ಸೋನ್ ಮಾರ್ಗ್ ಗುಲ್ - ಮಾರ್ಗ್
07 MAY | 15 DAYS
3AC RS.47700
ವಿಶೇಷ ಪ್ರವಾಸ ರೈಲು ವಸತಿ- ಊಟ- ಬಸ್
9015 500 200 RAILTOURISM.COM

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ಬೆಂಗಳೂರು -54 ಸಂಪರ್ಕಿಸಿ: ಹೆಚ್ಚಿನ ಮಾಹಿತಿಗಾಗಿ 9148525233, 7899235388

ಅವಿಕಾಮ್ ಕೊರಿಯರ್ಬಾಯ್ಸ್, ಡ್ರೈವರ್ಸ್, ಬೈಕರ್ ಗಳು, ಪಿಕಪ್ ಮತ್ತು ಡೆಲಿವರಿ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ಬ್ರಾಂಚೆಸ್: ಪುಣೆ, ದೆಹಲಿ, ಬೆಂಗಳೂರು, ಹೈದರಾಬಾದ್ ವಸತಿ ವ್ಯವಸ್ಥೆ ಇದೆ. ಪಿಎಫ್ ಮತ್ತು ಇ.ಎಸ್.ಐ ಸೌಲಭ್ಯವಿದೆ. ಕನಿಷ್ಠ ವಿದ್ಯಾರ್ಹತೆ SSLC Ph: 9590071107/ 9686779642/ 9845840325

ಪ್ರವಾಸ

Travel

6.4.2023 ನೇಪಾಳ, ಮುಕ್ತಿನಾಥ, ಕಾಶಿ 13.4.2023 ಕೇರಳ, ತಮಿಳುನಾಡು 14.5.2023 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9482435755, 9845035349

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply*
For more information Contact:
9845114560 : 9731810277
9901641752 : 9886213331
080 - 45557163 / 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Deputy Commissioner Yadgir
Mini Vidhan Soudha, Yadgir. Pin - 585202
INVITATION FOR TENDER
SECTION-1
TERMS AND CONDITIONS OF TENDER FOR HIRE OF IT EQUIPMENT, PRINTER & PERIPHERALS FOR ELECTIONS 2023

The DC & DEO YADGIR (hereafter, DEO) hereby invites tenders under e-tendering system from Registered Companies / Agencies registered under Karnataka Shops & Establishment Actfor supply of HIRE OF PERSONAL COMPUTER, LAPTOP, PRINTER & PERIPHERALS, as detailed in Annexure-I of this Tender, as per the Karnataka Transparency in Public Procurement Act 1999 and Rules 2000, there under (Under Two Cover System). Only those who have supplied similar Hire, Installation & Maintenance (50% of the quantity of this tender) to Govt. Departments, Institutions, Autonomous Bodies in last 3 years and those who OWN video cameras as per specification only need to apply. Those with Annual Turnover for last three years i.e., 2019-20, 2020-21 & 2021-22, not less than Rs. 15 Lakhs per annum or total cumulative turnover Rs. 50 Lakhs for last three Years are eligible to participate in this Tender.
The term "PURCHASER" for the purpose of placing the order, accepting / rejecting the goods, payments and sending samples, for testing by the DEO and any other authority authorized by the Purchaser, who are bound by the Contract in pursuance of this Tender, while purchasing HIRE, INSTALLATION & MAINTENANCE.
a)The term "TENDERER" means the Registered Video Professionals, participating in this tender. The term "TENDERER" refers to the successful Tenderer who has entered into an agreement with DEO for the purpose of supplying HIRE, INSTALLATION & MAINTENANCE,as mentioned in this tender.
b) The DEO Yadgir District shall be the Tendering Authority for the purpose of this tender.
1.Tenderers are to quote for ALLHIRE, INSTALLATION & MAINTENANCE,listed in Schedule-II Annexure I. 2.Tenders of only those Tenderers' who fulfil the Terms and Conditions of this tender will be considered for evaluation. Defective and incomplete documents / samples of the Hire, Installation & Maintenance found not in conformity with the specifications or found defective either physically or analytically, will be rejected.

Schedule of Events

Commencement of download of e-Tender Form from website- https://eproc.Karnataka.gov.in	25/03/2023
Last Date for Queries on or before	01/04/2023 till 5:00 p.m.
Pre-bid Meeting.	29/03/2023 at 11:00 a.m.
Last Date for Uploading of Tender in e-procurement platform on or before	01/04/2023 till 5:00 p.m
Opening of Technical Bid	02/04/2023 till 5:30 p.m.
Date of Original Document Verification.	Will be done on the uploaded documents at e-portal.
Submission of Samples	02/04/2023 at 11:00 am
Opening of Financial Bid	03/04/2023 at 11:00 am
Approximate value of tender	Rs. 15.00 Lakhs

Venue: Office of the DEO Yadgir District, Address: DEO DOC Building Mini Vidhan Soudha Yadgir Pin - 585202
Note : Only Technically qualified tenderers will be called for 10% Personnel & Equipment Verification
SD/- Deputy Commissioner Yadgir
DIP/Yadagiri/560/K.S.M.C&A/2022-23

ಐಪಿಎಲ್ ಕ್ರಿಕೆಟ್ 2023: ಲಖನೌ ಸೂಪರ್ ಜೈಂಟ್ಸ್ ತಂಡದ ಸಿದ್ಧತೆ

ರಾಹುಲ್ ನಾಯಕತ್ವಕ್ಕೆ ಅಗ್ನಿಪರೀಕ್ಷೆ

ಮುಂಬೈ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಅವರಿಗೆ ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯು ಅಗ್ನಿಪರೀಕ್ಷೆಯ ಕಣವಾಗಲಿದೆ.

ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕರಾಗಿರುವ ಅವರು ಹೋದ ಬಾರಿಯ ಐಪಿಎಲ್‌ನಲ್ಲಿ ಬ್ಯಾಟರ್ ಆಗಿ ಯಶಸ್ವಿಯಾಗಿದ್ದರು. ಆದರೆ ನಾಯಕತ್ವದ ಕೌಶಲದಲ್ಲಿ ಹಿಂದುಳಿದಿದ್ದರು.

ಹೋದ ವರ್ಷ ಲಖನೌ ತಂಡಕ್ಕೆ ಬರುವ ಮುನ್ನ ಅವರು ಪಂಜಾಬ್ ಕಿಂಗ್ಸ್ ತಂಡಕ್ಕೆ ನಾಯಕರಾಗಿದ್ದರು. ಆ ತಂಡವೂ ಪ್ರಶಸ್ತಿ ಗೆದ್ದಿರಲಿಲ್ಲ. ಲಖನೌ ತಂಡವು ಹೋದಬಾರಿ ಲೀಗ್ ಹಂತದಲ್ಲಿ ಮೂರನೇ ಸ್ಥಾನ ಪಡೆದಿತ್ತು. ಎಲಿಮಿನೇಟರ್ ಪಂದ್ಯದಲ್ಲಿ ಸೋತಿತ್ತು. ಆ ಆವೃತ್ತಿಯಲ್ಲಿ ಅವರು 15 ಪಂದ್ಯಗಳಿಂದ 616 ರನ್ ಗಳಿಸಿ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದರು.

ಅವರ ಬಳಗದಲ್ಲಿ ವೇಗಿ ಆವೇಶ್ ಖಾನ್ 13 ಪಂದ್ಯಗಳಲ್ಲಿ ಆಡಿ 18 ವಿಕೆಟ್ ಗಳಿಸಿದರು. ಮೊಹಸೀನ್ ಖಾನ್ 14 ವಿಕೆಟ್ ಪಡೆದಿದ್ದರು. ಆದರೆ ಭುಜದ ಗಾಯದಿಂದಾಗಿ ಮೊಹಸೀನ್ ಈ ಬಾರಿ ಆರಂಭದ ಕೆಲವು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ವಿಕೆಟ್‌ಕೀಪರ್, ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿ ಕಾಕ್ ಕೂಡ ಮೊದಲ ಎರಡು ಪಂದ್ಯಗಳಲ್ಲಿ ಆಡುವುದಿಲ್ಲ. ಅವರು ಏಕದಿನ ವಿಶ್ವಕಪ್ ಕ್ವಾಲಿಫೈಯರ್‌ನಲ್ಲಿ ತಮ್ಮ ದೇಶದ ತಂಡವನ್ನು ಪ್ರತಿನಿಧಿಸಲಿದ್ದಾರೆ.

ನಿಕೋಲಸ್ ಪೂರನ್, ಆಲ್‌ರೌಂಡರ್‌ಗಳಾದ ದೀಪಕ್ ಹೂಡಾ, ಕೃಣಾಲ್ ಪಾಂಡ್ಯ, ಕೆ.ಗೌತಮ್, ಪ್ರೇರಕ್ ಮಂಕಡ್, ಮಾರ್ಕಸ್ ಸ್ಟೊಯಿನಿಸ್, ಕೈಲ್ ಮೇಯರ್ಸ್ ಮತ್ತು ರೊಮೆರಿಯೊ ಶೇಫರ್ಡ್, ಸ್ಪಿನ್ನರ್ ರವಿ ಬಿಷ್ಣೋಯಿ ಅವರೊಂದಿಗೆ ರಾಹುಲ್ ಟೂರ್ನಿಯಲ್ಲಿ ಜಯದ ಆರಂಭ ಮಾಡುವ ಭರವಸೆಯಲ್ಲಿದ್ದಾರೆ.

ಜನರ ನಿರೀಕ್ಷೆ ಸಹಜ: ಐಪಿಎಲ್ ಟೂರ್ನಿಯ ಅತ್ಯಂತ ಯಶಸ್ವಿ ನಾಯಕನೆಂಬ ಹೆಗ್ಗಳಿಕೆ ರೋಹಿತ್ ಶರ್ಮಾ ಅವರದ್ದು. ಅವರ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡವು ಐದು ಸಲ ಚಾಂಪಿಯನ್ ಆಗಿದೆ. ಆದರೂ ಪ್ರತಿವರ್ಷವೂ ಪ್ರಶಸ್ತಿ ಗೆಲ್ಲಬೇಕೆಂಬ ಅಭಿಮಾನಿಗಳ ಅಪಾರವಾದ ನಿರೀಕ್ಷೆಯು ಸಹಜ ಎಂದು ರೋಹಿತ್ ಶರ್ಮಾ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರ ಹೊಸ ವಿನ್ಯಾಸದ ಪೋಷಾಕು ಅನಾವರಣಗೊಳಿಸಲಾಯಿತು. ಈ ಸಂದರ್ಭದಲ್ಲಿ ತಂಡದ (ಎಡದಿಂದ) ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್, ವಿರಾಟ್ ಕೊಹ್ಲಿ, ಅನಿಲ್ ಗುಪ್ತಾ (ಕೆಇಐ ಇಂಡಸ್ಟ್ರೀಸ್ ಚೇರ್ಮನ್), ಫಫ್ ಡುಪ್ಲೆಸಿ, ದಿನೇಶ್ ಕಾರ್ತಿಕ್, ಅಕ್ಷಿತ್ ದಿವಿಯಜ್ ಗುಪ್ತಾ (ಕೆಇಐ ಇಂಡಸ್ಟ್ರೀಸ್ ನಿರ್ದೇಶಕ), ಮಹಿಪಾಲ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಹಾಜರಿದ್ದರು –ಪ್ರಜಾವಾಣಿ ಚಿತ್ರ

ಕೆ. ಎಲ್. ರಾಹುಲ್ –ಟ್ವಿಟರ್ ಚಿತ್ರ

'ನಮ್ಮ ತಂಡವು ಕಣಕ್ಕಿಳಿಯುವಾಗ ಜನರಿಂದ ಅಪಾರವಾದ ನಿರೀಕ್ಷೆಯುವ ಸಹಜವಾಗಿಯೇ ಇರುತ್ತದೆ. ಹಲವು ವರ್ಷಗಳಿಂದ ಆಡುತ್ತಿರುವುದರಿಂದ ಫಲಿತಾಂಶದ ಕುರಿತು ಒತ್ತಡ ಹೆಚ್ಚಾಗಿ ಇಲ್ಲ. ಆದರೆ ಅಭಿಮಾನಿಗಳ ನಿರೀಕ್ಷೆ ಅರಿವು ಇದೆ' ಎಂದು ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ರೋಹಿತ್ ಹೇಳಿದರು.

'ನಮ್ಮ ಉದ್ದೇಶವೂ ಚೆನ್ನಾಗಿ ಆಡಬೇಕು ಹಾಗೂ ಟ್ರೋಫಿ ಗೆಲ್ಲಬೇಕು ಎಂಬುದೇ ಇರುತ್ತದೆ. ಆದರೆ ಆ ಯೋಚನೆಯಿಂದಲೇ ಒತ್ತಡ ಹೆಚ್ಚುವುದನ್ನು ತಪ್ಪಿಸಿಕೊಳ್ಳಬೇಕು' ಎಂದರು.

ಆರ್‌ಸಿಬಿ ಪೋಷಾಕು ಬಿಡುಗಡೆ

ಫಫ್ ಡುಪ್ಲೆಸಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರಿಗೆ ಹೊಸ ವಿನ್ಯಾಸದ ಪೋಷಾಕುಗಳನ್ನು ಬುಧವಾರ ಬಿಡುಗಡೆ ಮಾಡಲಾಯಿತು.

ಆರ್‌ಸಿಬಿಯ ಸಹಪ್ರಾಯೋಜಕರಾದ ಕೆಇಐ ಇಂಡಸ್ಟ್ರೀಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಂಡದ ನಾಯಕ ಡುಪ್ಲೆಸಿ, ಬ್ಯಾಟರ್ ವಿರಾಟ್ ಕೊಹ್ಲಿ ಹಾಗೂ ಇನ್ನುಳಿದವರು ಪೋಷಾಕು ಬಿಡುಗಡೆ ಮಾಡಿದರು.

ಪರಿಣತರ ಬಳಗದಲ್ಲಿ ವೆಂಕಿ, ಅನಿಲ್ ಕುಂಬ್ಳೆ

ವೆಂಕಟೇಶ್

ಅನಿಲ್ ಕುಂಬ್ಳೆ

ಈ ಬಾರಿಯ ಐಪಿಎಲ್ ಟೂರ್ನಿಯ ಡಿಜಿಟಲ್ ಮಾಧ್ಯಮದ ಅಧಿಕೃತ ಪ್ರಸಾರಕರಾಗಿರುವ ವಯಾಕಾಮ್–18 ಸಂಸ್ಥೆಯ ಜಿಯೊ ಸಿನಿಮಾ ಆ್ಯಪ್‌ನಲ್ಲಿ ಪರಿಣತರಾಗಿ ಮಾಜಿ ಕ್ರಿಕೆಟಿಗರಾದ ಅನಿಲ್ ಕುಂಬ್ಳೆ, ವೆಂಕಟೇಶ್ ಪ್ರಸಾದ್ ಹಾಗೂ ರಾಬಿನ್ ಉತ್ತಪ್ಪ ಅವರು ಕಾರ್ಯನಿರ್ವಹಿಸುವರು. ಅನಿಲ್ ಕುಂಬ್ಳೆ ಹಾಗೂ ರಾಬಿನ್ ಉತ್ತಪ್ಪ ಹಿಂದಿ ಭಾಷೆಯಲ್ಲಿ ಕಾರ್ಯನಿರ್ವಹಿಸುವರು. ವೆಂಕಟೇಶ್ ಪ್ರಸಾದ್, ಎಸ್. ಅರವಿಂದ್, ಅಮಿತ್ ವರ್ಮಾ, ವೇದಾ ಕೃಷ್ಣಮೂರ್ತಿ, ಎಚ್. ಶರತ್, ಸುಜಯ್ ಶಾಸ್ತ್ರಿ, ದೀಪಕ್ ಚೌಗಲೆ, ರಾಘವೇಂದ್ರ ರಾಜ್, ಸುಮಂತ್ ಭಟ್, ರೀನಾ ಡಿಸೋಜಾ, ಹಿತಾ ಚಂದ್ರಶೇಖರ್, ಅಂಕಿತಾ ಅಮರ್ ಅವರ ತಂಡವು ಕನ್ನಡ ಪ್ಯಾನೆಲ್‌ನಲ್ಲಿದೆ. ಇಂಗ್ಲಿಷ್ ಪ್ಯಾನೆಲ್‌ನಲ್ಲಿ ಕ್ರಿಸ್ ಗೇಲ್, ಎಬಿ ಡಿವಿಲಿಯರ್ಸ್, ಏಯಾನ್ ಮಾರ್ಗನ್, ಬ್ರೆಟ್ ಲೀ, ಗ್ರೆಮ್ ಸ್ವಾನ್, ಗ್ರೆಮ್ ಸ್ಮಿತ್, ಸ್ಕಾಟ್ ಸ್ಟೈರಿಸ್, ವೀಕ್ಷಕ ವಿವರಣೆಗಾರರಾದ ಸಂಜನಾ ಗಣೇಶನ್, ಸುಪ್ರಿಯಾ ಸಿಂಗ್, ಸುಹೈಲ್ ಚಾಂಡೋಕ್ ಇದ್ದಾರೆ.

ಭಾರತೀಯ ಮಹಿಳಾ ಬಾಕ್ಸರ್‌ಗಳು ವಿಶ್ವ ಚಾಂಪಿಯನ್ ಶಿಪ್‌ನಲ್ಲಿ ಇತಿಹಾಸ ನಿರ್ಮಿಸಿದ್ದಾರೆ!

ಒಲಿಂಪಿಕ್ ಕ್ವಾಲಿಫೈಯರ್‌ಗೆ ಮಹಿಳಾ ಫುಟ್‌ಬಾಲ್ ತಂಡ

ನವದೆಹಲಿ (ಪಿಟಿಐ): ಒಲಿಂಪಿಕ್ ಕ್ವಾಲಿಫೈಯರ್ ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಭಾರತ ಮಹಿಳಾ ತಂಡದಲ್ಲಿ 22 ಆಟಗಾರ್ತಿಯರಿಗೆ ಸ್ಥಾನ ನೀಡಲಾಗಿದೆ.

ಕಿರ್ಗಿಸ್ ರಿಪಬ್ಲಿಕ್‌ನಲ್ಲಿ ಏಪ್ರಿಲ್ 4ರಿಂದ 17ರವರೆಗೆ ಟೂರ್ನಿ ನಡೆಯಲಿದೆ. ಇದು ಒಲಿಂಪಿಕ್ ಕ್ವಾಲಿಫೈಯರ್‌ನ ಮೊದಲ ಸುತ್ತಿನ ಟೂರ್ನಿಯಾಗಿದೆ. ಭಾರತವು ಜಿ ಗುಂಪಿನಲ್ಲಿ ಆಡಲಿದೆ. ಆತಿಥೇಯ ಕಿರ್ಗಿಸ್ ತಂಡವೂ ಇದೇ ಗುಂಪಿನಲ್ಲಿದೆ.

ಕೋಚ್ ಥಾಮಸ್ ಡೆನರ್ಬಿ ಪ್ರಕಟಿಸಿರುವ ತಂಡ ಇಂತಿದೆ: ಗೋಲ್‌ಕೀಪರ್ಸ್: ಸೌಮ್ಯಾ ನಾರಾಯಣಸ್ವಾಮಿ, ಶ್ರೇಯಾ ಹೂಡಾ, ಎಲಾಂಗ್‌ಬಮ್ ಪೆಂತೊಯ್.

ಡಿಫೆಂಡರ್ಸ್: ಆಶಾಲತಾ ದೇವಿ, ಸ್ವೀಟಿದೇವಿ, ರಿತುರಾಣಿ, ರಂಜನಾ ಚಾನು, ಮಿಚೆಲ್ ಕಾಸ್ತಾನಾ, ದಲಿಮಾ ಚಿಬ್ಬರ್, ಮನಿಷಾ ಮನ್ನಾ, ಜೂಲಿ ಕಿಶನ್

ಮಿಡ್‌ಫೀಲ್ಡರ್: ಶಿಲ್ಕಿ ದೇವಿ ಹೆಮಮ್, ಅಂಜು ತಮಂಗ್, ಇಂದುಮತಿ ಕದಿರೇಶನ್, ಸಂಗೀತಾ ಬೆಸ್‌ಫೋರ್, ಕಾರ್ತಿಕಾ ಅಂಗಮುತ್ತು

ಫಾರ್ವರ್ಡ್ಸ್: ಗ್ರೇಸ್ ದಾಂಗ್‌ಮೈ, ಸೌಮ್ಯಾ ಗುಗುಲೊತ್, ರೇಣು, ಕರಿಷ್ಮಾ ಶಿರ್‌ವೊಕರ್, ಸಂಧ್ಯಾ ರಂಗನಾಥನ್, ಅಪೂರ್ಣ ನಾರ್ಜರಿ.

ಮುಖ್ಯ ಕೋಚ್: ಥಾಮಸ್ ಡೆನರ್ಬಿ.

ಗಾಲ್ಫ್: ಜಂಟಿ 4ನೇ ಸ್ಥಾನದಲ್ಲಿ ಕಾರ್ತಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಕಾರ್ತಿಕ್ ಶರ್ಮಾ ಅವರು ಇಲ್ಲಿ ನಡೆಯುತ್ತಿರುವ 'ದ ಚಾಲೆಂಜ್' ಗಾಲ್ಫ್ ಟೂರ್ನಿಯಲ್ಲಿ ಜಂಟಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಬುಧವಾರ ನಡೆದ ಎರಡನೇ ಸುತ್ತಿನ ಬಳಿಕ ಅವರು, ಸ್ವಿಟ್ಜರ್ಲೆಂಡ್‌ನ ಜೋಯಲ್ ಗಿರಾಬಚ್, ಫ್ರಾನ್ಸ್‌ನ ಫ್ರೆಡರಿಕ್ ಲ್ಯಾಕ್ರೊಯಿಕ್ಸ್ ಜೊತೆಗೆ ನಾಲ್ಕನೇ ಸ್ಥಾನದಲ್ಲಿದ್ದರು.

ಇಂಗ್ಲೆಂಡ್‌ನ ಅಲೆಕ್ಸ್ ಫಿಟ್ಜ್‌ಪ್ಯಾಟ್ರಿಕ್ ಅಗ್ರಸ್ಥಾನದಲ್ಲಿದ್ದರು. ಸ್ಪೇನ್‌ನ ಇವಾನ್ ಕ್ಯಾಂಟೆರೊ ಗುಟೆರಸ್ ಎರಡನೇ ಮತ್ತು ನೆದರ್ಲೆಂಡ್ಸ್‌ನ ಲಾರ್ಸ್ ವ್ಯಾನ್ ಮಿಜೆಲ್ ಮೂರನೇ ಸ್ಥಾನದಲ್ಲಿದ್ದರು.

ಸಂಕ್ಷಿಪ್ತ ಸುದ್ದಿ

ಏಕದಿನ ರ‍್ಯಾಂಕಿಂಗ್: ರೋಹಿತ್ ಶರ್ಮಾ, ಹಾರ್ದಿಕ್‌ಗೆ ಬಡ್ತಿ

ರೋಹಿತ್

ಹಾರ್ದಿಕ್

ದುಬೈ (ಪಿಟಿಐ): ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ ಅವರು ಐಸಿಸಿ ಏಕದಿನ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಬಡ್ತಿ ಪಡೆದಿದ್ದಾರೆ.

ಬುಧವಾರ ಪ್ರಕಟವಾದ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ವಿಭಾಗದಲ್ಲಿ ರೋಹಿತ್ ಒಂದು ಸ್ಥಾನ ಏರಿಕೆ ದಾಖಲಿಸಿ ಎಂಟನೇ ಸ್ಥಾನದಲ್ಲಿದ್ದಾರೆ. ಹಾರ್ದಿಕ್ ಪಾಂಡ್ಯ ಅವರು ಬೌಲರ್‌ಗಳ ವಿಭಾಗದಲ್ಲಿ 10 ಸ್ಥಾನ ಜಿಗಿತ ಕಂಡು 76ನೇ ಸ್ಥಾನ ತಲುಪಿದ್ದಾರೆ.

ಬ್ಯಾಟರ್‌ಗಳ ಪಟ್ಟಿಯಲ್ಲಿ ಶುಭಮನ್ ಗಿಲ್ ಐದನೇ ಸ್ಥಾನದಲ್ಲಿದ್ದರೆ, ವಿರಾಟ್ ಕೊಹ್ಲಿ ಏಳನೇ ಸ್ಥಾನದಲ್ಲಿದ್ದಾರೆ. ಅಗ್ರಸ್ಥಾನದಲ್ಲಿ ಪಾಕಿಸ್ತಾನ ಬಾಬರ್ ಆಜಂ ಇದ್ದಾರೆ. ಅಗ್ರ 10ರೊಳಗಿನ ಬೌಲರ್‌ಗಳ ಪಟ್ಟಿಯಲ್ಲಿ ಭಾರತದ ಆಟಗಾರನಾಗಿ ಮೊಹಮ್ಮದ್ ಸಿರಾಜ್ (3ನೇ ಸ್ಥಾನ) ಒಬ್ಬರೇ ಸ್ಥಾನ ಗಳಿಸಿದ್ದಾರೆ.

ಟಿ20 ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಫ್ಗಾನಿಸ್ತಾನದ ಲೆಗ್‌ಸ್ಪಿನ್ನರ್ ರಶೀದ್ ಖಾನ್ ಅಗ್ರಸ್ಥಾನಕ್ಕೆ ಮರಳಿದ್ದಾರೆ.

ದರ್ಶನ್ ಮತ್ತು ಧನುಷ್

ಮಾರ್ಷಲ್ ಆರ್ಟ್ಸ್: ದರ್ಶನ್ ಮಿಂಚು

ಬೆಂಗಳೂರು: ಕರ್ನಾಟಕದ ದರ್ಶನ್ ಶ್ರೀನಿವಾಸ್ ಅವರು ಇತ್ತೀಚೆಗೆ ಇತ್ತೀಚೆಗೆ ಥಾಯ್ಲೆಂಡ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಾರ್ಷಲ್ ಆರ್ಟ್ಸ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

55 ಕೆಜಿ ಸ್ಪರ್ಧೆಯ ಜೂನಿಯರ್ ವಿಭಾಗದ ಫೈನಲ್ ಬೌಟ್‌ನಲ್ಲಿ ದರ್ಶನ್ ಥಾಯ್ಲೆಂಡ್‌ನ ತೀರಾಪತ್ ಪುಯಾ ಯುಂಗ್ ಅವರನ್ನು ಸೋಲಿಸಿದರು.

63 ಕೆಜಿ ವಿಭಾಗದ ವೃತ್ತಿಪರ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಮೊಹಮ್ಮದ್ ಬೆಳ್ಳಿ ಹಾಗೂ ಮಹಿಳಾ ಸ್ಪರ್ಧಿ ಅನನ್ಯಾ (57 ಕೆಜಿ) ಬೆಳ್ಳಿ ಪದಕ ಗೆದ್ದರು. ಇವರೆಲ್ಲರೂ ಏಯ್ಟ್ ಲಿಂಬ್ಸ್ ಸಂಸ್ಥೆಯಲ್ಲಿ ತರಬೇತಿ ಪಡೆದಿದ್ದಾರೆ.

ಧನುಷ್‌ಗೆ ಚಿನ್ನ: ಧನುಷ್ ಶ್ರೀನಿವಾಸ್ ಅವರು ಇತ್ತೀಚೆಗೆ ಇಂಡೊನೇಷ್ಯಾದಲ್ಲಿ ನಡೆದ ವಿಶ್ವ ಮುವಾಯ್ ಥಾಯ್ ಕಿಕ್‌ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ 50 ಕೆಜಿ ಸೆಮಿ ಪ್ರೊ ಫೈಟ್ ಪಂದ್ಯದಲ್ಲಿ ಜಯಿಸಿ ಚಿನ್ನದ ಪದಕ ಗಳಿಸಿದ್ದರು.

ರೈಬಾಕಿನಾಗೆ ಜಯ

ಮಿಯಾಮಿ ಗಾರ್ಡನ್ಸ್, ಅಮೆರಿಕ (ಎಪಿ): ಎಲೆನಾ ರೈಬಾಕಿನಾ ಅವರು ಮಿಯಾಮಿ ಓಪನ್ ಟೆನಿಸ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ. ಇಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಕಜಕಸ್ತಾನದ ರೈಬಾಕಿನಾ 6-3, 6-0ರಿಂದ ಇಟಲಿಯ ಮಾರ್ಟಿನಾ ಟ್ರೆವಿಸನ್ ಅವರನ್ನು ಪರಾಭವಗೊಳಿಸಿದರು.

ಟೆನಿಸ್: ಪ್ರಜ್ವಲ್ ದೇವ್‌ಗೆ ಜಯ

ಐಟಿಎಫ್– ಮೈಸೂರು ಓಪನ್: ತವರಿನ ಅಂಗಳದಲ್ಲಿ ಸೊಗಸಿನ ಆಟ

• ಮೋಹನ್ ಕುಮಾರ ಸಿ.

ಮೈಸೂರು: ಭಾರತದ ಎಸ್.ಡಿ.ಪ್ರಜ್ವಲ್ ದೇವ್ ತವರಿನ ಅಂಗಳದಲ್ಲಿ ಸೊಗಸಿನ ಆಟವಾಡಿದರು. ಇಲ್ಲಿ ನಡೆಯುತ್ತಿರುವ ಐಟಿಎಫ್– ಮೈಸೂರು ಓಪನ್ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ)ನಲ್ಲಿ ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಪ್ರಜ್ವಲ್ ಅವರು 6-4, 7-5ರಲ್ಲಿ ಭಾರತದವರೇ ಆದ ಅಭಿನವ್ ಸಂಜೀವ್ ಷಣ್ಮುಗಂ ವಿರುದ್ಧ ಗೆದ್ದರು.

ಆಕರ್ಷಕ ಸರ್ವ್‌ಗಳಿಂದ ಎದುರಾಳಿಯನ್ನು ಕಾಡಿದ ಪ್ರಜ್ವಲ್ ದೇವ್ ಮೊದಲ ಸೆಟ್ ಅನ್ನು ಸುಲಭವಾಗಿ ಗೆದ್ದರು. ಎರಡನೇ ಸೆಟ್‌ನಲ್ಲಿ ಸಮಬಲದ ಹೋರಾಟದಲ್ಲಿ ಮೇಲುಗೈ ಸಾಧಿಸಿದ ಪ್ರಜ್ವಲ್ 1 ಗಂಟೆ 51ನೇ ನಿಮಿಷದಲ್ಲಿ ಗೆಲುವು ತಮ್ಮದಾಗಿಸಿಕೊಂಡರು. ಪ್ರೀ ಕ್ವಾರ್ಟರ್‌ನಲ್ಲಿ ವಿಷ್ಣುವರ್ಧನ್ ಅವರ ವಿರುದ್ಧ ಸೆಣಸಲಿದ್ದಾರೆ.

2015ರ ಮೈಸೂರು ಓಪನ್ ಚಾಂಪಿಯನ್ ರಾಮಕುಮಾರ್ ರಾಮನಾಥನ್ ವಿರುದ್ಧ ಪ್ರಜ್ವಲ್ ಅವರು ಸೆಣಸಬೇಕಿತ್ತು. ಗಾಯದ ಕಾರಣ ರಾಮ್ ಕುಮಾರ್ ಟೂರ್ನಿಯಿಂದ ಹೊರನಡೆದರು.

ಮನೀಷ್, ಸಿಂಗ್‌ಗೆ ನಿರಾಸೆ: ಟೂರ್ನಿಯ ಅಗ್ರಶ್ರೇಯಾಂಕಿತ ವಿಯೆಟ್ನಾಂನ ನಾಮ್ ಹೂವಾಂಗ್ ಲೀ ಅವರನ್ನು ಬ್ರಿಟನ್‌ನ ಜಾರ್ಜ್ ಲೋಫ್ಹಗೆನ್ 6-3, 6-4ರಿಂದ ಮಣಿಸಿದರು.

ಭಾರತದ ಮನಿಷ್ ಗಣೇಶ್ 1-6, 6-3ರಿಂದ ಅಮೆರಿಕದ ಆಲಿವರ್ ಕ್ರಾಫರ್ಡ್ ವಿರುದ್ಧ ಸೋತರು. ದಿಗ್ವಿಜಯ್ ಪ್ರತಾಪ್ ಸಿಂಗ್ 5-7, 3-6ರಿಂದ ಫ್ರಾನ್ಸ್‌ನ ಫ್ಲಾರೆಂಟ್ ಬಾಕ್ಸ್ ಮಣಿದರೆ, ಭಾರತದ ನಿಕಿ ಪೂಣಚ್ಚ ಅವರು 6-4, 2-6, 3-6ರಲ್ಲಿ ಉಕ್ರೇನ್ ವ್ಲಾಡಿಸ್ಲಾವ್ ಆರ್ಲವ್ ವಿರುದ್ಧ ಸೋತರು. ಭರವಸೆ ಮೂಡಿಸಿದ್ದ ಫರ್ದೀನ್ ಖಮರ್ ಭಾರತದವರೇ ಆದ ರಿಷಬ್ ಅಗರ್‌ವಾಲ್ ವಿರುದ್ಧ 1-6, 1-6ರಲ್ಲಿ ನಿರಾಸೆ ಅನುಭವಿಸಿದರು.

ಡಬಲ್ಸ್ ಪಂದ್ಯಗಳಲ್ಲಿ ಭಾರತದ ಇಶಾಕ್ ಇಕ್ಬಾಲ್- ಕರಣ್ ಸಿಂಗ್ ಜೋಡಿ 6-2, 6-3ರಿಂದ ಕಜಕಸ್ತಾನ ಗ್ರಿಗೋರಿ ಲೊಮಕಿನ್- ದಕ್ಷಿಣ ಕೊರಿಯಾದ ವೂಬಿನ್ ಶಿನ್ ಅವರನ್ನು ಮಣಿಸಿದರೆ, ಅಮೆರಿಕದ ಡಾಲಿ ಬ್ಲಾಂಚ್, ಎನ್.ಬೈಬೆಲ್ ಜೋಡಿ 6-0, 6-1ರಲ್ಲಿ ಭಾರತದ ಮನಿಷ್ ಗಣೇಶ್, ದೀಪಕ್ ಅನಂತರಾಮು ವಿರುದ್ಧ ಜಯ ಸಾಧಿಸಿತು.

ಮೈಸೂರಿನಲ್ಲಿ ಎಂಟಿಸಿ ಅಂಗಣದಲ್ಲಿ ನಡೆಯುತ್ತಿರುವ ಐಟಿಎಫ್– ಮೈಸೂರು ಓಪನ್ ಟೆನಿಸ್ ಟೂರ್ನಿಯ ಬುಧವಾರದ ಪಂದ್ಯದಲ್ಲಿ ಭಾರತದ ಎಸ್.ಡಿ.ಪ್ರಜ್ವಲ್ ದೇವ್ ಆಟದ ವೈಖರಿ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

'ಜನಾಂಗೀಯತೆ ಇನ್ನೂ ಜೀವಂತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾನು ಬಿಳಿಯನೂ ಅಲ್ಲ, ಕಪ್ಪು ಜನಾಂಗದವನೂ ಅಲ್ಲ. ಭಾರತೀಯನಾದ ನಾನು ಪ್ಯಾರಿಸ್‌ನಲ್ಲಿ ಬೆಳೆದೆ. ಆ ಸಂದರ್ಭದಲ್ಲಿ ಸಾಕಷ್ಟು ಜನಾಂಗೀಯ ತಾರತಮ್ಯ ಅನುಭವಿಸಿದೆ ಎಂದು ಫ್ರಾನ್ಸ್ ಫುಟ್‌ಬಾಲ್ ತಂಡದಲ್ಲಿ ಆಡಿದ್ದ ವಿಕಾಸ್ ದೊರಾಸೂ ಹೇಳಿದರು.

ಇಲ್ಲಿಯ 'ಅಲೈಯನ್ಸ್ ಫ್ರಾನ್ಸ್ ಡಿ ಬೆಂಗಳೂರು'ನಲ್ಲಿ ಮಂಗಳವಾರ ನಡೆದ ತಮ್ಮ ಕಾಮಿಕ್ ಕೃತಿ ' ಜೆ ಪರ್ಡ್ಸ್ ಪಾಸ್ ಲಾ ಬಾಲೆ' ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ಕೃತಿಯಲ್ಲಿ ಅವರು ತಮ್ಮ ಹೋರಾಟದ ಬದುಕಿನ ಕುರಿತ ಸಂಗತಿಗಳನ್ನು ದಾಖಲಿಸಿದ್ದಾರೆ.

ಫಿಫಾ ವಿಶ್ವಕಪ್‌ನಲ್ಲಿ ಪದಕ ವಿಜೇತ ತಂಡದಲ್ಲಿ ಆಡಿದ್ದ ಭಾರತ ಮೂಲದ ಏಕೈಕ ಆಟಗಾರ ಆಗಿದ್ದಾರೆ ವಿಕಾಸ್. 2006ರಲ್ಲಿ ಫ್ರಾನ್ಸ್ ತಂಡವು ಇಟಲಿ ಎದುರು ಸೋತು ರನ್ನರ್ಸ್ ಅಪ್ ಆಗಿತ್ತು. ಆಗ ಫ್ರಾನ್ಸ್ ತಂಡವನ್ನು ವಿಕಾಸ್ ಪ್ರತಿನಿಧಿಸಿದ್ದರು.

ವಿಕಾಸ್ ದೊರಾಸೂ

'ಬಾಲ್ಯದಿಂದಲೇ ನಾನು ಬಹಳ ತಾರತಮ್ಯ ಎದುರಿಸಿದ್ದೆ. ಅನವಶ್ಯಕವಾಗಿ ಪೊಲೀಸರು ತಡೆದು ನಿಲ್ಲಿಸುತ್ತಿದ್ದರು. ಏಷ್ಯಾ ಮೂಲದವನಾಗಿ ಪ್ಯಾರಿಸ್‌ನಲ್ಲಿ ಒಂದು ವಾಸಯೋಗ್ಯ ಮನೆ ಪಡೆಯುವುದು ಕಷ್ಟದ ಸ್ಥಿತಿ ಇತ್ತು. ಇಂದಿಗೂ ಏಷ್ಯಾದವರೂ ಈ ಪರಿಸ್ಥಿತಿ ಎದುರಿಸುತ್ತಿದ್ದಾರೆ' ಎಂದು ವಿಕಾಸ್ ಹೇಳಿದರು.

ವೇಟ್‌ಲಿಫ್ಟಿಂಗ್: ಪ್ರೀತಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದ ಪ್ರೀತಿ ದೇಶಮುಖ್ ಅವರು ಖೇಲೊ ಇಂಡಿಯಾ ಮಹಿಳೆಯರ ರಾಷ್ಟ್ರೀಯ ರ‍್ಯಾಂಕಿಂಗ್ ವೇಟ್‌ಲಿಫ್ಟಿಂಗ್ ಟೂರ್ನಿಯ ಕೊನೆಯ ದಿನ ಚಿನ್ನದ ಪದಕ ಜಯಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯ +87 ಕೆಜಿ ಜೂನಿಯರ್ ವಿಭಾಗದ ಸ್ಪರ್ಧೆಯಲ್ಲಿ ಅವರು ಒಟ್ಟು 163 ಕೆಜಿ ಭಾರ ಎತ್ತಿದರು. ತಮಿಳುನಾಡಿನ ಮೋಹನ ಪ್ರಿಯಾ (152 ಕೆಜಿ) ಮತ್ತು ಉತ್ತರಾಖಂಡದ ಮೇಘಾ ಚಾಂದ್ (147 ಕೆಜಿ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

ಸೀನಿಯರ್ ವಿಭಾಗದಲ್ಲಿ ಆರ್‌ಎಸ್‌ಪಿಬಿಯ ಅನ್ನಾ ಮರಿಯಾ ಎಂ.ಟಿ. (210 ಕೆಜಿ) ಚಿನ್ನ ಜಯಿಸಿದರು.

ಒಟ್ಟಾರೆ ಸೀನಿಯರ್ ವಿಭಾಗದಲ್ಲಿ ಆರ್‌ಎಸ್‌ಪಿಬಿ ತಂಡ ಚಾಂಪಿಯನ್ ಎನಿಸಿಕೊಂಡಿತು. ಕರ್ನಾಟಕ ಮೂರನೇ ಸ್ಥಾನ ಗಳಿಸಿತು.

ಜೂನಿಯರ್ ವಿಭಾಗದಲ್ಲಿ ಮಹಾರಾಷ್ಟ್ರ ತಂಡ ಮತ್ತು ಯೂತ್ ವಿಭಾಗದಲ್ಲಿ ಒಡಿಶಾ ತಂಡಗಳು ಚಾಂಪಿಯನ್ ಆಗಿ ಹೊರಹೊಮ್ಮಿದವು.

ರಾಷ್ಟ್ರೀಯ ತಂಡದ ಪರ 100ರ ಮೈಲುಗಲ್ಲು ತಲುಪಿದ ವಿಶ್ವದ ಮೂರನೇ ಆಟಗಾರ

ಅರ್ಜೆಂಟೀನಾ ಪರ ಮೆಸ್ಸಿ ಗೋಲುಗಳ 'ಶತಕ'

ಸ್ಯಾಂಟಿಯಾಗೊ ಡೆಲ್ ಎಸ್ಟೆರೊ, ಅರ್ಜೆಂಟೀನಾ (ಎಪಿ): ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ಅವರು ಅರ್ಜೆಂಟೀನಾ ರಾಷ್ಟ್ರೀಯ ತಂಡದ ಪರ 100 ಗೋಲುಗಳ ಮೈಲುಗಲ್ಲು ತಲುಪಿದ ಸಾಧನೆ ಮಾಡಿದ್ದಾರೆ.

ಮಂಗಳವಾರ ಇಲ್ಲಿ ಕ್ಯುರಾಸಾವೊ ಎದುರು ನಡೆದ ಅಂತರರಾಷ್ಟ್ರೀಯ ಸ್ನೇಹಪರ ಪಂದ್ಯದಲ್ಲಿ ಹ್ಯಾಟ್ರಿಕ್ ಗಳಿಸುವುದರೊಂದಿಗೆ ಮೆಸ್ಸಿ ಈ ಸಾಧನೆ ಮಾಡಿದರು. ವಿಶ್ವಕಪ್ ವಿಜೇತ ಅರ್ಜೆಂಟೀನಾ ಈ ಪಂದ್ಯದಲ್ಲಿ 7-0 ಗೋಲುಗಳಿಂದ ಕ್ಯುರಾಸಾವೊ ತಂಡವನ್ನು ಪರಾಭವಗೊಳಿಸಿತು.

35 ವರ್ಷದ ಮೆಸ್ಸಿ ಪಂದ್ಯದ 20ನೇ ನಿಮಿಷದಲ್ಲಿ ಮೊದಲ ಗೋಲು ದಾಖಲಿಸಿದರು. ಬಲಗಾಲಿನಿಂದ ಕಿಕ್ ಮಾಡಿ ಚೆಂಡನ್ನು ಗುರಿ ಸೇರಿಸಿದ ಅವರು 100 ಗೋಲುಗಳ ಮೈಲುಗಲ್ಲು ತಲುಪಿದರು. ಬಳಿಕ 33 ಮತ್ತು 37ನೇ ನಿಮಿಷಗಳಲ್ಲಿ ಗೋಲು ಗಳಿಸಿ ತಮ್ಮ ಒಟ್ಟು ಗೋಲು ಗಳಿಕೆಯನ್ನು 102ಕ್ಕೆ ಹೆಚ್ಚಿಸಿಕೊಂಡರು.

ಅರ್ಜೆಂಟೀನಾ ಪರ ಇನ್ನುಳಿದ ಗೋಲುಗಳನ್ನು ನಿಕೊಲಸ್ ಗೊಂಜಾಲೆಜ್ (23ನೇ ನಿಮಿಷ), ಎಂಜೊ ಫರ್ನಾಂಡೆಜ್ (35ನೇ ನಿ.), ಅಂಜೆಲ್ ಡಿ ಮರಿಯಾ (78ನೇ ನಿ.) ಮತ್ತು ಗೊಂಜಾಲೊ ಮೊಂಟಿಯೆಲ್ (87ನೇ ನಿ.) ದಾಖಲಿಸಿದರು.

ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ (122) ಮತ್ತು ಇರಾನ್ ಅಲಿ ದಯಿ (109) ರಾಷ್ಟ್ರೀಯ ತಂಡದ ಪರ 100ಕ್ಕಿಂತ ಹೆಚ್ಚು ಗೋಲು ಗಳಿಸಿದವರ ಪಟ್ಟಿಯಲ್ಲಿರುವ ಇನ್ನಿಬ್ಬರು ಆಟಗಾರರಾಗಿದ್ದಾರೆ.

ಚೆಂಡಿನೊಂದಿಗೆ ಮುನ್ನುಗ್ಗಿದ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ (ಎಡದಿಂದ ಎರಡನೆಯವರು)– ಎಎಫ್‌ಪಿ ಚಿತ್ರ

ಬ್ಯಾಡ್ಮಿಂಟನ್: ಸಿಂಧು, ಶ್ರೀಕಾಂತ್ ಮುನ್ನಡೆ

ಮ್ಯಾಡ್ರಿಡ್, ಸ್ಪೇನ್ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಮ್ಯಾಡ್ರಿಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಸುತ್ತಿಗೆ ಮುನ್ನಡೆದಿದ್ದಾರೆ.

ಬುಧವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಸಿಂಧು 21-10, 21-4ರಿಂದ ಸ್ವಿಟ್ಜರ್ಲೆಂಡ್‌ನ ಜೆಂಜಿರಾ ಸ್ಟೆಡಲ್‌ಮನ್ ಎದುರು ಸುಲಭವಾಗಿ ಗೆದ್ದರು.

ಪುರುಷರ ಸಿಂಗಲ್ಸ್ ಮೊದಲ ಪಂದ್ಯದಲ್ಲಿ ಶ್ರೀಕಾಂತ್ 21-11, 25-27, 23-21ರಿಂದ ಥಾಯ್ಲೆಂಡ್‌ನ ಸಿತ್ತಿಕೊಮ್ ಥಮಾಸಿನ್ ಅವರನ್ನು ಮಣಿಸಿದರು.

ಡಬಲ್ಸ್ ವಿಭಾಗದ ಪಂದ್ಯದ ಮಧ್ಯದಲ್ಲೇ ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ- ಚಿರಾಗ್ ಶೆಟ್ಟಿ ಜೋಡಿ ಹಿಂದೆ ಸರಿಯಿತು. ಇವರು ಜಪಾನ್‌ನ ಆಯಾತಿ ಎಂಡೊ- ಯುತಾ ಟಕೆಯಿ ಎದುರು ಕಣಕ್ಕಿಳಿದಿದ್ದರು. ಸಾತ್ವಿಕ್ ಅವರಿಗೆ ಮೊಣಕಾಲು ಗಾಯವಾದ ಕಾರಣ ಈ ನಿರ್ಧಾರ ತೆಗೆದುಕೊಂಡರು.

ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಆಕರ್ಷಿ ಕಶ್ಯಪ್ 12-21, 21-15, 21-18ರಿಂದ ಕೆನಡಾದ ಮಿಚೆಲ್ಲೆ ಲೀ ಎದುರು, ಅಸ್ಮಿತಾ ಚಲಿಹಾ 21-12, 22-20ರಿಂದ ಫ್ರಾನ್ಸ್‌ನ ಲಿಯೊನೈಸ್ ಹುಯೆಟ್ ಎದುರು ಗೆದ್ದರು.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಇನ್ನುಳಿದ ಹಣಾಹಣಿಗಳಲ್ಲಿ ಬಿ.ಸಾಯಿ ಪ್ರಣೀತ್ 21-16, 18-21, 21-12ರಿಂದ ಜೆಕ್ ಗಣರಾಜ್ಯದ ಜಾನ್ ಲೋಡಾ ಎದುರು, ಪ್ರಿಯಾಂಶು ರಾಜಾವತ್ 18-21, 21-16, 21-11ರಿಂದ ಡೆನ್ಮಾರ್ಕ್‌ನ ವಿಕ್ಟರ್ ಸ್ವೆಂಡ್ಸನ್ ಎದುರು, ಕಿರಣ್ ಜಾರ್ಜ್ 21-16, 21-14ರಿಂದ ಭಾರತದವರೇ ಆದ ಮಿಥುನ್ ಮಂಜುನಾಥ್ ವಿರುದ್ಧ ಗೆದ್ದರು.

ರಾಷ್ಟ್ರೀಯ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್

ಕರ್ನಾಟಕಕ್ಕೆ ಭರ್ಜರಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈತ್ರೇಯಿ ಪಾಲಸಮುದ್ರಂ ಗಳಿಸಿದ ಅಮೋಘ ಆರು ಗೋಲುಗಳ ನೆರವಿನಿಂದ ಕರ್ನಾಟಕ ಫುಟ್‌ಬಾಲ್ ತಂಡದವರು ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯದ ಆರಂಭ ಮಾಡಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ನಾಲ್ಕನೇ ಗುಂಪಿನ ಪಂದ್ಯದಲ್ಲಿ ಕರ್ನಾಟಕ 9–1ರಿಂದ ಗುಜರಾತ್ ತಂಡವನ್ನು ಸೋಲಿಸಿತು. ಮೈತ್ರೇಯಿ 7, 9, 25, 29, 45 + 2, 90 + 1ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಸೇರಿಸಿದರು. ಕಾವ್ಯಾ ಫಕೀರಸ್ವಾಮಿ (22, 45 + 1) ಮತ್ತು ಮೊನಾಲಿಸಾ ಮರಾಂಡಿ (21ನೇ ನಿ.) ಕರ್ನಾಟಕದ ಗೆಲುವಿಗೆ ಕಾಣಿಕೆ ನೀಡಿದರು. ಗುಜರಾತ್ ತಂಡದ ಏಕೈಕ ಗೋಲನ್ನು ಖುಷ್ಬು ಸರೋಜ್ (49ನೇ ನಿ.) ಅವರು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಮಣಿಪುರ ತಂಡವು 5–0 ಗೋಲುಗಳಿಂದ ಬಿಹಾರ್ ವಿರುದ್ಧ ಗೆದ್ದಿತು. ವಿಜೇತ ತಂಡದ ಪರ ಸಲಾಮ್ ರೀನಾ ರಾಯ್ ದೇವಿ (7, 40 ಮತ್ತು 52ನೇ ನಿ.) ಹ್ಯಾಟ್ರಿಕ್ ಗೋಲು ಹೊಡೆದರು. ಎಸ್. ಲಿಂಡಾ ಕೋಮ್ (45 + 3ನೇ ನಿ., 90 + 2ನೇ ನಿ.) ಎರಡು ಗೋಲು ದಾಖಲಿಸಿದರು. ಕರ್ನಾಟಕ ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಅಸ್ಸಾಂ ತಂಡದ ಎದುರು ಸೆಣಸಲಿದೆ.

ಕರ್ನಾಟಕದ ಮೈತ್ರೇಯಿ ಪಾಲಸಮುದ್ರಂ (ಎಡ) ಹಾಗೂ ಗುಜರಾತ್ ಆಟಗಾರ್ತಿಯರ ನಡುವೆ ಚೆಂಡಿಗಾಗಿ ಪೈಪೋಟಿ – ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಹಾಕಿ: ತೀತಮಾಡ ತಂಡಕ್ಕೆ ಗೆಲುವು

ನಾಪೋಕ್ಲು (ಕೊಡಗು ಜಿಲ್ಲೆ): ತೀತಮಾಡ ತಂಡದವರು ಇಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಜಯ ಸಾಧಿಸಿದರು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಾಚಂಗಡ ತಂಡದವರನ್ನು 1-0ಯಿಂದ ಮಣಿಸಿದರು.

ಮುಕ್ಕಾಟಿರ (ಹರಿಹರ) ತಂಡದವರು 5–3 ಗೋಲುಗಳಿಂದ ಮಂಡೇಟಿರ್ ತಂಡದವರನ್ನು ಸೋಲಿಸಿದರು. ರಾಷ್ಟ್ರೀಯ ಮಾರ್ಷಲ್ ಆರ್ಟ್ಸ್ ಚಾಂಪಿಯನ್ ಮಂಡೇಟಿರ ಭುವನ್ ಭೋಜಣ್ಣ ತಮ್ಮ ಕುಟುಂಬದ ತಂಡದಲ್ಲಿ ಗೋಲ್ ಕೀಪಿಂಗ್ ಮಾಡಿದರು.

ಮುಕ್ಕಾಟಿರ (ಕಡಗದಾಳು) 1-0ಯಿಂದ ಚೆಪ್ಪುಡಿರ ವಿರುದ್ಧ, ಕುಂಡ್ಯೋಳಂಡ 2-0ರಿಂದ ಪೆಬ್ಬೆಟ್ಟಿರ ವಿರುದ್ಧ, ಚೋಕಿರ ತಂಡದವರು 4-3ರಲ್ಲಿ ತಾತಂಡ ಎದುರು, ಪಳಂಗಂಡ 5-0ರಲ್ಲಿ ಅಪ್ಪುಮಣಿಯಂಡ ಎದುರು, ಅಮ್ಮಣಿಚಂಡ 3–0ರಲ್ಲಿ ನಂಬುಡಮಂಡ ಎದುರು ಗೆದ್ದವು.

'ಬಾಂಗ್ಲಾದಲ್ಲಿ ಪಾಕ್ ಪಂದ್ಯಗಳ ಆಯೋಜನೆ ಇಲ್ಲ'

ನವದೆಹಲಿ (ಪಿಟಿಐ): ಇದೇ ವರ್ಷ ಭಾರತದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡವು ತನ್ನ ಪಾಲಿನ ಪಂದ್ಯಗಳನ್ನು ಬಾಂಗ್ಲಾದೇಶದಲ್ಲಿ ಆಡುವುದಿಲ್ಲ. ಈ ಬಗ್ಗೆ ಸಭೆಯಲ್ಲಿ ಯಾವುದೇ ಮಾತುಕತೆ ಆಗಿಲ್ಲ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸ್ಪಷ್ಟಪಡಿಸಿದೆ.

ಈ ಬಾರಿ ಪಾಕಿಸ್ತಾನದ ಆತಿಥ್ಯದಲ್ಲಿ ಏಷ್ಯಾ ಕಪ್ ಟೂರ್ನಿ ನಡೆಯಲಿದೆ. ಅದರಲ್ಲಿ ಆಡಲು ಪಾಕಿಸ್ತಾನಕ್ಕೆ ಹೋಗುವ ಮಾತೇ ಇಲ್ಲ ಎಂದು ಈಚೆಗೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದರು. ಅದಕ್ಕೆ ಪ್ರತಿಕ್ರಿಯೆಯಾಗಿ ವಿಶ್ವಕಪ್‌ನಲ್ಲಿ ಆಡಲು ಭಾರತಕ್ಕೆ ತೆರಳುವುದಿಲ್ಲ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಹೇಳಿತ್ತು.

'ಪಿಸಿಬಿ ಮುಖ್ಯಸ್ಥ ನಜಾಮ್ ಸೇಥಿ ಮತ್ತು ಬಾಂಗ್ಲಾದೇಶ ಮಂಡಳಿಯ ನಜ್ಮುಲ್ ಹಸನ್ ಪಪೊನ್ ಅವರಿಬ್ಬರು ಭೇಟಿಯಾಗಿ ಮಾತನಾಡಿದ್ದರು. ಆದರೆ ಅದು ಅಧಿಕೃತವಾದ ಚರ್ಚೆಯಾಗಿರಲಿಲ್ಲ. ಅದರಲ್ಲಿ ಪಾಕ್ ತಂಡವು ಬಾಂಗ್ಲಾದೇಶದಲ್ಲಿ ಆಡುವ ಕುರಿತು ಯಾವುದೇ ಪ್ರಸ್ತಾವ ಇರಲಿಲ್ಲ' ಎಂದೂ ಐಸಿಸಿ ಸ್ಪಷ್ಟಪಡಿಸಿದೆ.

'ವಿಶ್ವಕಪ್ ಟೂರ್ನಿಯಲ್ಲಿ ಆಡಲು ಭಾರತಕ್ಕೆ ಪ್ರವಾಸ ಮಾಡುವ ಎಲ್ಲ ತಂಡಗಳಿಗೂ ವೀಸಾ ವ್ಯವಸ್ಥೆ ಮಾಡುವುದಾಗಿ ಬಿಸಿಸಿಐ ಈಗಾಗಲೇ ಸ್ಪಷ್ಟಪಡಿಸಿದೆ. ಒಂದೊಮ್ಮೆ ಪಾಕಿಸ್ತಾನ ತಂಡವು ಸೆಮಿಫೈನಲ್ ಅಥವಾ ಫೈನಲ್‌ಗೆ ಪ್ರವೇಶಿಸಿದರೆ, ಬಾಂಗ್ಲಾದಲ್ಲಿ ಆಡಲು ಇಷ್ಟಪಡುವುದೇ. ಅದು ಅಸಂಬದ್ಧವಾಗಲಿದೆ' ಎಂದು ಮಂಡಳಿಯ ಸದಸ್ಯರೊಬ್ಬರು ಹೇಳಿದ್ದಾರೆ.

ಜಿಪಿಬಿಎಲ್: ಹರಾಜು ಪ್ರಕ್ರಿಯೆಯಲ್ಲಿರುವ ಎಲ್ಲರಿಗೂ ₹ 25 ಸಾವಿರ ಖಚಿತ

ಬೆಂಗಳೂರು: ಎರಡನೇ ಆವೃತ್ತಿಯ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್‌ನ (ಜಿಪಿಬಿಎಲ್) ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಎಲ್ಲ ಆಟಗಾರರಿಗೂ ಕನಿಷ್ಠ ಶುಲ್ಕ ನೀಡುವುದಾಗಿ ಟೂರ್ನಿಯ ಆಯೋಜಕರು ಬುಧವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಪಿಬಿಎಲ್‌ನ ಹರಾಜು ಪ್ರಕ್ರಿಯೆಯು ಆಗಸ್ಟ್‌ನಲ್ಲಿ ನಿಗದಿಯಾಗಿದೆ.

'30 ಮಂದಿ ಅಂತರರಾಷ್ಟ್ರೀಯ ಆಟಗಾರರು ಸೇರಿದಂತೆ 150 ಮಂದಿ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಯಾವುದೇ ಆಟಗಾರ ಅಥವಾ ಆಟಗಾರ್ತಿಯನ್ನು ಯಾವುದೇ ತಂಡವು ತನ್ನದಾಗಿಸಿಕೊಳ್ಳದಿದ್ದರೂ ಅವರು ಕನಿಷ್ಠ ₹ 25,000 ಪಡೆಯಲಿದ್ದಾರೆ. ಪ್ರತಿಭಾನ್ವಿತ ಆಟಗಾರರನ್ನು ಪ್ರೋತ್ಸಾಹಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಲೀಗ್ ಆಯುಕ್ತ ಪ್ರಶಾಂತ್ ರೆಡ್ಡಿ ತಿಳಿಸಿದ್ದಾರೆ.

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ಶಿಶ್ನ ಚಿಕ್ಕಾದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ 1 ಆಯುರ್ವೇದಿಕ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದದಷ್ಟು ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ. ಯಾವುದೇ ಅಡ್ಡಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.

ಸಂಪರ್ಕಿಸಿ

02262676816